

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 30 ಭಾನುವಾರ 2023

ಸಂಪುಟ: 44 | ಸಂಚಿಕೆ: 105 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4



ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸಂಚರಿಸಿ ಸುರಕ್ಷತಾ ಕ್ರಮಗಳ ಪರಿಶೀಲಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ನವೆಂಬರ್‌ನಲ್ಲಿ 158.81 ಕೋಟಿಯ ಹೆಚ್ಚುವರಿ ಕಾಮಗಾರಿ



ಮಂಡ್ಯ/ಶ್ರೀರಂಗಪಟ್ಟಣ, ಜು.29– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಹೆಚ್ಚುವರಿಯಾಗಿ 158.81 ಕೋಟಿ ವೆಚ್ಚದ ಕಾಮಗಾರಿ ಕೈಗೊಳ್ಳಲು ಅಧಿಕಾರಿಗಳು ಪ್ರಸ್ತಾವನೆ ಸಲ್ಲಿಸಿದ್ದು, ನವೆಂಬರ್ ನಂತರ ಕಾಮಗಾರಿ ಆರಂಭವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಇಂದು ಮಂಡ್ಯ ಹೊರವಲಯದ ಉಮ್ಮಡಹಳ್ಳಿ ಗೇಟ್ ಬಳಿ ಹಾಗೂ ಶ್ರೀರಂಗಪಟ್ಟಣ ತಾಲೂಕು ಗಣಂಗೂರು ಟೋಲ್ ಪ್ಲಾಜಾದಲ್ಲಿ ಎಕ್ಸ್‌ಪ್ರೆಸ್ ವೇ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಕ್ಸ್‌ಪ್ರೆಸ್ ವೇನಲ್ಲಿ 158.81 ಕೋಟಿ ವೆಚ್ಚದ ಕಾಮಗಾರಿಗೆ ಮಾತ್ರವಲ್ಲದೇ, 151 ಕೋಟಿ ರೂ. ವೆಚ್ಚದ ಸರ್ವೀಸ್ ರಸ್ತೆ ಕಾಮಗಾರಿಗೂ ಕೂಡ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು. ಎಕ್ಸ್‌ಪ್ರೆಸ್ ವೇ ಕಾಮಗಾರಿ ಅವೈಜ್ಞಾನಿಕವಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಈ ರಸ್ತೆಯಲ್ಲಿ ಕೆಲವು ಸೌಕರ್ಯಗಳನ್ನು ಮಾಡಬೇಕಿದೆ. ● 9ನೇ ಪುಟಕ್ಕೆ

ಸಿಎಂ ಆಗಮನಕ್ಕೆ ಕೆಲಗಂಟೆ ಮುನ್ನ ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ: ಉದಯೋನ್ಮುಖ ನಟ ಸಾವು


ಲೋಕೇಶ್

ಮಂಡ್ಯ, ಜು.29– ಸಿಎಂ ಸಿದ್ದರಾಮಯ್ಯ ಅವರು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಪರಿಶೀಲಿಸಲು ಕೆಲ ಗಂಟೆಗಳ ಮುನ್ನಾ, ಈ ರಸ್ತೆಯಲ್ಲಿ ನಡೆದ ಅಪಘಾತದಲ್ಲಿ ಗುಂಡ್ಲುಪೇಟೆ ತಾಲೂಕು ದೊಡ್ಡತುಪ್ಪೂರು ಗ್ರಾಮದವರಾದ ಉದಯೋನ್ಮುಖ ಚಲನಚಿತ್ರ ಕಲಾವಿದ ಲೋಕೇಶ್(39) ಸಾವನ್ನಪ್ಪಿದ್ದಾರೆ.

ಇತ್ತೀಚೆಗೆ ತಾನೇ ಖರೀದಿಸಿದ್ದ ಹೊಸ ಬೈಕ್‌ನಲ್ಲಿ ಕಳೆದ ರಾತ್ರಿ 2.30ರಲ್ಲಿ ಬೆಂಗಳೂರಿನಿಂದ ಹೊರಟ ಅವರು ಇಂದು ಮುಂಜಾನೆ 5.15ರ ಸುಮಾರಿಗೆ ರಸ್ತೆ ಬದಿ ನಿಂತಿದ್ದ ಅಪರಿಚಿತ ವಾಹನಕ್ಕೆ ಡಿಕ್ಕಿ ಹೊಡೆದು ಸಾವನ್ನಪ್ಪಿದ್ದಾರೆ. ಇಂದು ಮುಂಜಾನೆ 5.20ಕ್ಕೆ ಅಪರಿಚಿತ ವ್ಯಕ್ತಿ ಅಪಘಾತದಲ್ಲಿ ಸಾವನ್ನಪ್ಪಿದ್ದಾನೆ ಎಂದು ಮಂಡ್ಯ ● 9ನೇ ಪುಟಕ್ಕೆ

ನಾಲೆಗೆ ಕಾರು ಉರುಳಿ ನಾಲ್ವರು ಮಹಿಳೆಯರು ಜಲಸಮಾಧಿ



ಅರಕೆರೆ ಬಳಿ ದುರಂತ



ತಿ.ನರಸೀಪುರ/ಶ್ರೀರಂಗಪಟ್ಟಣ, ಜು.29– ವಿಶ್ವೇಶ್ವರಯ್ಯ ನಾಲೆಗೆ ಕಾರು ಉರುಳಿಬಿದ್ದು ಚಾಲಕ ಸಾವನ್ನಪ್ಪಿದ ಘಟನೆ ಮಾಸುವ ಮುನ್ನವೇ ಶನಿವಾರ ರಾತ್ರಿ ಕಾರೊಂದು ನಾಲೆಗೆ ಉರುಳಿ ಬಿದ್ದು ತಾಯಿ–ಮಗಳು ಸೇರಿದಂತೆ ನಾಲ್ವರು ಜಲಸಮಾಧಿಯಾಗಿದ್ದಾರೆ. ಈ ದುರಂತ ಶ್ರೀರಂಗಪಟ್ಟಣ ತಾಲೂಕು ಅರಕೆರೆ ಸಮೀಪದ ಗಾಮನಹಳ್ಳಿ ಬಳಿ ಸಂಭವಿಸಿದೆ. ತಿ.ನರಸೀಪುರ ತಾಲೂಕಿನ ಗೊರವಿನಹಳ್ಳಿ ನಿವಾಸಿ ಬಸವರಾಜು ಅವರ ಪತ್ನಿ ರೇಖಾ(35), ಪುತ್ರಿ ಸಂಜನಾ(18), ಮಲ್ಲೇಶ್ ಎಂಬುವರ ಪತ್ನಿ ಮಮತಾ(40) ಮತ್ತು ಇವರ ಸಂಬಂಧಿಕರಾದ ಗಾಮನಹಳ್ಳಿ ಗ್ರಾಮದ ಮಹದೇವಮ್ಮ(55) ದುರಂತ ಸಾವಿ ಗೀಡಾಗಿದ್ದಾರೆ.

ನಾಳೆ (ಜು.30) ಆದಿಚುಂಚನ ಗಿರಿ ಕಾಲಭೈರವೇಶ್ವರ ದೇವಸ್ಥಾನದಲ್ಲಿ ಹರ ಸೇವೆ ಪೂಜೆ ಇದ್ದ ಕಾರಣ, ಈ ನಾಲ್ವರು ಕಾರಿನಲ್ಲಿ ದೊಡ್ಡ ಮಲಗೋಡು ಗ್ರಾಮಕ್ಕೆ ತೆರಳಿ, ಅಲ್ಲಿ ಸಂಬಂಧಿಕರ ಮನೆಯಲ್ಲಿ ವಾಸ್ತವ್ಯ ಹೂಡಿ ನಾಳೆ (ಭಾನುವಾರ) ಮುಂಜಾನೆಯೇ ದೇವಸ್ಥಾನಕ್ಕೆ ತೆರಳಲು ನಿರ್ಧರಿಸಿ, ಪ್ರಯಾಣ ಬೆಳೆಸಿದ್ದರು ಎನ್ನಲಾಗಿದೆ. ಗೊರವನಹಳ್ಳಿಯಿಂದ ಸ್ಕೋಡಾ ಕಾರಿನಲ್ಲಿ ಹೊರಟವರು ಗಾಮನಹಳ್ಳಿಯಲ್ಲಿ ಸಂಬಂಧಿಕರಾದ ಮಹದೇವಮ್ಮ ಅವರನ್ನು ಹತ್ತಿಸಿಕೊಂಡು ದೊಡ್ಡ ಮಲಗೂಡು ಗ್ರಾಮಕ್ಕೆ ತೆರಳುತ್ತಿದ್ದಾಗ ಈ ದುರಂತ ಸಂಭವಿಸಿದೆ. ದುರಂತದಲ್ಲಿ ಸಾವನ್ನಪ್ಪಿದ ಮಮತಾ ಅವರ ಪುತ್ರ ಮನೋಜ್(25) ಈ ಕಾರನ್ನು ಚಾಲನೆ ಮಾಡುತ್ತಿದ್ದ. ತಿ.ನರಸೀಪುರ ತಾಲೂಕಿಗೆ ಹೊಂದಿಕೊಂಡಂತಿರುವ ಮಂಡ್ಯ ಜಿಲ್ಲೆ ಅರಕೆರೆ ಸಮೀಪದ ಗಾಮನಹಳ್ಳಿ ಬಳಿ ಕಾರು, ಚಾಲಕನ ನಿಯಂತ್ರಣ ತಪ್ಪಿ ಎಡ ಬದಿ ನಾಲೆಗೆ ಉರುಳಿ ಬಿದ್ದಿದೆ. ● 9ನೇ ಪುಟಕ್ಕೆ

ಕಷ್ಟವೋ... ಸುಖವೋ ಮರಿಯಂತೂ ಹೊಡೆಯುತ್ತೇವೆ; ಅದ್ದೂರಿ ಊಟ ಹಾಕಿದರಾಯಿತು...!

- ಹಣಕಾಸಿನ ತೊಂದರೆ ಇದ್ದರೂ ಅದ್ದೂರಿ ದಸರಾ ಆಚರಿಸುವ ಸಂಬಂಧ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಸ್ವಾರಸ್ಯಕರ ವಿವರಣೆ
- ದಸರಾ ಪ್ರಾಧಿಕಾರ ರಚನೆ ಪ್ರಸ್ತಾಪ ಸದ್ಯಕ್ಕೆ ಸರ್ಕಾರದ ಮುಂದಿಲ್ಲ



ಮೈಸೂರು, ಜು.29(ಬಿಎಲ್‌ಯು)– ಸರ್ಕಾರಕ್ಕೆ ಹಣಕಾಸಿನ ತೊಂದರೆ ಇದ್ದರೂ ಈ ಬಾರಿ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ. ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಹಣಕಾಸಿನ ತೊಂದರೆ ಇದೆ ನಿಜ. ಹಾಗಂತ ಹಬ್ಬ ಮಾಡದೇ ಇರಲು ಸಾಧ್ಯವಿಲ್ಲ. ನೆಂಟರಿಷ್ಟರನ್ನು ಕರೆದು ಅರ್ಧ ಊಟ ಮಾಡಿ ಎಂದೇಳಲು ಸಾಧ್ಯವೇ? ಎಂದು ಪ್ರಶ್ನಿಸಿದರು.

ಕಷ್ಟವೋ, ಸುಖವೋ ಮರಿಯಂತೂ ಹೊಡೆಯುತ್ತೇವೆ. ಅದ್ದೂರಿಯಾಗಿ ಊಟ ಹಾಕಿದರಾಯಿತು. ಹಾಗೆಯೇ ಎಲ್ಲರನ್ನು ಕರೆದು ದಸರಾ ಹಬ್ಬವನ್ನು ಅದ್ದೂರಿಯಾಗಿ ಆಚರಣೆ ಮಾಡೋಣ ಎಂದು ಡಾ.ಮಹದೇವಪ್ಪ ಹೇಳಿದರು. ಕೋವಿಡ್‌ನಿಂದ ಜನರು ತತ್ತರಿಸಿದ್ದರು. ಆದರೆ ● 9ನೇ ಪುಟಕ್ಕೆ

ಕಬಿನಿಯಿಂದ 10 ದಿನಗಳವರೆಗೆ ಕಾಲುವೆಗಳಿಗೆ ನೀರು ಹರಿವು



ಮೈಸೂರು,ಜು.29–ಕಾವೇರಿ ಜಲಾನಯನ ಪ್ರದೇಶದಲ್ಲಿ ಮುಂಗಾರು ಮಳೆಯು ಜುಲೈ ಮಾಹೆಯಲ್ಲಿ ಪ್ರಾರಂಭವಾಗಿದ್ದು, ಮೈಸೂರು–ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಕಬಿನಿ ಜಲಾಶಯದ ಅಚ್ಚುಕಟ್ಟು ಪ್ರದೇಶದಲ್ಲಿನ ಮೈಸೂರು ಚಾಮರಾಜನಗರದ ಜಿಲ್ಲಾ ವ್ಯಾಪ್ತಿಯ ನಗರ, ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳ ಜನ–ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಕೆರೆ ಕಟ್ಟೆ ತುಂಬಿಸಲು ನಾಲೆಗಳ ಮತ್ತು ನದಿ ಮುಖಾಂತರ ಕುಡಿಯುವ ನೀರು ಪೂರೈಸಲು ಉದ್ದೇಶಿಸಿದ್ದು, ಜುಲೈ 24ರಿಂದ ಆಗಸ್ಟ್ 2ರವರೆಗೆ 10 ದಿನಗಳು ನೀರು ಹರಿಸಲು ಸರ್ಕಾರ ನಿರ್ದೇಶಿಸಿದೆ ಎಂದು ಕಬಿನಿ ಮತ್ತು ವರುಣಾ ನಾಲಾ ವೃತ್ತದ ಅಧೀಕ್ಷಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ಯಾಕೇಜ್ ಟೂರ್ ಏಜೆಂಟ್‌ರಂತೆ ಕೆಲಸ ಮಾಡುತ್ತಿರುವ ಶಾಸಕ ಶ್ರೀವತ್ಸ!

ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್‌ಕುಮಾರ್ ವ್ಯಂಗ್ಯ



ಪ್ರದೀಪ್‌ಕುಮಾರ್


ಮೈಸೂರು, ಜು.29(ಬಿಎಲ್‌ಯು)– ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಕ್ಷೇತ್ರದ ಜನರ ಸಮಸ್ಯೆಗಳನ್ನು ಪರಿಹರಿಸದೆ ಪ್ಯಾಕೇಜ್ ಟೂರ್ ಏಜೆಂಟ್‌ರಂತೆ ಕೆಲಸ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಮುಖಂಡರೂ ಆದ ಮಾಜಿ ಕಾರ್ಪೊರೇಟರ್ ಎಂ.ಪ್ರದೀಪ್ ಕುಮಾರ್ ಕಿಡಿಕಾರಿದ್ದಾರೆ.

ವಿಧಾನಸಭಾ ಚುನಾವಣೆ ಕಳೆದು 3 ತಿಂಗಳಾದರೂ ಶ್ರೀವತ್ಸ ಅವರು ಈ ತನಕ ಕ್ಷೇತ್ರದ ಯಾವುದೇ ವಾರ್ಡ್‌ಗಳಿಗೆ ಭೇಟಿ ನೀಡಿಲ್ಲ. ಜನರ ಕುಂದು ಕೊರತೆ ಆಲಿಸದ ಶ್ರೀವತ್ಸ, ತಮ್ಮ ಆಪ್ತರು ಹಾಗೂ ಮುಖಂಡರಿಗೆ ವಿಧಾನಸೌಧ ಹಾಗೂ ದೇವಸ್ಥಾನ ತೋರಿಸುವ ಪ್ಯಾಕೇಜ್ ಟೂರ್ ಏಜೆಂಟ್‌ರಂತೆ ಕೆಲಸ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶ್ರೀವತ್ಸ ಅವರು ಕ್ಷೇತ್ರದ ಜನರಿಗೆ ಪರಿಚಯ ಇಲ್ಲದಿದ್ದರೂ ಹೊಸಬರಿಗೆ ಮತದಾರರು ಅವಕಾಶ ಮಾಡಿಕೊಟ್ಟಿದ್ದಾರೆ. ಇದನ್ನು ಅರಿತು ಶ್ರೀವತ್ಸ ಅವರು ಕ್ಷೇತ್ರದ ಅಭಿವೃದ್ಧಿ ಬಗ್ಗೆ ಗಮನಹರಿಸಬೇಕು. ಅದು ಬಿಟ್ಟು ಪ್ಯಾಕೇಜ್ ಟೂರ್ ಏಜೆಂಟ್‌ರಂತೆ ಕೆಲಸ ಮಾಡುವುದಲ್ಲ ಎಂದು ಪ್ರದೀಪ್ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಕಾಂಗ್ರೆಸ್ ಸರ್ಕಾರ ಶಕ್ತಿ ಯೋಜನೆಯಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಿದೆ. ವಿಧಾನಸೌಧ ನೋಡಲು ಅಥವಾ ದೇವಸ್ಥಾನಕ್ಕೆ ಹೋಗಲು ಜನರು ಬಸ್‌ಗಳಲ್ಲಿ ಹೋಗುತ್ತಾರೆ. ಈ ಹಿನ್ನೆಲೆ ಶ್ರೀವತ್ಸ ಅವರು ಕ್ಷೇತ್ರದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಲಿ ಎಂದು ಪ್ರದೀಪ್‌ಕುಮಾರ್ ಸಲಹೆ ನೀಡಿದ್ದಾರೆ.

ಆ.2ರಿಂದ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ



ಮೈಸೂರು, ಜು.29– ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ಸೋಸಲೆ ವ್ಯಾಸರಾಜ ಮಠದಲ್ಲಿ ಅಧಿಕ ಶ್ರಾವಣ ಮಾಸದ ಪ್ರಯುಕ್ತ ಪ್ರತಿನಿತ್ಯ ಸಂಜೆ 6ರಿಂದ 7ರವರೆಗೆ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞವನ್ನು ಏರ್ಪಡಿಸಲಾಗಿದೆ. ಇದರ ಅಂಗವಾಗಿ ಆ.2ರಿಂದ 6ರವರೆಗೆ 'ಅರಣ್ಯ ಕಾಂಡ' ಪ್ರವಚನವನ್ನು ವಿದ್ವಾನ್ ಬಿದರಹಳ್ಳಿ ಕೃಷ್ಣಾಚಾರ್ಯ, ಆ.7ರಿಂದ 11ರವರೆಗೆ ''ಕಿಷ್ಕಿಂದಾ ಕಾಂಡ'' ಪ್ರವಚನವನ್ನು ವಿದ್ವಾನ್ ಮಾಧವಾಚಾರ್ಯರು ನಡೆಸಿಕೊಡಲಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 9483016612 ಇಲ್ಲವೆ 9901814668 ಸಂಪರ್ಕಿಸಬಹುದು.



ಮೈಸೂರಿನ ಶಾರದಾವಿಲಾಸ ಕಾನೂನು ಕಾಲೇಜಲ್ಲಿ ನಡೆದ ಅಣುಕು ನ್ಯಾಯಾಲಯ ಕಾರ್ಯಕ್ರಮದಲ್ಲಿ ವಿದ್ಯಾವಿಕಾಸ ಕಾನೂನು ಕಾಲೇಜಿನ ಪ್ರಾಂಶುಪಾಲ ಹಾಗೂ ಸಂಪನ್ಮೂಲ ವ್ಯಕ್ತಿ ಡಾ.ಸಂಜಿತ್ ಅವರನ್ನು ಸಂಸ್ಥೆಯ ಗೌರವ ಕಾರ್ಯದರ್ಶಿ ಚಂದ್ರಶೇಖರ್ ಸನ್ಮಾನಿಸಿದರು. ಚಿತ್ರದಲ್ಲಿ ಹಿರಿಯ ವಕೀಲ ಎಸ್.ಲೋಕೇಶ್, ಕಾಲೇಜಿನ ಪ್ರಾಂಶುಪಾಲರಾದ ಸಿ.ವಾಣಿ, ಸಹಾಯಕ ಪ್ರಾಧ್ಯಾಪಕರಾದ ಭಾಗ್ಯಮ್ಮ, ಗೀತಾ, ಕುಮಾರಿ ಶಹನಾಜ್ ಇತರರನ್ನು ಕಾಣಬಹುದು.

ಮೈಸೂರಲ್ಲಿ ನಾಳೆ ನೇರ ಸಂದರ್ಶನ

ಮೈಸೂರು,ಜು.29–ಮೈಸೂರು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಚಾಮರಾಜನಗರದಲ್ಲಿನ ಬದನಕುಪ್ಪೆ ಕೆಲ್ಲಂಬಳಿ ಕೈಗಾರಿಕಾ ಪ್ರದೇಶದಲ್ಲಿನ ಪ್ರಮುಖ ಕಂಪನಿಯಾದ ಆದಿತ್ಯ ಬಿರ್ಲಾ ಗ್ರೂಪ್ ಗ್ರಾಸಿಮ್‌ನಲ್ಲಿ ಖಾಲಿ ಇರುವ ಡಿಪ್ಲೊಮಾ ಇನ್ ಮೆಕ್ಯಾನಿಕಲ್ 24 ಹುದ್ದೆ, ಡಿಪ್ಲೊಮಾ ಇನ್ ಕೆಮಿಕಲ್ 11 ಹುದ್ದೆ ಮತ್ತು ಡಿಪ್ಲೊಮಾ ಇನ್ ಪೆಟ್ರೋಕೆಮಿಕಲ್ 7 ಹುದ್ದೆಗಳಿಗೆ ಜು.31ರಂದು ಬೆಳಗ್ಗೆ 10 ಗಂಟೆಗೆ ಜೆಎಸ್‌ಎಸ್ ಪಾಲಿಟೆಕ್ನಿಕ್ ಜೆ.ಸಿ. ಕ್ಯಾಂಪಸ್‌ನಲ್ಲಿ ನೇರ ಸಂದರ್ಶನವನ್ನು ಏರ್ಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಸಹಾಯಕ ನಿರ್ದೇಶಕರನ್ನು ಹಾಗೂ ಕಚೇರಿ ವೇಳೆಯಲ್ಲಿ ದೂ.ಸಂ 9986263695 ಅನ್ನು ಸಂಪರ್ಕಿಸಬಹುದು.

ಜನರಲ್ ಕೆ.ಎಸ್.ತಿಮ್ಮಯ್ಯ ನಗದು ಪ್ರಶಸ್ತಿಗೆ ಅರ್ಜಿ



ಮೈಸೂರು,ಜು.29– ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಗರಿಷ್ಠ ಅಂಕ ಪಡೆದ ಕರ್ನಾಟಕದ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ ಜನರಲ್ ಕೆ.ಎಸ್.ತಿಮ್ಮಯ್ಯ ನಗದು ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಶುಲ್ಕರಹಿತ ಅರ್ಜಿಗಳನ್ನು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಕಚೇರಿಯಿಂದ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಅ.30ರೊಳಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಕಚೇರಿಗೆ ಸಲ್ಲಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸೈನಿಕ ನಿರ್ದೇಶನಾಲಯ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ದೂ.ಸಂ: 08212–2425240 ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂ.ಮರಿಸ್ವಾಮಿ ಮೈಸೂರು ಜಿಲ್ಲಾ ಪಿಯು ಉಪನಿರ್ದೇಶಕ



ಮೈಸೂರು ಜಿಲ್ಲಾ ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆಯ ನೂತನ ಉಪ ನಿರ್ದೇಶಕರಾಗಿ ಎಂ.ಮರಿಸ್ವಾಮಿ ಪ್ರಭಾರ ಉಪ ನಿರ್ದೇಶಕರಾದ ಎಂ.ಪಿ.ನಾಗಮ್ಮ ಅವರಿಂದ ಅಧಿಕಾರ ಸ್ವೀಕರಿಸಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.29– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದ (ಸದಸ್ಯರ ಮಕ್ಕಳು) ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪುರಸ್ಕಾರ ನೀಡಲು ಬ್ರಾಹ್ಮಣ ಸಂಘ ಹೆಬ್ಬಾಳು–ವಿಜಯನಗರ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಆ.15ರೊಳಗಾಗಿ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ಸಂಪರ್ಕಿಸಿ: ಆರ್.ಮಂಜುನಾಥ್ (ಅಧ್ಯಕ್ಷರು)–9243529365, ಗುರುಪ್ರಸಾದ್ ದೇಸಾಯಿ (ಉಪಾಧ್ಯಕ್ಷರು)–988671 3359, ಎಂ.ಎನ್.ಶ್ರೀನಿವಾಸ್ ಜೋಯಿಸ್ (ಕಾರ್ಯದರ್ಶಿ)– 7892896565, ಬಿ.ಎನ್.ಮುರಳೀಶ್ (ಸಹಕಾರ್ಯದರ್ಶಿ)– 9035011459, ವಿ.ರಘುನಾಥ್ (ಖಜಾಂಚಿ)–6363270792.

ಪಾಲಿಕೆ ವಲಯ ಕಚೇರಿ–1ರ ಸ್ವಂತ ಕಟ್ಟಡ ಉದ್ಘಾಟನೆ



ಮೈಸೂರು,ಜು.29(ಆರ್‌ಕೆ)– ಮೈಸೂರಿನ ಕೆ.ಆರ್.ಮೊಹಲ್ಲಾದ ಉತ್ತರಾಧಿ ಮಠದ ರಸ್ತೆಯ 5ನೇ ಕ್ರಾಸ್‌ನಲ್ಲಿ ಮೈಸೂರು ಮಹಾ ನಗರಪಾಲಿಕೆ ವಲಯ ಕಚೇರಿ–1ರ ನೂತನ ಕಟ್ಟಡವನ್ನು ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಮೇಯರ್ ಶಿವಕುಮಾರ್ ಶನಿವಾರ ಉದ್ಘಾಟಿಸಿದರು.

ಮೂರು ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಪಾಲಿಕೆ ವಲಯ ಕಚೇರಿ–1ರ ಸ್ವಂತ ಕಟ್ಟಡದ ನೆಲಮಹಡಿಯಲ್ಲಿ ವಾಹನ ನಿಲುಗಡೆ, ಮೊದಲ ಮತ್ತು ಎರಡನೇ ಮಹಡಿಯಲ್ಲಿ ಇಂಜಿನಿಯರಿಂಗ್, ರೆವಿನ್ಯೂ, ಜನನ–ಮರಣ ಪತ್ರ ವಿಭಾಗ, ವಿದ್ಯುತ್ ಬಿಲ್ಲಿಂಗ್ ವಿಭಾಗ ಮತ್ತು ಕರ್ನಾಟಕ ಬಸ್ ಸೆಂಟರ್ ಕೌಂಟರ್‌ಗಳಿಗೆ ಅವಕಾಶ ಕಲ್ಪಿಸಲಾಗಿದೆ. ಆಗಸ್ಟ್ 2ನೇ ವಾರದೊಳಗೆ ನೂತನ ಕಟ್ಟಡಕ್ಕೆ ಕಚೇರಿಯ ಎಲ್ಲಾ ಘಟಕಗಳನ್ನು ಸ್ಥಳಾಂತರಿಸಲಾಗುವುದು.

ಪ್ರಸ್ತುತ ಅಗ್ರಹಾರ ಬಳಿಯ ಅಕ್ಕನ ಬಳಗ ಶಾಲೆಯ ಪಕ್ಕದ ಪಾರ್ಕಿನಲ್ಲಿ ಹಳೇ ಕಟ್ಟಡದಲ್ಲಿ ಮೈಸೂರು ಮಹಾನಗರ ಪಾಲಿಕೆ ಕಚೇರಿಯು ಕಾರ್ಯ ನಿರ್ವಹಿಸುತ್ತಿದೆ. ಆದರೆ ಅಲ್ಲಿ ವಲಯಾಧಿಕಾರಿ, ಅಭಿವೃದ್ಧಿ ಅಧಿಕಾರಿ, ಅಸಿಸ್ಟೆಂಟ್ ರೆವಿನ್ಯೂ ಆಫೀಸರ್ ಇಂಜಿನಿಯರ್‌ಗಳು ಕಾರ್ಯ ನಿರ್ವಹಿಸಲು ಸೂಕ್ತ ಸ್ಥಳಾವಕಾಶವಿಲ್ಲದೆ ಸಾರ್ವಜನಿಕರಿಗೂ ಮೂಲಸೌಕರ್ಯದ ಕೊರತೆ ಉಂಟಾಗಿತ್ತು. ಉಪಮೇಯರ್ ಡಾ.ಜಿ.ರೂಪಾ, ವಾರ್ಡಿನ ಕಾರ್ಪೊರೇಟರ್ ಬಿ.ವಿ.ಮಂಜುನಾಥ್, ವರ್ಕ್ಸ್ ಕಮಿಟಿ ಅಧ್ಯಕ್ಷೆ ಶಾಂತಕುಮಾರಿ, ನಗರಪಾಲಿಕೆ ಸದಸ್ಯರಾದ ಶೋಭಾ ಸುನೀಲ್, ಮಾವಿರಾಮಪ್ರಸಾದ್, ಛಾಯಾದೇವಿ, ಸೌಮ್ಯ ಉಮೇಶ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ವಲಯಾಧಿಕಾರಿ ಮಂಜುನಾಥ್ ರೆಡ್ಡಿ, ಸತ್ಯಮೂರ್ತಿ, ಅಭಿವೃದ್ಧಿ ಅಧಿಕಾರಿ ಶುಶ್ರುತ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಆಗಮನಕ್ಕಾಗಿ ಕಾಯ್ದು ಕುಳಿತಿದ್ದರಿಂದ ಬೆಳಗ್ಗೆ 11 ಗಂಟೆಗೆ ನಿಗದಿಯಾಗಿದ್ದ ಉದ್ಘಾಟನಾ ಕಾರ್ಯಕ್ರಮ ಮಧ್ಯಾಹ್ನ 1.30ಕ್ಕೆ ನೆರವೇರಿತು. ಶಿಷ್ಟಾಚಾರದ ಪ್ರಕಾರ ಜನಪ್ರತಿನಿಧಿಗಳೆಲ್ಲರ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಲಾಗಿತ್ತಲ್ಲದೇ ಜಿಲ್ಲಾ ಉಸ್ತುವಾರಿ ಸಚಿವರ ಇಂದಿನ ಪ್ರವಾಸ ಕಾರ್ಯಕ್ರಮ (ಟಿಪಿ) ದಲ್ಲೂ ಕಚೇರಿ ಕಟ್ಟಡ ಉದ್ಘಾಟನಾ ಕಾರ್ಯಕ್ರಮ ಸೇರ್ಪಡೆಯಾಗಿತ್ತು.

ಅದರಂತೆ ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪಾ, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ತನ್ವೀರ್ ಸೇಠ್, ಸಿ.ಎನ್.ಮಂಜೇಗೌಡ ಸೇರಿದಂತೆ ಎಲ್ಲರೂ ಬೆಳಗ್ಗೆ 11 ಗಂಟೆಗೆ ಹಾಜರಾದರಾದರೂ, ಡಾ.ಹೆಚ್.ಸಿ.ಮಹದೇವಪ್ಪ ಜಲದರ್ಶಿನಿ ಅತಿಥಿಗೃಹದಲ್ಲಿ ಕೃಷಿ ಇಲಾಖೆ ಕಾರ್ಯಕ್ರಮ ಮುಗಿಸಿ ಮುಖ್ಯಮಂತ್ರಿಗಳನ್ನು ಬರಮಾಡಿಕೊಳ್ಳಲು ಹೊರಟಿದ್ದರಿಂದ ಕಾಯುತ್ತಿದ್ದರು. ಒಂದು ಗಂಟೆ ಕಾಯ್ದು ಸಂಸದ, ಶಾಸಕರು, ಜಿಲ್ಲಾ ಮಂತ್ರಿಗಳು ಬಂದಾಗ ಫೋನ್ ಮಾಡಿ ಬರುತ್ತೇವೆಂದು ಹೇಳಿ ಹೊರಟರು. ಆದರೆ ಮಧ್ಯಾಹ್ನ 1 ಗಂಟೆಯಾದರೂ ಬಾರದ ಡಾ.ಮಹದೇವಪ್ಪ ಅವರನ್ನು ಸಂಪರ್ಕಿಸಿದ ಪಾಲಿಕೆ ಆಯುಕ್ತ ಷರೀಫ್ ಅವರಿಗೆ ನಾನು ಬರುತ್ತಿಲ್ಲ, ನೀವೇ ಕಾರ್ಯಕ್ರಮ ಮಾಡಿಕೊಳ್ಳಿ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ.ರೂಪಾ ಹಾಗೂ ಕಾರ್ಪೊರೇಟರ್‌ಗಳೇ ಕಟ್ಟಡ ಉದ್ಘಾಟಿಸಿ, ಊಟ ಮಾಡಿ ಮರಳಿದರು. ವೇದಿಕೆ ಕಾರ್ಯಕ್ರಮ ರದ್ದಾಯಿತು.

ಮಾಜಿ ಸೈನಿಕರ ಮಕ್ಕಳಿಗೆ ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು,ಜು.29–2023–24ನೇ ಸಾಲಿನಲ್ಲಿ 1ನೇ ತರಗತಿಯಿಂದ ಅಂತಿಮ ಪದವಿ, ಡಿಪ್ಲೊಮಾ ಮತ್ತು ವೃತ್ತಿಪರ ಪದವಿವರೆಗೆ ಕರ್ನಾಟಕದಲ್ಲಿರುವ ಹಾಗೂ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕದ ಮೂಲ ನಿವಾಸಿ ಮಿಲಿಟರಿ ಪಿಂಚಣಿದಾರ ಮಾಜಿ ಸೈನಿಕರ ಮಕ್ಕಳಿಗೆ ಶಿಷ್ಯವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಶುಲ್ಕರಹಿತ ಅರ್ಜಿಗಳನ್ನು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಕಚೇರಿಯಿಂದ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಸೆ.30 ಆಗಿದ್ದು, ವೃತ್ತಿಪರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವವರು ಭರ್ತಿ ಮಾಡಿದ ಅರ್ಜಿಗಳನ್ನು ಅ.30ರೊಳಗಾಗಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ. 08212–2425240 ಅನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಆ.1ರಂದು ಆನಂದ ಆರೋಗ್ಯ ಕಾರ್ಯಕ್ರಮ

ಮೈಸೂರು,ಜು.29–ಮೈಸೂರಿನ ವಿಜಯನಗರದಲ್ಲಿರುವ ಆಯುರ್ವೇದ ಪಂಚಕರ್ಮ ಆಸ್ಪತ್ರೆ ದೀಕ್ಷಿತ್ ಆರೋಗ್ಯಧಾಮದಲ್ಲಿ ಆ.1ರಂದು ಸಂಜೆ 6 ಗಂಟೆಗೆ ಆನಂದ ಆರೋಗ್ಯ ಕಾರ್ಯಕ್ರಮ ಏರ್ಪಡಿಸಲಾಗಿದೆ. ಲಲಿತ ಕಲಾಸುಮ ವಿದ್ವಾನ್ ಅನಂತ ಸತ್ಯಂ ಮತ್ತು ಶಿಷ್ಯರಿಂದ ವಯೋಲಿನ್ ವಾದನ ನಡೆಯಲಿದೆ. ವಿದ್ವಾನ್ ಎ.ಎಸ್.ಎನ್.ಸ್ವಾಮಿ–ಮೃದಂಗ, ವಿದ್ವಾನ್ ಶಮಿತ್ ಎಸ್.ಗೌಡ ಘಟಂನಲ್ಲಿ ಸಹಕಾರ ನೀಡಲಿದ್ದಾರೆ. ಡಾ.ಸಿ.ಎಸ್.ಅನಿಲ್‌ಕುಮಾರ್ ಅನ್ನಬ್ರಹ್ಮ ಕುರಿತು ಉಪನ್ಯಾಸ ನೀಡಲಿದ್ದಾರೆ.

ಲೈಫ್ ಸ್ಟೈಲ್, ಜ್ಯುವೆಲರಿ ಪ್ರದರ್ಶನ



ಮೈಸೂರಿನ ಹೋಟೆಲ್ ರಿಯೋ ಮೆರಿಡಿಯನ್‌ನಲ್ಲಿ ಭಾರತೀಯ ಲೈಫ್ ಸ್ಟೈಲ್, ಜ್ಯುವೆಲರಿ ಪ್ರದರ್ಶನವನ್ನು ಚಿತ್ರನಟಿ ಯಶಸ್ವಿನಿ ರವೀಂದ್ರನ್ ಶನಿವಾರ ಉದ್ಘಾಟಿಸಿದರು. ಈ ವೇಳೆ ಮಣಿ ಜಿ., ನೀತಾ ಚಂದ್ರನ್, ಚಂದ್ರ ಅನುದಾಟಿ, ಚಟರ್ಜಿ, ಶರಣ್ಯಾ ಬಿಲ್ಲಾ, ಚಿರಾಗ್ ಆ್ಯಡ್‌ನ ವಿವೇಕ್ ಇತರರು ಉಪಸ್ಥಿತರಿದ್ದರು.

ಭಾಷಾಭಿಮಾನ ಹೆಚ್ಚಿಸಲು ನಮ್ಮ ಜನಪ್ರತಿನಿಧಿಗಳು ಹೋರಾಟ ನಡೆಸುತ್ತಿಲ್ಲ

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪುರುಷೋತ್ತಮ ಬಿಳಿಮಲೆ ಅಭಿಪ್ರಾಯ



ಮೈಸೂರು,ಜು.29(ಎಸ್‌ಪಿಎನ್)–ಭಾರತ ಬಹುತ್ವದ ದೇಶ. ಇಲ್ಲಿನ ನೂರಾರು ಭಾಷೆಗಳು ಭಾರತೀಯ ಪರಂಪರೆಗೆ ರಂಗೋಲಿಗಳಿದ್ದಂತೆ. ಇದರಲ್ಲಿ ಕೆಲವುಗಳಿಗೆ ಲಿಪಿ ಇದೆ. ಇನ್ನು ಕೆಲವಕ್ಕೆ ಲಿಪಿ ಇಲ್ಲ ಎಂದು ಭಾಷಾತಜ್ಞ ಡಾ.ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ಕುವೆಂಪುನಗರದ ಸುರುಚಿ ರಂಗ ಮನೆಯಲ್ಲಿ 3 ದಿನಗಳ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ವಿಷಯದ ಕುರಿತು ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಮಾತನಾಡಿದರು. 2011ರ ಜನಗಣತಿ ಪ್ರಕಾರ ಕನ್ನಡ ಮಾತನಾಡುವವರ ಸಂಖ್ಯೆ ಶೇ.3.75ರಷ್ಟು ಇದೆ. ಹಿಂದಿ ಮಾತನಾಡುವವರ ಸಂಖ್ಯೆ ಶೇ.66ರಷ್ಟು ಇದೆ. 2001ರ ಜನಗಣತಿ ಪ್ರಕಾರ ಹಿಂದಿ ಮಾತನಾಡುವವರ ಸಂಖ್ಯೆ ಶೇ.54 ರಷ್ಟು ಇತ್ತು ಎಂದು ಮಾಹಿತಿ ನೀಡಿದರು.

ಕರ್ನಾಟಕದಲ್ಲಿ ತ್ರಿಭಾಷಾ ಅಳವಡಿಸಿಕೊಂಡರೂ ಕನ್ನಡ ಭಾಷೆ ಮಾತನಾಡುವವರ ಸಂಖ್ಯೆ ಹೆಚ್ಚಾಗಲಿಲ್ಲ. ನಾನು ದೆಹಲಿಯಲ್ಲಿ ಕೆಲಸ ಮಾಡುವಾಗ ಅಲ್ಲಿನ ಕನ್ನಡಿಗರನ್ನು ಒಗ್ಗೂಡಿಸಲು ಗಣೇಶ ಪೂಜೆ, ಕನ್ನಡ ರಾಜ್ಯೋತ್ಸವ ಸೇರಿದಂತೆ ಇತರೆ ಧಾರ್ಮಿಕ ಹಬ್ಬಗಳನ್ನು ಆಯೋಜಿಸಿ ಎಲ್ಲ ವ್ಯವಸ್ಥೆ ಮಾಡಿದರೂ ಕಾರ್ಯಕ್ರಮಕ್ಕೆ ಬರುತ್ತಿದ್ದವರ ಸಂಖ್ಯೆ 500 ದಾಟುತ್ತಿರಲಿಲ್ಲ ಎಂದು ವಿವರಿಸಿದರು.

ತುಳು ಭಾಷೆಯನ್ನು ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರಿಸಬೇಕೆಂಬ ಕೂಗು ಹಲವು ದಶಕಗಳಿಂದ ಇದೆ. ಒಮ್ಮೆಯೂ ಇದರ ಬಗ್ಗೆ ಒಗ್ಗಟ್ಟಾಗಿ ದನಿಯೆತ್ತಲಿಲ್ಲ. ದೊಡ್ಡದೊಡ್ಡ ನಾಯಕರಿದ್ದರೂ ಹೋರಾಟ ಮಾಡದಿರುವುದು ಬೇಸರದ ಸಂಗತಿ ಎಂದು ತಿಳಿಸಿದರು.

ಹಿಂದಿನ ಸರ್ಕಾರದಲ್ಲಿ ಉರ್ದು ಅಕಾಡೆಮಿಗೆ ಅಧ್ಯಕ್ಷರನ್ನೇ ನೇಮಿಸಲಿಲ್ಲ. ಇದು ಭಾಷೆ ಕುಂಠಿತಗೊಳ್ಳಲು ಕಾರಣವಾಗಿದೆ. ಕೊಡವ ಭಾಷಿಕರು 2001ರಲ್ಲಿ 1,61,000 ಮಂದಿ ಇದ್ದರು. 2011ರ ಜನಗಣತಿ ಪ್ರಕಾರ 1,30,000 ಮಂದಿ ಇದ್ದಾರೆ. ಕೊಡವರು, ಈಗ ಇಂಗ್ಲಿಷ್ ಮಾತನಾಡಲು ಆರಂಭಿಸಿದ್ದು, ವಿದೇಶದಲ್ಲಿ ವಾಸಿಸಲು ಹೆಚ್ಚು ಆಸಕ್ತಿ ತೋರುತ್ತಿದ್ದಾರೆ ಎಂದರು.

ಯುನೆಸ್ಕೋ ವರದಿ ಪ್ರಕಾರ ಪ್ರಸ್ತುತ 72 ಭಾಷೆಗಳು ಅಳಿವಿನಂಚಿನಲ್ಲಿವೆ. ಇನ್ನು 10 ವರ್ಷಕ್ಕೆ 92 ಭಾಷೆಗಳು ನಶಿಸುವ ಹಂತ ತಲುಪುತ್ತವೆ. ಕೋವಿಡ್ ಸಂದರ್ಭ ಅಂಡಮಾನ್ ಮತ್ತು ನಿಕೋಬಾರ್‌ನಲ್ಲಿ ದ್ವೀಪದಲ್ಲಿ 'ಸೆರಾ' ಭಾಷೆ ಮಾತನಾಡುತ್ತಿದ್ದ ಏಕೈಕ ವ್ಯಕ್ತಿ ಕೋವಿಡ್‌ನಿಂದ ಮೃತಪಟ್ಟು, ಆ ಭಾಷೆ ಆತನೊಂದಿಗೆ ಕಣ್ಮರೆಯಾಗಿದೆ ಎಂದು ಮಾಹಿತಿ ನೀಡಿದರು.

ಯುಪಿಎ–2 ಸರ್ಕಾರಾವಧಿಯಲ್ಲಿ ಯಾವ ಭಾಷೆಗಳನ್ನು ಸಂವಿಧಾನ ಪರಿಚ್ಛೇದ 8ಕ್ಕೆ ಸೇರಿಸಬೇಕು ಎಂಬ ಕುರಿತು ಸೂರ್ಯಕಾಂತ್ ಮಹಾಪಾತ್ರ ನೇತೃತ್ವದಲ್ಲಿ ಸಮಿತಿಯೊಂದನ್ನು ಕೇಂದ್ರ ಸರ್ಕಾರ ರಚಿಸಿತ್ತು. ಆ ಸಮಿತಿ 35 ಭಾಷೆಗಳನ್ನು ಸಂವಿಧಾನ ಪರಿಚ್ಛೇದ 8ಕ್ಕೆ ಸೇರಿಸಲು ಶಿಫಾರಸು ಮಾಡಿತ್ತು. ಯುಪಿಎ ಸರ್ಕಾರ ಬಹುಮತ ಕಳೆದುಕೊಂಡಿತು. ನಂತರ ಈ ಸಮಿತಿ ಏನಾಯಿತು ಎಂಬುದು ಇಲ್ಲಿವರೆಗೂ ತಿಳಿಯಲಿಲ್ಲ ಎಂದರು. ಭಾಷೆ ವಿಚಾರದಲ್ಲಿ ತಮಿಳು, ತೆಲುಗು, ಮಲೆಯಾಳಿ ಭಾಷಿಕ ಸಂಸದರು ದನಿಯೆತ್ತುತ್ತಿದ್ದಾರೆ. ಆದರೆ, ಕನ್ನಡಿಗ ಸಂಸದರು ಇದಕ್ಕೆ ಅಪವಾದ ಎಂಬಂತೆ ಇರುವುದು ನಾಚಿಕೇಡಿನ ಸಂಗತಿ. ಹಿಂದಿ ಭಾಷಿಕರು, ಉಳಿದ ಉಪಭಾಷೆಗಳನ್ನು ಸಂವಿಧಾನ ಪರಿಚ್ಛೇದಕ್ಕೆ ಸೇರಿಸಲು ಬಿಡದಿರುವುದೇ ಇದಕ್ಕೆಲ್ಲಾ ಕಾರಣ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.7.2023 ಭಾನುವಾರ, ಮಳೆ ನಕ್ಷತ್ರ: ಆಶ್ಲೇಷ 21.07.2023ರಿಂದ 03.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ,
ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಮೂಲ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

- **ಬಿಇಎಂಎಲ್ ಬಸವ ಸಮಿತಿ:** ಬಸವ ಜಯಂತಿ ಮತ್ತು ಸಮಿತಿಯ 32ನೇ ವಾರ್ಷಿಕೋತ್ಸವ. ಉದ್ಘಾಟನೆ: ಮೈಸೂರಿನ ಶ್ರೀ ಹೊಸ ಮಠದ ಶ್ರೀ ಚಿದಾನಂದ ಸ್ವಾಮಿಗಳು. ದಿವ್ಯ ಸಾನ್ನಿಧ್ಯ ಮತ್ತು ಆಶೀರ್ವಚನ: ಊಟಿಯ ಗುರುಬಸವ ಶಾಂತಿನಿಕೇತನ ಮಠ ಮತ್ತು ಎಸ್.ಆರ್.ಪುರದ ಬಸವ ಕೇಂದ್ರದ ಶ್ರೀ ಬಸವ ಯೋಗಿ ಪ್ರಭುಗಳು. ಅಧ್ಯಕ್ಷತೆ: ಬಿಇಎಂಎಲ್ ಬಸವ ಸಮಿತಿಯ ಅಧ್ಯಕ್ಷ ಶರಣ ಎಂ.ಸಿ.ದೇವರಾಜಪ್ಪ. ಸ್ಥಳ: ನಟರಾಜ ಕಲ್ಯಾಣ ಮಂಟಪ, ಶ್ರೀ ಹೊಸಮಠ, ಅಗ್ರಹಾರ, ಬೆಳಗ್ಗೆ 9.30ಕ್ಕೆ.
- **ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್, ಸುಯೋಗ್ ವುಮೆನ್ಸ್ ಹೆಲ್ತ್ ಕ್ಲಬ್, ಸುಯೋಗ್ ಆಸ್ಪತ್ರೆ:** ಸಕ್ಕರೆ ಖಾಯಿಲೆ ಬಗ್ಗೆ ಅರಿವಿನ ಕಾರ್ಯಕ್ರಮ. ಸಕ್ಕರೆ ಖಾಯಿಲೆ ಔಷಧಿಗಳು. ದಿವ್ಯ ಸಾನ್ನಿಧ್ಯ: ಉಡುಪಿಯ ಶ್ರೀ ಪೇಜಾವರ ಅಧೋಕ್ಷಜ ಪೀಠದ ಶ್ರೀ ಪ್ರಸನ್ನ ತೀರ್ಥ ಶ್ರೀಪಾದಂಗಳವರು. ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ. ಅಧ್ಯಕ್ಷತೆ: ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್ ಅಧ್ಯಕ್ಷ ಎನ್.ನಂಜಪ್ಪ. ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಬೆಳಗ್ಗೆ 10 ಗಂಟೆಗೆ.
- **ನಟನ, ಮೈಸೂರು :** ಸುಬ್ಬಣ್ಣ ಸ್ಮರಣೆ–2023, 2023–24ನೇ ಸಾಲಿನ ರಂಗಭೂಮಿ ಡಿಪ್ಲೊಮಾ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ. ರಂಗಚರ್ಚೆ: ರಂಗ ಶಿಕ್ಷಣ: ವರ್ತಮಾನ ಮತ್ತು ಭವಿಷ್ಯದ ಅವಕಾಶಗಳು. ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ. ಬೆಳಗ್ಗೆ 10 ಗಂಟೆಗೆ.
- **ಎಸ್.ಕೆ. ಚಾರಿಟಬಲ್ ಫೌಂಡೇಷನ್ ಟ್ರಸ್ಟ್, ಮೈಸೂರು, ಸೈಂಟಿಫಿಕ್ ಪ್ರಾಣಾಯಾಮ ಫೌಂಡೇಷನ್, ಮೈಸೂರು :** ಪ್ರಾಣಾಯಾಮದ ಮೂಲಕ ನೋವು ನಿರ್ವಹಣೆ ಮತ್ತು ಒತ್ತಡ ನಿಯಂತ್ರಣ ಕುರಿತು ವಿನೂತನ ಕಾರ್ಯಕ್ರಮ. ಸ್ಥಳ: ಅಲ್ಟಿಮಾ ಹೆಲ್ತ್ ಕೇರ್, ಕನಕದಾಸನಗರ. ಬೆಳಗ್ಗೆ 10 ಗಂಟೆಗೆ.
- **ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ/ಎಸ್‌ಟಿ ನೌಕರರ ಸಂಘ:** ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ಜಯಂತಿ ಪ್ರಯುಕ್ತ ಪ್ರತಿಭಾ ಪುರಸ್ಕಾರ, ಬೌದ್ಧ ಭಿಕ್ಕುಗಳು ಹಾಗೂ ವಿಶೇಷ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಅಭಿನಂದನಾ ಕಾರ್ಯಕ್ರಮ. ದಿವ್ಯ ಸಾನ್ನಿಧ್ಯ: ಕೊಳ್ಳೇಗಾಲದ ಚೇತವನ ಬುದ್ಧವಿಹಾರದ ಮನೋರಖ್ಖಿತ ಬಂತೇಜಿ, ಚಾಮರಾಜನಗರದ ನಳಂದ ಬೌದ್ಧ ವಿವಿಯ ಬೋಧಿದತ್ತ ಥೇರಾ ಬಂತೇಜಿ, ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ದಾವಣಗೆರೆರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ. ಉದ್ಘಾಟನೆ: ಸಚಿವ ಡಾ.ಮಹದೇವಪ್ಪ. ಅಧ್ಯಕ್ಷತೆ: ರಾಜ್ಯ ಸರ್ಕಾರಿ ಎಸ್‌ಸಿ/ಎಸ್‌ಟಿ ನೌಕರರ ಸಂಘ ರಾಜ್ಯ ಸಮಿತಿ ರಾಜ್ಯಾಧ್ಯಕ್ಷ ಡಿ.ಚಂದ್ರಶೇಖರಯ್ಯ. ಸ್ಥಳ ಕಲಾಮಂದಿರ, ಬೆಳಗ್ಗೆ 10.30ಕ್ಕೆ.
- **ಶ್ರೀ ಮಹರ್ಷಿ ವಾಲ್ಮೀಕಿ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್, ಮೈಸೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು :** ಕಾರ್ಯಕ್ರಮಗಳು. ಉದ್ಘಾಟನೆ: ಮೇಯರ್ ಶಿವಕುಮಾರ್. ಅಧ್ಯಕ್ಷತೆ: ಶಾಸಕ ಟಿ.ಎಸ್.ವತ್ಸ. ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ. ಬೆಳಗ್ಗೆ 10.30ಕ್ಕೆ.
- **ಸಂವಹನ ಟ್ರಸ್ಟ್ :** ವಿದ್ಯಮಾನ–1 ತಿಂಗಳಿಗೊಂದು ಉಪನ್ಯಾಸ ಹಾಗೂ ಸಂವಾದ. ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಉಪನ್ಯಾಸ ಹಾಗೂ ಸಂವಾದ: ನವದೆಹಲಿಯ ಜೆಎನ್‌ಯು ನಿವೃತ್ತ ಪ್ರಾಧ್ಯಾಪಕರಾದ ಡಾ.ಪುರುಷೋತ್ತಮ ಬಿಳಿಮಲೆ. ವಿಷಯ: ಬದಲಾಗುತ್ತಿರುವ ಸಾಹಿತ್ಯದ ವಿದ್ಯಮಾನಗಳು.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಶೋಧ ಅನುಶೋಧ–ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ–ಡಾ.ಮೈಸೂರ್ ಉಮೇಶ್, 7.15 ಕನ್ನಡದ ಲೇಖಕ ಹಾಗೂ ಇಂಗ್ಲೆಂಡಿನಲ್ಲಿ ವಿಮಾನ ಶಾಸ್ತ್ರ ತಂತ್ರಜ್ಞರಾಗಿರುವ ಯೋಗೀಂದ್ರ ಮರವಂತೆ ಅವರೊಂದಿಗೆ ಮಾತುಕತೆ. ನಡೆಸಿಕೊಡುತ್ತಾರೆ ಅಬ್ದುಲ್ ರಶೀದ್, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಬಾನುಲಿ ಸರಣಿ. ಕಲಾ ಸುರುಚಿಯ ಕಥಾ ಸರಣಿ–ಕೆ.ನಾಗರಾಜ್ ಹಾಗೂ ಬಿ.ಬಾಲಕೃಷ್ಣಯ್ಯ ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ್ದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಎಸ್.ರಾಮನಾಥನ್–ಹಾಡುಗಾರಿಕೆ, 11.00 ಸ್ವರಾಜ್–ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ತಾಥೆ **ಮಧ್ಯಾಹ್ನ:** 12.30 ದೇವರನಾಮ–ಬಿ.ಎನ್.ಮಂಜುಳಾ, ಟಿ.ಎಸ್.ಸತ್ಯವತಿ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಪುಟ್ಟನಾಗಮ್ಮ ಮತ್ತು ಸಂಗಡಿಗರು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30ಮಕ್ಕಳ ಮಂಟಪ–ಪ್ರತಿಭಾ ಪಲ್ಲವ, ಬಹುಮುಖ ಪ್ರತಿಭೆ ವರುಣ್ ಸಿಂಹನ್ ಪರಿಚಯ. ಪ್ರಸ್ತುತಿ–ಎಂ.ಎಸ್.ಭಾರತಿ, 4.30 ನೆನಪಿನಂಗಳ–ಹಿರಿಯ ವಯ್ಯಾಕರಣಿಗಳು ಹಾಗೂ ಭಾಷಾಶಾಸ್ತ್ರಜ್ಞ ಡಾ.ಬಿ.ಬಿ.ರಾಜಪುರೋಹಿತ್ ಅವರೊಂದಿಗೆ ಪ್ರೊ.ಮ.ವರದರಾಜು ನಡೆಸಿದ್ದ ಸಂವಾದ. ಪ್ರಸ್ತುತಿ–ಎಸ್.ಲಕ್ಷ್ಮೀನಾರಾಯಣ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ–ಎನ್.ಕೇಶವಮೂರ್ತಿ, ಡಾ.ಮೈಸೂರು ಉಮೇಶ್, ಆರ್.ಲೋಕೇಶ್ವರಿ, ಪರಾಗ–ಬೇಸಾಯದ ಬದುಕು ಸರಾಗ –ಬಾನುಲಿ ಸರಣಿ, 9.30 ಶಿಕ್ಷಣದಲ್ಲಿ ಖಾಸಗಿ ಸಂಸ್ಥೆಗಳು, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ಖಜಾಂಚಿ ಶ್ರೀಶೈಲ ರಾಮಣ್ಣವರ ಅವರೊಡನೆ ಸಂದರ್ಶನ. ಸಂದರ್ಶಕರು–ದಿವಾಕರ ಹೆಗಡೆ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಗಗನ್ ದೀಪ್–ಸಿತಾರ್ ವಾದನ

ಸ್ಥಳ: ಡಾ.ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ. ಬೆಳಗ್ಗೆ 11 ಗಂಟೆಗೆ.

- **ಪೀಪಲ್ ಫಾರ್ ಅನಿಮಲ್ಸ್:** ನಾಯಿ ಮತ್ತು ಬೆಕ್ಕಿನ ಮರಿ ದತ್ತು ಸ್ವೀಕಾರ ಸಮಾರಂಭ. ಸ್ಥಳ: ಪೀಪಲ್ಫಾರ್ ಅನಿಮಲ್ಸ್ ಆವರಣ, ಬೋಗಾದಿ, ರೂಪಾನಗರ ಸಮೀಪ. ಬೆಳಗ್ಗೆ 11.30 ರಿಂದ ಸಂಜೆ 5ರವರೆಗೆ.
- **ಮೈಸೂರು ನಗರಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾ ಸಂಘ:** ಪೌರಕಾರ್ಮಿಕರ ಸರ್ವ ಸದಸ್ಯರ ಸಭೆ. ಸ್ಥಳ: ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪ, ಬೆಳಗ್ಗೆ 11.30ಕ್ಕೆ.
- **ಶ್ರೀ ರಾಮಕೃಷ್ಣ ಅಶ್ರಮ:** ಸ್ವಾಮಿ ಅಘಹರಾನಂದ ಅವರಿಂದ ಉಪನ್ಯಾಸ. ವಿಷಯ: ಸೋದರ ಸನ್ಯಾಸಿಗಳೊಂದಿಗೆ ಸ್ವಾಮಿ ವಿವೇಕಾನಂದರು. ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ. ಸಂಜೆ 6ಕ್ಕೆ.
- **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಯಜ್ಞ, ಅಯೋಧ್ಯಾ ಕಾಂಡ–ವಿದ್ವಾನ್ ಶ್ರೀ ಶ್ರೀಕಾಂತಾಚಾರ್ಯ ಕಳಸಾಪುರ ಅವರಿಂದ. ಸ್ಥಳ: ಮಠದ ಅವರಣ, ಕೃಷ್ಣಮೂರ್ತಿಪುರಂ. ಸಂಜೆ 6ರಿಂದ 7ರವರೆಗೆ.
- **ರಂಗಾಯಣ:** ವಾರಾಂತ್ಯ ರಂಗ ಪ್ರದರ್ಶನ. ನಟನ ತಂಡದಿಂದ 'ಕಣಿವೆಯ ಹಾಡು' ನಾಟಕ ಪ್ರದರ್ಶನ. ರಚನೆ: ಅತೋಲ್ ಫ್ಯೂಗಾರ್ಡ್, ಕನ್ನಡಕ್ಕೆ: ಡಾ.ಮೀರಾಮೂರ್ತಿ. ಸಂಗೀತ: ಅನುಷ್‌ಶೆಟ್ಟಿ, ಮುನ್ನ, ಮೈಸೂರು, ವಿನ್ಯಾಸ, ನಿರ್ದೇಶನ: ಡಾ.ಶ್ರೀಪಾದ ಭಟ್. ಸ್ಥಳ: ಭೂಮಿಗೀತ ರಂಗಮಂದಿರ. ರಂಗಾಯಣ. ಸಂಜೆ 6.30ಕ್ಕೆ.
- **ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ :** 'ಗುರು ಆಚಾರ್ಯ' ವಿಷಯ ಕುರಿತು ನಂಜನಗೂಡಿನ ಪ್ರಾಧ್ಯಾಪಕರಾದ ಇ.ಕೆ.ರಾಮ ಮೋಹನ ಅವರಿಂದ ಪ್ರವಚನ. ಸ್ಥಳ: ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ ಸಭಾಂಗಣ, ಲಕ್ಷ್ಮೀಪುರಂ. ಸಂಜೆ 7 ಗಂಟೆಗೆ.
- **ಜಿಪಿಐಇಆರ್ ತಂಡ :** ರಂಗಕರ್ಮಿ ಮೈಮ್ ರಮೇಶ್ ಅವರ ಜಿಪಿಐಇಆರ್ ತಂಡದಿಂದ 'ಆಲ್ ರೈಟ್ ಮಂತ್ರ ಮಾಂಗಲ್ಯ' ನಾಟಕ. ಸ್ಥಳ: ಕಿರು ರಂಗಮಂದಿರ. ಕಲಾಮಂದಿರ ಆವರಣ. ಸಂಜೆ 7 ಗಂಟೆಗೆ.


ಆಲನಹಳ್ಳಿ, ಹೆಚ್.ಡಿ.ಕೋಟೆ ತಾಲೂಕು

- **ಆಡಿಯಾಲಜಿ ಇಂಡಿಯಾ, ಪ್ರತಿಭೆ ಸಂಸ್ಥೆ, ಸೌಂಡ್ ಟ್ರೀ ವಾಕ್‌ಶ್ರವಣ ಕೇಂದ್ರ, ಬದುಕು ಸಂಸ್ಥೆ:** ಉಚಿತ ವಾಕ್‌ಶ್ರವಣ ತಪಾಸಣಾ ಶಿಬಿರ ಮತ್ತು ಶ್ರವಣೋಪಕರಣ ವಿತರಣಾ ಕಾರ್ಯಕ್ರಮ. ಸ್ಥಳ: ಚೇತನ ವಿದ್ಯಾಸಂಸ್ಥೆ, ಆಲನಹಳ್ಳಿ, ಹೆಚ್.ಡಿ.ಕೋಟೆ ತಾಲೂಕು. ಬೆಳಗ್ಗೆ 10ರಿಂದ 3 ಗಂಟೆಯವರೆಗೆ.

ಮೈಸೂರು ಮಿತ್ರ

ಭಾನುವಾರ 30 ಜುಲೈ 2023

ಜಪಾನ್ ಒಕ್ಕೈಡೋ ವಿವಿಯಲ್ಲಿ ಪ್ರೊ.ಕೆ.ಎಸ್.ರಂಗಪ್ಪ ಉಪನ್ಯಾಸ



ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ ಕೆ.ಎಸ್. ರಂಗಪ್ಪ ಅವರು ಜಪಾನಿನ ಒಕ್ಕೈಡೋ ವಿಶ್ವವಿದ್ಯಾನಿಲಯದಲ್ಲಿ ಅಲ್ಝೈಮರ್ (ಮನುಷ್ಯನ ನೆನಪಿನ ಶಕ್ತಿ ಕುಗ್ಗುವ ಕಾಯಿಲೆ) ಕುರಿತು ವಿಶೇಷ ಉಪನ್ಯಾಸ ನೀಡಿದರು.

ಒಕ್ಕೈಡೋ ವಿವಿಯ ವೈದ್ಯಕೀಯ ಲ್ಯಾಬೋರೇಟರಿ ಸೈನ್ಸ್, ವಿಜ್ಞಾನಗಳ ವಿಭಾಗದ ಆಹ್ವಾನದ ಮೇರೆಗೆ ಪ್ರೊರಂಗಪ್ಪ ಅವರು ಜಪಾನ್‌ಗೆ ತೆರಳಿದ್ದು, ಇದೇ 21ರಂದು ಅಲ್ಝೈಮರ್ ರೋಗ ಮತ್ತು ಕ್ಯಾನ್ಸರ್ ವಿಷಯಗಳ ಕುರಿತು ಉಪನ್ಯಾಸ ನೀಡಿದರು.

ಇದೇ ಸಂದರ್ಭದಲ್ಲಿ ರಾಸಾಯನಿಕ ಜೀವಶಾಸ್ತ್ರದ ವಿವಿಧ ಅಂಶಗಳ ಕುರಿತು ವಿವಿಧ ಡೀನ್‌ಗಳು, ಪ್ರಾಧ್ಯಾಪಕರು ಮತ್ತು ವಿಶ್ವವಿದ್ಯಾಲಯದ ನಿರ್ದೇಶಕರು, ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಿ, ಜ್ಞಾನ ಹಂಚಿಕೊಂಡರು.

ಒಕ್ಕೈಡೋ ವಿಶ್ವವಿದ್ಯಾನಿಲಯದ ನಿರ್ದೇಶಕರಾದ ಡಾ.ಹೌಕಿನ್ ಕಿಯೋಹಿರೊ, ಅಂತಾರಾಷ್ಟ್ರೀಯ ವ್ಯವಹಾರಗಳ ಇಲಾಖೆ ನಿರ್ದೇಶಕ ಎರಿ ಹಟಾ, ಕಾರ್ಯನಿರ್ವಾಹಕ ನಿರ್ದೇಶಕ ಯುಕಿಮಾಟ್ಸುಡು ಯಸುಹಿರೊ ಮತ್ತು ಒಕ್ಕೈಡೋ ವಿವಿ ಪ್ರೊ ಕೆಂಜಿ ಮೊಂಡೆ ಅವರೊಂದಿಗೆ ಪ್ರೊ ರಂಗಪ್ಪ ಸಮಾಲೋಚನೆ ನಡೆಸಿದರು.

ಒಕ್ಕೈಡೋ ವಿಶ್ವವಿದ್ಯಾಲಯದ ರಾಯಭಾರಿಯಾಗಿ ಪ್ರೊ.ಕೆ.ಎಸ್.ರಂಗಪ್ಪ ಹಲವು ವೈಜ್ಞಾನಿಕ ಸಲಹೆ ನೀಡಿದರು.

ಒಕ್ಕೈಡೋ ವಿಶ್ವವಿದ್ಯಾನಿಲಯ ಮತ್ತು ಭಾರತದ ವಿಶ್ವವಿದ್ಯಾನಿಲಯಗಳು, ವಿಶೇಷವಾಗಿ ಕರ್ನಾಟಕದಲ್ಲಿರುವ ವಿಶ್ವವಿದ್ಯಾಲಯಗಳ ಜತೆಗಿನ ಸಹಯೋಗದ ಜತೆ ನಡೆಸುತ್ತಿರುವ ಚಟುವಟಿಕೆಗಳ ಬಗ್ಗೆ ಇದೇ ಸಂದರ್ಭ ವಿವರಿಸಿದರು.

ಪಬ್ಲಿಕ್ ಲೆಕ್ಚರ್ಸ್ ಕಮಿಟಿ ಹಾಗೂ ಫ್ಯಾಕ್ಯುಲ್ಟಿ ಹೆಲ್ತ್ ಸೈನ್ಸ್ ವಿಭಾಗ ಆಯೋಜಿಸಿರುವ 2ನೇ ಹೆಲ್ತ್ ಸೈನ್ಸ್ ಸೆಮಿನಾರ್‌ನಲ್ಲಿ ಪ್ರೊ. ರಂಗಪ್ಪ ಅವರು ಹಲವು ವಿಷಯಗಳ ಮೇಲೆ ಬೆಳಕು ಚೆಲ್ಲಿದರು.

ಅಂತಾರಾಷ್ಟ್ರೀಯ ಸಹಯೋಗದಲ್ಲಿ ಬಹು ಸಂಶೋಧನೆಯನ್ನು ಕೈಗೊಳ್ಳಬೇಕಾಗಿರುವುದು ಹಾಗೂ ಅಲ್ಝೈಮರ್, ಕ್ಯಾನ್ಸರ್, ಹೃದಯರಕ್ತನಾಳದ ಕಾಯಿಲೆಗಳು, ಮಧುಮೇಹ ಸೇರಿದಂತೆ ವಿವಿಧ ರೋಗಗಳ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಿ ಗುರಿ ತಲುಪುವುದು ಇಂದಿನ ಅಗತ್ಯ ಎಂದು ಗಮನಸೆಳೆಯಲಾಯಿತು.

ಹುಲಿ ಸಂಖ್ಯೆಯಲ್ಲಿ ಮಧ್ಯಪ್ರದೇಶ ನಂ.1, ಕರ್ನಾಟಕ ನಂ.2

- 785 ಹುಲಿಗಳೊಂದಿಗೆ ಅಗ್ರಸ್ಥಾನ ಕಾಯ್ದುಕೊಂಡ ಎಂಪಿ
- 563 ಹುಲಿ ಹೊಂದಿರುವ ಕರ್ನಾಟಕ ಎರಡನೇ ಸ್ಥಾನ
- ಉತ್ತರಾಖಂಡ ಮೂರನೇ, ಮಹಾರಾಷ್ಟ್ರ 4ನೇ ಸ್ಥಾನ

ಮೈಸೂರು,ಜು.29(ಎಂಟಿವೈ)– ಉತ್ತರಾಖಂಡದ ಜಿಮ್ ಕಾರ್ಬೆಟ್ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಶನಿವಾರ ನಡೆದ ಅಂತಾರಾಷ್ಟ್ರೀಯ ಹುಲಿ ದಿನದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಹುಲಿ ದಿನ ಗಣತಿ ವರದಿ ಬಿಡುಗಡೆ ಮಾಡಲಾಗಿದೆ. ದೇಶದಲ್ಲೇ ಅತಿ ಹೆಚ್ಚು ಹುಲಿ ಹೊಂದಿರುವ ರಾಜ್ಯಗಳಲ್ಲಿ 785 ಹುಲಿಗಳೊಂದಿಗೆ ಮಧ್ಯಪ್ರದೇಶ ಅಗ್ರಸ್ಥಾನ ಕಾಯ್ದುಕೊಂಡರೆ, 563 ವ್ಯಾಘ್ರಗಳೊಂದಿಗೆ ಕರ್ನಾಟಕ ಮತ್ತೊಮ್ಮೆ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳುವಂತಾಗಿದೆ.

ನಾಲ್ಕು ವರ್ಷಕ್ಕೊಮ್ಮೆ ನಡೆಯುವ ಹುಲಿ ಗಣತಿ ವರದಿ ಬಿಡುಗಡೆಗಾಗಿ ಕಳೆದ ಒಂದು ವರ್ಷದಿಂದ ದೇಶದ ಪ್ರಾಣಿಪ್ರಿಯರು ಕಾತುರದಿಂದ ಕಾಯುತ್ತಿದ್ದರು. ವಿಶ್ವದಲ್ಲಿರುವ ಹುಲಿಗಳ ಸಂಖ್ಯೆ, ಭಾರತದಲ್ಲಿರುವ ಹುಲಿಗಳ ಸಂಖ್ಯೆಯ ವರದಿ ಕಳೆದ ವರ್ಷವೇ ಬಿಡುಗಡೆ ಮಾಡಲಾಗಿತ್ತಾದರೂ, ರಾಜ್ಯವಾರು ಹುಲಿಗಳ ಸಂಖ್ಯಾ ವರದಿ ಬಿಡುಗಡೆಯನ್ನು ಕಾಯ್ದಿರಿಸಲಾಗಿತ್ತು. ಜಿಮ್ ಕಾರ್ಬೆಟ್ ಹುಲಿ ಸಂರಕ್ಷಿತ ಪ್ರದೇಶದಲ್ಲಿ ನಡೆದ ಅಂತಾರಾಷ್ಟ್ರೀಯ ಹುಲಿ ದಿನದ ಕಾರ್ಯಕ್ರಮದಲ್ಲಿ ಕೇಂದ್ರದ ಅರಣ್ಯ ಸಚಿವ ಭೂಪೇಂದ್ರ ಯಾದವ್, ರಾಜ್ಯವಾರು ಹುಲಿಗಳ ಗಣತಿ ವರದಿ ಬಿಡುಗಡೆ ಮಾಡಿದರು. ಆ ಮೂಲಕ ಕಳೆದ ಒಂದು ವರ್ಷದಿಂದ ವನ್ಯಜೀವಿ ಪ್ರೇಮಿಗಳಲ್ಲಿ ಮನೆ ಮಾಡಿದ್ದ ಕಾತರಕ್ಕೆ ತೆರೆ ಎಳೆದರು.



ಬಂಡೀಪುರದಲ್ಲಿವೆ ಅಧಿಕ ಹುಲಿಗಳು!

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 191 ಹುಲಿಗಳಿವೆ ಎಂದು ಅಂದಾಜು ಮಾಡಲಾಗಿದ್ದು, ರಾಜ್ಯದಲ್ಲಿ ಅತೀ ಹೆಚ್ಚು ಹುಲಿಗಳು ವಾಸವಾಗಿರುವ ರಕ್ಷಿತಾರಣ್ಯ ಎಂಬ ಖ್ಯಾತಿ ಪಡೆದಿದೆ. ಹಾಗೆಯೇ ನಾಗರಹೊಳೆ ಸಂರಕ್ಷಿತಾರಣ್ಯದಲ್ಲಿ 185 ಹುಲಿಗಳು, ಬಿಳಿಗಿರಿ ರಂಗನಾಥ ದೇವಾಲಯದ ಹುಲಿ ಸಂರಕ್ಷಿತ ಪ್ರದೇಶದಲ್ಲಿ 60, ಭದ್ರಾವತಿಯಲ್ಲಿ 44 ಹಾಗೂ ಕಾಳಿಯಲ್ಲಿ 29 ಹುಲಿಗಳಿವೆ ಎಂದು ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ತಿಳಿಸಿದೆ. ಕರ್ನಾಟಕದಲ್ಲಿಯೇ ಅತಿ ಹೆಚ್ಚು ಹುಲಿಗಳಿರುವ ಸಂರಕ್ಷಿತಾರಣ್ಯಗಳಲ್ಲಿ ಮೊದಲ ಹಾಗೂ ದೇಶದಲ್ಲಿ ಮೂರನೇ ಸ್ಥಾನ ಪಡೆಯುವ ಮೂಲಕ ಚಾಮರಾಜನಗರ ಹುಲಿಗಳ ನಾಡು ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದೆ.

ಭಾರತದಲ್ಲಿ ಹುಲಿ ಹೆಜ್ಜೆ... (ಮೊದಲ ನಾಲ್ಕು ಸ್ಥಾನ ಪಡೆದ ರಾಜ್ಯಗಳು)

ವರ್ಷ	ಭಾರತ	ಮಧ್ಯಪ್ರದೇಶ	ಕರ್ನಾಟಕ	ಉತ್ತರಾಖಂಡ	ಮಹಾರಾಷ್ಟ್ರ
2006ರಲ್ಲಿ	1411	300	290	178	103
2010ರಲ್ಲಿ	1706	257	300	227	168
2014ರಲ್ಲಿ	2226	308	406	340	190
2018ರಲ್ಲಿ	2967	526	524	442	312
2022ರಲ್ಲಿ	3167	785	563	560	444

ನಾಲ್ಕು ವರ್ಷಕ್ಕೊಮ್ಮೆ ನಡೆಯುವ ಹುಲಿ ಗಣತಿಯಲ್ಲಿ 2022ರಲ್ಲಿ ವಿಶ್ವದ 13 ದೇಶಗಳಲ್ಲಿ 4500 ಹುಲಿ ಪತ್ತೆಯಾಗಿದ್ದು, ಅವುಗಳಲ್ಲಿ ಭಾರತದ 53 ಹುಲಿ ಸಂರಕ್ಷಿತ ಪ್ರದೇಶ ಹಾಗೂ ವಿವಿಧ ವನ್ಯಧಾಮಗಳಲ್ಲಿ 3,167 ಹುಲಿಗಳು ನೆಲೆಸಿರುವುದು ದೃಢಪಟ್ಟಿತ್ತು. ರಾಜ್ಯವಾರು ವರದಿಯಲ್ಲಿ ಶಿವಾಲಿಕ್ ಪರ್ವತಶ್ರೇಣಿ–ಗಂಗಾ ಬಯಲು ಭಾಗದಲ್ಲಿ 819 ಹುಲಿ, ಮಧ್ಯ ಭಾರತ ಹಾಗೂ ಪೂರ್ವ ಪರ್ವತ ಶ್ರೇಣಿ ವ್ಯಾಪ್ತಿಯಲ್ಲಿ 1439 ಹುಲಿ, ಪಶ್ಚಿಮ ಘಟ್ಟಶ್ರೇಣಿಯಲ್ಲಿ 1087 ಹುಲಿ, ಈಶಾನ್ಯ ಪರ್ವತ ಶ್ರೇಣಿ– ಬ್ರಹ್ಮಪುರ ಭೂಪ್ರದೇಶದಲ್ಲಿ 236 ಹುಲಿಗಳಿರುವುದು ಖಚಿತವಾಗಿದೆ.

ಯಾರಿಗೆ ಯಾವ ಸ್ಥಾನ: 2022ನೇ ಸಾಲಿನ ಗಣತಿಯಂತೆ ಹುಲಿಗಳ ಸಂಖ್ಯೆಯಲ್ಲಿ ಕಳೆದ ಬಾರಿಯಂತೆ ಈ ಬಾರಿಯೂ ಮಧ್ಯಪ್ರದೇಶ ಮೇಲುಗೈ ಸಾಧಿಸಿದೆ. ವಿಶಾಲವಾದ ಅರಣ್ಯ ವ್ಯಾಪ್ತಿ ಹೊಂದಿರುವ ಮಧ್ಯಪ್ರದೇಶದಲ್ಲಿ ಈ ಬಾರಿ 785 ಹುಲಿ ಕಂಡುಬಂದಿದ್ದು ಮೊದಲ ಸ್ಥಾನ ಪಡೆದ ಹೆಗ್ಗಳಿಕೆಗೆ ಪಾತ್ರವಾಗಿದೆ. ಕಳೆದ ಸಮೀಕ್ಷೆಯಲ್ಲಿ 526 ಹುಲಿಗಳೊಂದಿಗೆ ಮೊದಲ ಸ್ಥಾನ ಪಡೆದಿತ್ತು.

2010ರಲ್ಲಿ 300, 2014ರಲ್ಲಿ 406 ಹುಲಿ ಹೊಂದಿ ದೇಶದಲ್ಲೇ ಮೊದಲ ಸ್ಥಾನ ಪಡೆದಿದ್ದ ಕರ್ನಾಟಕ ಕಳೆದ ಬಾರಿ 524 ಹುಲಿ ಹೊಂದಿ, ಕೇವಲ 2 ಸಂಖ್ಯೆಯಿಂದ ಮೊದಲ ಸ್ಥಾನದಿಂದ ವಂಚಿತವಾಗಿತ್ತು. ಈ ಬಾರಿ ಮೊದಲ ಸ್ಥಾನದ ನಿರೀಕ್ಷೆಯಲ್ಲಿದ್ದ ಕರ್ನಾಟಕಕ್ಕೆ ಮತ್ತೆ ನಿರಾಸೆಯಾಗಿದೆ. 563 ಹುಲಿಗಳೊಂದಿಗೆ ಎರಡನೇ ಸ್ಥಾನ ಪಡೆದುಕೊಂಡಿದೆ.

ಉತ್ತರಾಖಂಡ (560 ಹುಲಿ) 3ನೇ ಸ್ಥಾನ, ಮಹಾರಾಷ್ಟ್ರ (444 ಹುಲಿ) 4ನೇ ಸ್ಥಾನ, ತಮಿಳುನಾಡು (306 ಹುಲಿ) 5ನೇ ಸ್ಥಾನ, ಅಸ್ಸಾಂ (227 ಹುಲಿ) 6ನೇ ಸ್ಥಾನ, ಕೇರಳ (213 ಹುಲಿ) 7ನೇ ಸ್ಥಾನ, ಉತ್ತರ ಪ್ರದೇಶ (205 ಹುಲಿ) 8ನೇ ಸ್ಥಾನ, ರಾಜಸ್ಥಾನ (88 ಹುಲಿ) 9ನೇ ಸ್ಥಾನ, ಆಂಧ್ರಪ್ರದೇಶ (63 ಹುಲಿ) 10ನೇ ಸ್ಥಾನ ಪಡೆದುಕೊಂಡಿದೆ. ಉಳಿದಂತೆ ಬಿಹಾರದಲ್ಲಿ 54, ತೆಲಂಗಾಣದಲ್ಲಿ 21, ಛತ್ತೀಸ್‌ಗಢದಲ್ಲಿ 17, ಒಡಿಸ್ಸಾದಲ್ಲಿ 20, ಗೋವಾದಲ್ಲಿ 5, ಅರುಣಾಚಲ ಪ್ರದೇಶದಲ್ಲಿ 9, ಪಶ್ಚಿಮ ಬಂಗಾಳದಲ್ಲಿ 2 ಹುಲಿಗಳಿವೆ.

ರಸ್ತೆ ಅಪಘಾತಗಳ ತಡೆಗೆ ಮಹತ್ವದ ಹೆಜ್ಜೆ
ಹೆದ್ದಾರಿಗಳಲ್ಲಿ ಎಐ ಆಧಾರಿತ ಸಿಸಿಟಿವಿ ಕ್ಯಾಮರಾ

ಬೆಂಗಳೂರು,ಜು.29–ರಾಜ್ಯಾದ್ಯಂತ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಕೆ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಈ ಮಹತ್ವದ ಹೆಜ್ಜೆ ಇರಿಸಿದೆ.

ಎಐ ಆಧಾರಿತ ಈ ಕ್ಯಾಮರಾಗಳು ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನಗಳನ್ನು ಫೋಟೋ ಸಮೇತ ಪೊಲೀಸರಿಗೆ ರವಾನೆ ಮಾಡಲಿದೆ. ವಾಹನ ಚಾಲಕರು ಲೇನ್ ಶಿಸ್ತು ಪಾಲಿಸುವುದು ಸೇರಿದಂತೆ ಹಲವು ವಿಚಾರಗಳ ಮೇಲೆ ಈ ಕ್ಯಾಮರಾಗಳು ನಿಗಾ ವಹಿಸಲಿವೆ. ಅದರಲ್ಲೂ ಸರಕು ಸಾಗಣೆ ವಾಹನಗಳ ಮೇಲೆ ಅತೀ ಹೆಚ್ಚಿನ ಕಣ್ಗಾವಲು ವಹಿಸಲಿದೆ.

ಈಗಾಗಲೇ ರಾಷ್ಟ್ರೀಯ ಹೆದ್ದಾರಿಯ ಹಲವು ಭಾಗಗಳಲ್ಲಿ ಎಐ ಆಧಾರಿತ ಸಿಸಿಟಿವಿ ಕ್ಯಾಮರಾಗಳನ್ನು ಸ್ಥಾಪಿಸಲಾಗಿದೆ. ಕರ್ನಾಟಕ ರಾಜ್ಯದ ವ್ಯಾಪ್ತಿಯಲ್ಲಿ ಈ ಕ್ಯಾಮರಾಗಳನ್ನು ಸರ್ಕಾರ ಅಳವಡಿಕೆ ಮಾಡಲಿದೆ. ರಾಷ್ಟ್ರೀಯ ಹೆದ್ದಾರಿಯಾದ್ಯಂತ ಸಿಸಿಟಿವಿ ಕ್ಯಾಮರಾಗಳ ಅಳವಡಿಕೆ ಕಾರ್ಯ ಪೂರ್ಣಗೊಂಡ ನಂತರ ಈ ಕ್ಯಾಮರಾಗಳ ಒಂದು ಸಮಗ್ರ ಜಾಲವನ್ನೇ ಸರ್ಕಾರ ಸ್ಥಾಪಿಸಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸರ್ಕಾರ ಹಮ್ಮಿಕೊಂಡಿರುವ ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಯೋಜನೆಯಡಿ ಈ ಎಐ ಕ್ಯಾಮರಾಗಳ ಅಳವಡಿಕೆ ಕಾರ್ಯ ನಡೆಯುತ್ತಿದೆ. ಕೆಲವೇ ದಿನಗಳಲ್ಲಿ ಈ ಕ್ಯಾಮರಾಗಳ ಕಾರ್ಯ ನಿರ್ವಹಣೆ ಆರಂಭವಾಗಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಸದ್ಯ ಈ ಕ್ಯಾಮರಾಗಳನ್ನು ಟೋಲ್ ಪ್ಲಾಜಾಗಳ ಬಳಿ ಅಳವಡಿಸುವ ಕೆಲಸ ನಡೆಯುತ್ತಿದೆ. ಸಂಚಾರ ನಿಯಮ ಉಲ್ಲಂಘನೆ ಮಾಡುವ ವಾಹನಗಳನ್ನು ಟೋಲ್ ಪ್ಲಾಜಾಗಳ ಬಳಿ ಹಿಡಿದು ದಂಡ ವಸೂಲಿ ಮಾಡುವ ಯೋಜನೆ ರೂಪಿಸಲಾಗಿದೆ. ಟೋಲ್ ಪ್ಲಾಜಾಗಳ ಬಳಿಯಲ್ಲೇ ಸ್ವಯಂ ಚಾಲಿತವಾಗಿ ಚಲನ್‌ಗಳನ್ನು ಸಿದ್ಧಪಡಿಸುವ ವ್ಯವಸ್ಥೆ ಕೂಡಾ ನಡೆಯುತ್ತಿದೆ ಎಂದು ಕರ್ನಾಟಕ ರಾಜ್ಯ ಸಂಚಾರ ಹಾಗೂ ರಸ್ತೆ ಸುರಕ್ಷತಾ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ತಿಳಿಸಿದ್ದಾರೆ.



ಸದ್ಯ ಬೆಳಗಾವಿಯಿಂದ ಬೆಂಗಳೂರಿನವರೆಗೆ ಕ್ಯಾಮರಾಗಳ ಅಳವಡಿಕೆ ಕಾರ್ಯ ಮುಕ್ತಾಯಗೊಂಡಿದೆ ಎಂದು ತಿಳಿಸಿದ್ದಾರೆ. ಒಂದು ತಿಂಗಳ ಹಿಂದೆಯೇ ಹಾವೇರಿ, ದಾವಣಗೆರೆ ಹಾಗೂ ಚಿತ್ರದುರ್ಗದಲ್ಲಿ ಲೇನ್ ಶಿಸ್ತು ಪಾಲಿಸದ ವಾಹನಗಳನ್ನು ಹಿಡಿದು ದಂಡ ಹಾಕುವ ಕೆಲಸ ಆರಂಭ ಆಗಿದೆ. ಇನ್ನು ಬೆಂಗಳೂರು ಗ್ರಾಮಾಂತರ, ತುಮಕೂರು, ಧಾರವಾಡ ಹಾಗೂ ಬೆಳಗಾವಿಯಲ್ಲಿ ಆಗಸ್ಟ್ 6ರಂದು ಹೊಸ ವ್ಯವಸ್ಥೆ ಜಾರಿಗೆ ಬಲಿದೆ.

ನಿಯಮಗಳ ಪ್ರಕಾರ ಲಾರಿ ಹಾಗೂ ಭಾರೀ ಗಾತ್ರದ ವಾಹನಗಳು ಹೆದ್ದಾರಿಯ ಮೂರನೇ ಲೇನ್‌ನಲ್ಲೇ ಸಂಚರಿಸಬೇಕು. ಒಂದು ವೇಳೆ ಈ ವಾಹನಗಳು ಮೊದಲ ಹಾಗೂ ಎರಡನೇ ಲೇನ್‌ನಲ್ಲಿ ಸಂಚರಿಸಿದರೆ ಕ್ಯಾಮರಾಗಳು ಈ ವಾಹನಗಳ ಫೋಟೋ ಸೆರೆ ಹಿಡಿದು ಪೊಲೀಸರಿಗೆ ರವಾನೆ ಮಾಡಲಿದೆ.

ಲಾರಿಗಳು ಮುಂದಿನ ಟೋಲ್ ಬೂತ್ ತಲುಪಿದ ಕೂಡಲೇ ಇದರ ಮಾಹಿತಿ ಲಭ್ಯ ಆಗಲಿದೆ.ಇನ್ನು ಹೆಲ್ಮೆಟ್ ಇಲ್ಲದೆ ಚಲಾಯಿಸುವ ದ್ವಿಚಕ್ರ ವಾಹನ ಸವಾರರನ್ನೂ ಗುರ್ತಿಸಲಾಗುತ್ತದೆ. ದ್ವಿಚಕ್ರ ವಾಹನಗಳಲ್ಲಿ ಮೂರು ಅಥವಾ ಅದಕ್ಕಿಂತ ಹೆಚ್ಚು ಜನ ಪ್ರಯಾಣಿಸುತ್ತಿದ್ದರೂ ಸಿಕ್ಕಿಬೀಳಲಿದ್ದಾರೆ.

ಶೂಟಿಂಗ್ ಶಿವಣ್ಣ ನಿಧನ



ಮೈಸೂರು,ಜು.29–ಕನ್ನಡ ಚಿತ್ರರಂಗದ ರೆಬಲ್ ಸ್ಟಾರ್ ದಿ. ಅಂಬರೀಶ್ ಅವರ ಆಪ್ತರಾದ ಮೈಸೂರಿನ ಬಸವೇಶ್ವರ ಮುಖ್ಯ ರಸ್ತೆ ನಿವಾಸಿ ಶೂಟಿಂಗ್ ಶಿವಣ್ಣ (75) ಅವರು ಶನಿವಾರ ಸಂಜೆ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರು ಕನ್ನಡ ಚಿತ್ರರಂಗದ ತಾಂತ್ರಿಕ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರಿಂದ ಅವರನ್ನು ಶೂಟಿಂಗ್ ಶಿವಣ್ಣ ಎಂದು ಕರೆಯಲಾಗುತ್ತಿತ್ತು ಎನ್ನಲಾಗಿದೆ. ಭಾನುವಾರ ಮಧ್ಯಾಹ್ನ 12 ಗಂಟೆಗೆ ವಿದ್ಯಾರಣ್ಯಪುರಂನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ಸೌಜನ್ಯ ಅತ್ಯಾಚಾರ, ಕೊಲೆ ಪ್ರಕರಣ ಮರು ತನಿಖೆಗೆ ಒತ್ತಾಯಿಸಿ
ಮುಂದಿನ ವಾರ ಬೃಹತ್ ಮೌನ ಪ್ರತಿಭಟನಾ ಮೆರವಣಿಗೆ



ಮೈಸೂರು, ಜು.29(ಪಿಎಂ)– ಧರ್ಮಸ್ಥಳದ ಸೌಜನ್ಯ ಅತ್ಯಾಚಾರ, ಕೊಲೆ ಪ್ರಕರಣದ ಮರು ತನಿಖೆಗೆ ಒತ್ತಾಯಿಸಿ ಮುಂದಿನ ವಾರದಲ್ಲಿ ಬೃಹತ್ ಮೌನ ಪ್ರತಿಭಟನಾ ಮೆರವಣಿಗೆ ನಡೆಸಲು ಒಕ್ಕಲಿಗ ಸಮುದಾಯದ ವಿವಿಧ ಸಂಘಟನೆಗಳ ಮುಖಂಡರ ಸಭೆಯಲ್ಲಿ ನಿರ್ಧರಿಸಲಾಯಿತು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಶನಿವಾರ ನಡೆದ ಸಭೆಯಲ್ಲಿ ಒಕ್ಕಲಿಗ ಸಮುದಾಯದ ವಿವಿಧ ಸಂಘಟನೆಗಳ ಮುಖಂಡರು ಚರ್ಚಿಸಿ ಅಂತಿಮವಾಗಿ ಈ ನಿರ್ಧಾರ ಕೈಗೊಂಡರು. ಅಪ್ರಾಪ್ತ ಬಾಲಕಿ ಸೌಜನ್ಯಳ ಅತ್ಯಾಚಾರ ಮತ್ತು ಹತ್ಯೆ ಪ್ರಕರಣ ಸಂಬಂಧ ನ್ಯಾಯ ದೊರಕ ಬೇಕು. ಕೃತ್ಯ ನಡೆದು ದಶಕವೇ ಕಳೆದರೂ ತಪ್ಪಿತಸ್ಥರಿಗೆ ಶಿಕ್ಷೆಯಾಗದಿರುವುದು ದುರಂತ ಎಂದು ಸಭೆಯಲ್ಲಿ ಬೇಸರ ವ್ಯಕ್ತವಾಯಿತು.

ಪ್ರಕರಣ ಸಂಬಂಧ ಮರು ತನಿಖೆಯಾಗಬೇಕು. ಕೃತ್ಯ ನಡೆಸಿರುವ ದುಷ್ಕರ್ಮಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ಈ ನಿಟ್ಟಿನಲ್ಲಿ ಮುಂದಿನ ವಾರದಲ್ಲಿ ಮೇಣದಬತ್ತಿ ಹಿಡಿದು ಬೃಹತ್ ಮೌನ ಪ್ರತಿಭಟನಾ ಮೆರವಣಿಗೆ ನಡೆಸಬೇಕೆಂದು ಸಭೆಯಲ್ಲಿ ಒಕ್ಕೊರಲಿನಿಂದ ನಿರ್ಣಯಿಸಲಾಯಿತು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಕೆ.ವಿ.ಶ್ರೀಧರ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್‌ಗೌಡ, ಒಕ್ಕಲಿಗರ ಯುವ ವೇದಿಕೆ ಅಧ್ಯಕ್ಷ ರಾಜ್‌ಕುಮಾರ್, ತಾಲೂಕು ಒಕ್ಕಲಿಗರ ಸಂಘದ ಕಾರ್ಯದರ್ಶಿ ಕೃಷ್ಣ, ಒಕ್ಕಲಿಗರ ಯುವ ಪಡೆಯ ಕಾರ್ತಿಕ್‌ಗೌಡ, ಒಕ್ಕಲಿಗರ ಸಂಘದ ನಿರ್ದೇಶಕ ಎ.ರವಿ, ಕಾರ್ಯದರ್ಶಿ ಚೇತನ್, ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಮುಖಂಡರಾದ ಪ್ರಶಾಂತ್, ಉಮೇಶ್, ಕೃಷ್ಣಪ್ಪ ವಸಂತ, ಮನಿಶ್, ಲಕ್ಷ್ಮೀ, ಹೇಮಾ, ಯೋಗಾವತಿ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರು ಬಿಜೆಪಿ ಕಚೇರಿಗೆ ಭೇಟಿ ನೀಡಿದ್ದ ಬೀದರ್ ದಕ್ಷಿಣ ಕ್ಷೇತ್ರ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಅವರನ್ನು ನಗರಾಧ್ಯಕ್ಷರೂ ಆದ ಕೆಆರ್ ಕ್ಷೇತ್ರ ಶಾಸಕ ಟಿ.ಎಸ್.ಶ್ರೀವತ್ಸ ಸನ್ಮಾನಿಸಿದರು. ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ವಾಣೀಶ್‌ಕುಮಾರ್, ಎಸ್.ಮಹದೇವಸ್ವಾಮಿ, ಪಾಲಿಕೆ ಮಾಜಿ ಸದಸ್ಯರಾದ ಜೈರಾಮ್ ಪಾಪಣ್ಣ, ಕಂಡೇಶ್, ಮಾಧ್ಯಮ ಸಹ ಸಂಚಾಲಕ ಪ್ರದೀಪ್‌ಕುಮಾರ್, ನಗರ ರೈತ ಮೋರ್ಚಾ ಅಧ್ಯಕ್ಷ ದೇವರಾಜ್, ನಗರ ಹಿಂದುಳಿದ ವರ್ಗ ಮೋರ್ಚಾದ ಉಪಾಧ್ಯಕ್ಷ ಶಿವರಾಜ್ ಚಿತ್ರದಲ್ಲಿದ್ದಾರೆ.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು, ಜು.29– 2023–24ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ (ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಬಾಲಕ ಮತ್ತು ಬಾಲಕಿ ವಿದ್ಯಾರ್ಥಿನಿಲಯಗಳ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, ಪ.ಜಾತಿ, ಪ.ವರ್ಗ ಮತ್ತು ಇತರೆ ವಿವಿಧ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಂದ sw.kar.nic.in ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 16 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ sw.kar.nic.in ಡಾ.ಬಾಬು ಜಗಜೀವನ ರಾಮ್ ಭವನದಲ್ಲಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1 ಅಥವಾ ದೂ.ಸಂ: 0821–2520910 ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ; 9 ಮಂದಿ ಸಾವು



ಚೆನ್ನೈ,ಜು.29–ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯಲ್ಲಿ ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ ಸಂಭವಿಸಿದ ಪರಿಣಾಮ 9 ಮಂದಿ ಸಾವನ್ನಪ್ಪಿ, ಹಲವರಿಗೆ ಗಾಯವಾಗಿರುವ ಘಟನೆ ಶನಿವಾರ ನಡೆದಿದೆ. ಕೃಷ್ಣಗಿರಿಯ ಮುರುಗನ್ ದೇವಸ್ಥಾನದ ರಸ್ತೆಯಲ್ಲಿರುವ ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ ಸಂಭವಿಸಿದೆ ಎಂದು ತಿಳಿದುಬಂದಿದೆ.

ಕಾರ್ಖಾನೆಯಲ್ಲಿ ಸ್ಫೋಟ ಸಂಭವಿಸಿದ ಬಳಿಕ ಹತ್ತಿರದಲ್ಲಿದ್ದ 3 ಮನೆಗಳಿಗೂ ಬೆಂಕಿ ಹೊತ್ತಿಕೊಂಡಿದೆ. ಪರಿಣಾಮ ಘಟನೆಯಲ್ಲಿ 9 ಮಂದಿ ಸಾವನ್ನಪ್ಪಿ, ಹಲವರು ಗಾಯಗೊಂಡಿದ್ದಾರೆಂದು ವರದಿಗಳು ತಿಳಿಸಿವೆ. ಮೃತರನ್ನು ಕಾರ್ಖಾನೆ ಮಾಲೀಕ ರವಿ, ಅವರ ಪತ್ನಿ ಜಯಶ್ರೀ, ಪುತ್ರಿ ರುತಿಕ್ಕ ಮತ್ತು ಮಗ ರುತೀಶ್ ಎಂದು ಗುರುತಿಸಲಾಗಿದೆ.

ಕಾರ್ಖಾನೆ ಬಳಿ ರೆಸ್ಟೋರೆಂಟ್ ನಡೆಸುತ್ತಿದ್ದ ರಾಜೇಶ್ವರಿ, ವೆಲ್ಡಿಂಗ್ ಶಾಪ್ ಹೊಂದಿದ್ದ ಇಬ್ರಾಹಿಂ ಮತ್ತು ಇಮ್ರಾನ್, ವಾಟರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸರಸು ಮತ್ತು ಜೇಮ್ಸ್ ಎಂಬುವವರೂ ಕೂಡ ಘಟನೆಯಲ್ಲಿ ಸಾವನ್ನಪ್ಪಿದ್ದಾರೆಂದು ತಿಳಿದುಬಂದಿದೆ.

ಈ ನಡುವೆ ಘಟನೆಯಲ್ಲಿ ಹಲವರು ಕಟ್ಟಡಗಳಲ್ಲಿ ಸಿಲುಕಿರುವ ಶಂಕೆಗಳು ವ್ಯಕ್ತವಾಗಿದ್ದು, ಸ್ಥಳಕ್ಕೆ ಭೇಟಿ ನೀಡಿರುವ ಅಧಿಕಾರಿಗಳು, ರಕ್ಷಣಾ ಕಾರ್ಯಾಚರಣೆ ಆರಂಭಿಸಿದ್ದಾರೆ. ಗಾಯಾಳುಗಳನ್ನು ಕೃಷ್ಣಗಿರಿ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ರವಾನಿಸಲಾಗಿದ್ದು, ಕೆಲವರ ಸ್ಥಿತಿ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ.

ಕಾರ್ಖಾನೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪಟಾಕಿ ಶೇಖರಣೆ ಮಾಡಿ ಇಡಲಾಗಿತ್ತು. ಇಂದು ಬೆಳಗ್ಗೆ ಸುಮಾರು 9.30ರ ಸುಮಾರಿಗೆ ಕಾರ್ಖಾನೆಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಇದರಿಂದಾಗಿ ಸ್ಫೋಟ ಸಂಭವಿಸಿದೆ. ಪರಿಣಾಮ ಕಾರ್ಖಾನೆ ಸುತ್ತಮುತ್ತಲಿನ 7–8 ಮನೆಗಳಿಗೆ ಭಾರಿ ಹಾನಿ ಸಂಭವಿಸಿದೆ. ಜನನಿಬಿಡ ಪ್ರದೇಶದಲ್ಲಿ ಈ ಕಾರ್ಖಾನೆ ಇದ್ದಿದ್ದರಿಂದ ಭಾರಿ ಪ್ರಮಾಣದ ಹಾನಿ ಸಂಭವಿಸಿದೆ ಎಂದು ಹೇಳಲಾಗುತ್ತಿದೆ

ಪಾಲಿಕೆ ವಲಯ ಕಚೇರಿ–3, 5ರ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿ

ಮೈಸೂರು, ಜು.29(ಆರ್‌ಕೆ)–ಮೈಸೂರು ಮಹಾ ನಗರಪಾಲಿಕೆಯ ಎಲ್ಲಾ ಒಂಭತ್ತು ವಲಯ ಕಚೇರಿಗಳಿಗೂ ಸುಸಜ್ಜಿತ ಸ್ವಂತ ಕಟ್ಟಡ ಒದಗಿಸಬೇಕೆಂಬ ಬಹು ವರ್ಷಗಳ ಬೇಡಿಕೆ ಇದೀಗ ಬಹುತೇಕ ಈಡೇರಿದಂತಾಗಿದೆ.

ಅಗ್ರಹಾರದ ಅಕ್ಕನ ಬಳಗ ಶಾಲೆ ಬಳಿ ಉದ್ಯಾನವನದ ಹಳೇ ಕಟ್ಟಡದಲ್ಲಿ ನಡೆಯುತ್ತಿದ್ದ ವಲಯ–1ರ ಕಚೇರಿಗಾಗಿ ಕೆ.ಆರ್.ಮೊಹಲ್ಲಾ, ಉತ್ತರಾದಿ ಮಠದ ರಸ್ತೆ 5ನೇ ಕ್ರಾಸ್‌ನಲ್ಲಿ ಹೊಸ ಕಟ್ಟಡ ನಿರ್ಮಿಸಿದ್ದು, ಇಂದು ಉದ್ಘಾಟನೆ ಮಾಡಲಾಯಿತು. ವಲಯ–2ರ ಕಚೇರಿಯು ಜಯನಗರ ರೈಲ್ವೆ ಗೇಟ್ ಬಳಿ ಈಗಾಗಲೇ ಸ್ವಂತ ಕಟ್ಟಡದಲ್ಲಿ ನಡೆಯುತ್ತಿದೆ.

ವಲಯ ಕಚೇರಿ–3ರ ಹೊಸ ಕಟ್ಟಡ ಕಾಮಗಾರಿಯು ಶಾರದಾದೇವಿನಗರದಲ್ಲಿ ಪ್ರಗತಿಯಲ್ಲಿದ್ದು, 2 ತಿಂಗಳೊಳಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ವಲಯ–4ರ ಕಚೇರಿಯು ಯಾದವಗಿರಿಯ ಆಕಾಶವಾಣಿ ಸರ್ಕಲ್‌ನಲ್ಲಿರುವ ಸ್ವಂತ ಕಟ್ಟಡದಲ್ಲಿದೆ. ಹೆಬ್ಬಾಳಿನ ಬಸವನ ಗುಡಿ ಸರ್ಕಲ್ ಬಳಿ ನಡೆಯುತ್ತಿರುವ ಪಾಲಿಕೆ ವಲಯ ಕಚೇರಿ–5ಕ್ಕಾಗಿ ಮಂಚೇಗೌಡನಕೊಪ್ಪಲಿನಲ್ಲಿ ನೂತನ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ. ವಲಯ–6ರ ಕಚೇರಿಯು ಶೇಷಾದ್ರಿ ಅಯ್ಯರ್ ರಸ್ತೆಯ ಸ್ವಂತ ಕಟ್ಟಡ ಹೊಂದಿದೆ. ಎಫ್‌ಟಿಎಸ್ ಸರ್ಕಲ್‌ನಲ್ಲಿ ನಡೆಯುತ್ತಿರುವ ವಲಯ ಕಚೇರಿ–7 ಸ್ವಂತ ಕಟ್ಟಡವಾದರೂ, ಮೂಲ ಸೌಲಭ್ಯವಿಲ್ಲದ ಕಾರಣ, ಅದೇ ಆವರಣದಲ್ಲೇ ಹೊಸ ಕಟ್ಟಡ ನಿರ್ಮಾಣಕ್ಕೆ ಕಾರ್ಯಾದೇಶ ನೀಡಲಾಗಿದ್ದು, ಇಷ್ಟರಲ್ಲೇ ಕಾಮಗಾರಿ ಆರಂಭವಾಗಲಿದೆ.



ಶಾರದಾದೇವಿನಗರದಲ್ಲಿ ನಿರ್ಮಾಣವಾಗುತ್ತಿರುವ ಪಾಲಿಕೆ ವಲಯ ಕಚೇರಿ–3ರ ಕಟ್ಟಡ.



ಮಂಚೇಗೌಡನಕೊಪ್ಪಲಿನಲ್ಲಿ ಪ್ರಗತಿಯಲ್ಲಿರುವ ವಲಯ ಕಚೇರಿ–5ರ ಕಟ್ಟಡ ಕಾಮಗಾರಿ.

ಉದಯಗಿರಿಯ ವಲಯ–8 ಮತ್ತು ಗಾಯತ್ರಿಪುರಂನ ವಲಯ–9ರ ಕಚೇರಿಗಳಿಗೂ ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ ಸ್ವಂತ ಕಟ್ಟಡ ನಿರ್ಮಿಸಲು ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಇನ್ನೊಂದು ವರ್ಷದೊಳಗಾಗಿ ಮೈಸೂರು ಮಹಾನಗರ ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳೂ ಸುಸಜ್ಜಿತ ಸ್ವಂತ ಕಟ್ಟಡ ಹೊಂದಲಿವೆ. ಹೊಸದಾಗಿ ನಿರ್ಮಿಸುತ್ತಿರುವ ಕಟ್ಟಡಗಳಲ್ಲಿ ವಾಹನ ನಿಲುಗಡೆ, ವಲಯಾಧಿಕಾರಿ, ಕಂದಾಯಾಧಿಕಾರಿ, ಅಸಿಸ್ಟೆಂಟ್ ಇಂಜಿನಿಯರ್, ಅಭಿವೃದ್ಧಿ ಅಧಿಕಾರಿಗಳಿಗೆ ಪ್ರತ್ಯೇಕ ಕೊಠಡಿಗಳು, ಕ್ಯಾಷ್ ಕೌಂಟರ್, ಕಂದಾಯ ವಸೂಲಿ ಸ್ಥಳ, ಸಿಬ್ಬಂದಿಗಳಿಗೆ, ಸಾರ್ವಜನಿಕರಿಗೆ ಸೂಕ್ತ ಸ್ಥಳಾವಕಾಶ, ಶೌಚಾಲಯಗಳಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. 50X80 ಅಡಿ ಅಳತೆಯವರೆಗಿನ ಆಸ್ತಿಗಳಿಗೆ ಸಂಬಂಧಿಸಿದಂತೆ ಖಾತೆ, ಕಂದಾಯ, ನಕ್ಷೆ ಅನುಮೋದನೆ, ಕಟ್ಟಡ ಪೂರ್ಣಗೊಂಡ ವರದಿ(CR) ಹೀಗೆ ಎಲ್ಲಾ ಸೇವೆಗಳನ್ನು ಒದಗಿಸಲು ವಲಯಾಧಿಕಾರಿಗಳಿಗೇ ಅಧಿಕಾರ ವಹಿಸಿರುವುದರಿಂದ ಅಲ್ಲಿ ಹೆಚ್ಚು ಕೆಲಸಗಳಿರುತ್ತವೆ. ಸಾರ್ವಜನಿಕರೂ ಸಹ ಸೇವೆಗಳನ್ನು ಆಯಾ ವಲಯ ಕಚೇರಿಗಳಲ್ಲೇ ಪಡೆಯುತ್ತಿದ್ದಾರೆ. ಈ ಹಿಂದೆ ಕೇವಲ 20X30 ಮತ್ತು 30X40 ಅಡಿ ಅಳತೆಯ ಆಸ್ತಿಗಳಿಗೆ ಸಂಬಂಧಿಸಿದ ಸೇವೆಗಳನ್ನು ಮಾತ್ರ ವಲಯ ಕಚೇರಿಗಳಲ್ಲಿ ಒದಗಿಸಲಾಗುತ್ತಿತ್ತು. ಅದಕ್ಕಿಂತ ಮೇಲ್ಪಟ್ಟ ದೊಡ್ಡ ಆಸ್ತಿಗಳ ಸಂಬಂಧ ಪಾಲಿಕೆಯ ಪ್ರಧಾನ ಕಚೇರಿಯಲ್ಲೇ ಕಡತಗಳು ವಿಲೇವಾರಿಯಾಗುತ್ತಿದ್ದವು.

ನಕ್ಕರೆ ಅದೇ ಸ್ವರ್ಗ

ನರೇಶ : ಕೋವಿಡ್ ಸಮಯದಲ್ಲಿ ಮಕ್ಕಳಿಗೆ ಶಂಕಿತ್, ಸೋಂಕಿತ್ ಅಂತ ಹೆಸರು ಇಟ್ಟಿದ್ದರಂತೆ...

ವೀರೇಶ : ಹೌದು... ಈಗ ಕಾಂಗ್ರೆಸ್ ಕಾಲದಲ್ಲಿ ಹುಟ್ಟಿದ ಮಕ್ಕಳಿಗೆ ಉಚಿತ್, ಖಚಿತ್, ನಿಶ್ಚಿತ್ ಅಂತ ಹೆಸರು ಇಡಬಹುದು.

ಮೈಸೂರು ಮಿತ್ರ

ಭಾನುವಾರ, 30 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಕೆಟ್ಟ ಅಭ್ಯಾಸ ಇರುವವನು ಬದಲಾಗಬಹುದು, ಆದರೆ
ಕೆಟ್ಟ ಆಲೋಚನೆ ಇರುವವನು ಎಂದಿಗೂ ಬದಲಾಗಲಾರ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬರಗಾಲದಲ್ಲಿ ಅಧಿಕ ಮಾಸ

ನಿಮ್ಮ ಪತ್ರಗಳು

ವರ್ಷದಲ್ಲಿ ವಿಚ್ಛೇದನಾ ಪ್ರಕರಣ ಇತ್ಯರ್ಥ ಸ್ವಾಗತಾರ್ಹ ನಿರ್ದೇಶನ

ಮಾನ್ಯರೆ,

ವಿಚ್ಛೇದನೆಯ ಪ್ರಕರಣಗಳನ್ನು ಒಂದು ವರ್ಷದ ಒಳಗಾಗಿ ಇತ್ಯರ್ಥಪಡಿಸಬೇಕೆಂದು ರಾಜ್ಯ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ರಾಜ್ಯದ ಅಧೀನ ನ್ಯಾಯಾಲಯಗಳಿಗೆ ನಿರ್ದೇಶನ ನೀಡಿರುವುದು ಸ್ವಾಗತಾರ್ಹವಾಗಿದೆ. ಪ್ರಕರಣವೊಂದರ ಮೇಲ್ಮನವಿಯನ್ನು ಆಲಿಸುವ ವೇಳೆ ಈ ನಿರ್ದೇಶನ ನೀಡಿರುವ ಗೌರವಾನ್ವಿತ ನ್ಯಾಯಮೂರ್ತಿಗಳು ರಾಜ್ಯದ ಕೌಟುಂಬಿಕ ನ್ಯಾಯಾಲಯಗಳಲ್ಲಿ ಹಲವಾರು ವರ್ಷಗಳಿಂದ ವಿಲೇ ಆಗದೆ ಉಳಿದಿರುವ ವಿಚ್ಛೇದನೆಯ ಪ್ರಕರಣಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ಇಂದಿನ ಸಂಕೀರ್ಣವಾದ ಸಮಾಜದಲ್ಲಿ ವಿವಾಹ ವಿಚ್ಛೇದನ ಕೋರಿ ನ್ಯಾಯಾಲಯಗಳಿಗೆ ಬರುತ್ತಿರುವ ಪ್ರಕರಣಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಸಣ್ಣಪುಟ್ಟ ಸಮಸ್ಯೆಗಳು ಸಹಾ ದೊಡ್ಡ ಸಮಸ್ಯೆಗಳಾಗಿ ರೂಪಾಂತರಗೊಂಡು, ವಿವಾಹ ವಿಚ್ಛೇದನಗೆ ಕಾರಣವಾಗುತ್ತಿದೆ. ಇಂದು ಮಹಿಳೆ ಬಹುತೇಕ ಉದ್ಯೋಗಸ್ಥೆಯಾಗಿರುವುದರಿಂದ, ಆಕೆಗೂ ಒಂದು ರೀತಿಯ ಬಲ ಬಂದಿದೆಯೆಂದು ಹೇಳಬಹುದು.

ಗಂಡನ ನಿರಂತರ ಕಿರುಕುಳ, ದೈಹಿಕ ಹಾಗೂ ಮಾನಸಿಕ ಹಿಂಸೆ, ವರದಕ್ಷಿಣೆಗಾಗಿ ಪೀಡನೆ, ಮುಂತಾದವು ವಿವಾಹಿತ ಮಹಿಳೆ ವಿಚ್ಛೇದನೆ ಪಡೆಯಲು ಕಾರಣವಾಗುತ್ತಿದೆ. ಅದೇ ರೀತಿ, ವಿವಾಹಿತ ಪುರುಷನಿಗೂ ಸಹ, ಹೆಂಡತಿಯಿಂದ ಬೇರಾಗಲು ಹಲವಾರು ಕಾರಣಗಳಿರಬಹುದು. ಒಟ್ಟಿನಲ್ಲಿ ವಿವಾಹ ಒಂದು ಪವಿತ್ರ ಬಂಧನ, ಏಳು ಜನ್ಮಗಳ ಅನುಬಂಧ ಎಂಬ ಭಾವನೆ ಮಸುಕಾಗುತ್ತಿದೆ.

ವೈವಾಹಿಕ ಪ್ರಕರಣಗಳ ವಿಲೇವಾರಿಯಲ್ಲಿ ವಿಳಂಬವಾದರೆ, ಇಬ್ಬರ (ಪತ್ನಿ–ಪತಿ) ಮೇಲೂ ಕೆಟ್ಟ ಪರಿಣಾಮ ಉಂಟಾಗುತ್ತದೆ. ವೈವಾಹಿಕ ಪ್ರಕರಣಗಳಲ್ಲಿ ತ್ವರಿತ ತೀರ್ಪು ನೀಡಿದಲ್ಲಿ, ಇಬ್ಬರೂ ತಮ್ಮ ಜೀವನವನ್ನು ಪುನರ್ ರೂಪಿಸಿಕೊಳ್ಳಬಹುದು. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು, ವೈವಾಹಿಕ ಪ್ರಕರಣಗಳ ವಿಲೇವಾರಿಯನ್ನು ಯುದ್ಧೋಪಾದಿಯಲ್ಲಿ ಕೈಗೊಳ್ಳಬೇಕಿದೆ ಎಂದು ಹೈಕೋರ್ಟ್ ಅರ್ಜಿದಾರ ರಾಜೀವ್ ಅವರ ಪ್ರಕರಣವನ್ನು ಮೂರು ತಿಂಗಳಲ್ಲಿ ಇತ್ಯರ್ಥಪಡಿಸುವಂತೆ ಬೆಂಗಳೂರಿನ 5ನೇ ಹೆಚ್ಚುವರಿ ಕೌಟುಂಬಿಕ ನ್ಯಾಯಾಲಯಕ್ಕೆ ಸೂಚಿಸಿದೆ. ಅಲ್ಲದೇ ಈ ಆದೇಶವನ್ನು ಸಂಬಂಧಪಟ್ಟವರೆಲ್ಲರಿಗೂ ರವಾನಿಸುವಂತೆ, ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ಸೂಚಿಸಿರುವ ನ್ಯಾಯಪೀಠ, ಇದರಿಂದ ಇಂತಹುದೇ ಪ್ರಕರಣಗಳನ್ನು ಎದುರಿಸುತ್ತಿರುವವರು ತಮ್ಮ ಅರ್ಜಿಗಳ ವಿಲೇವಾರಿಗೆ ನಿರ್ದೇಶನ ನೀಡುವಂತೆ ಕೋರಿ, ಉಚ್ಚ ನ್ಯಾಯಾಲಯದ ಕದ ತಟ್ಟುವ ಪ್ರಮೇಯ ಉದ್ಭವಿಸಬಾರದು ಎಂದು ಹೇಳಿದೆ.

ಒಟ್ಟಿನಲ್ಲಿ ಈ ಆದೇಶವು ವಿವಾಹ ವಿಚ್ಛೇದನ ಪ್ರಕರಣಗಳ ತ್ವರಿತ ವಿಲೇವಾರಿಗೆ ಸಹಕಾರಿಯಾಗಲಿ ಎಂದು ಆಶಿಸೋಣ.

–ಕೆ.ವಿ.ವಾಸು, ವಕೀಲರು, ನೋಟರಿ, ವಿವೇಕಾನಂದನಗರ, ಮೈಸೂರು.

ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ಅಗತ್ಯ

ಮಾನ್ಯರೆ,

ನಮ್ಮ ದೇಶ ಹಲವಾರು ವಿಶಿಷ್ಟ ಸ್ಥಳಗಳನ್ನು ಹೊಂದಿದೆ ಮತ್ತು ಹಲವಾರು ಪ್ರಸಿದ್ಧ ಸ್ಥಳಗಳು ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿದವುಗಳಾಗಿವೆ. ಇದೇ ಹಾದಿಯಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಹಲವಾರು ಪ್ರವಾಸಿ ತಾಣಗಳಿವೆ. ರಾಜ್ಯದ ಆರ್ಥಿಕ ಬೆಳವಣಿಗೆಗೆ ಆದಾಯ ಮುಖ್ಯವಾಗಿದ್ದು, ಪ್ರವಾಸೋದ್ಯಮ ವಿಭಾಗವು ಈ ನಿಟ್ಟಿನಲ್ಲಿ ರಾಜ್ಯದ ಬೊಕ್ಕಸಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಿದೆ.

ಹಲವಾರು ಪಾಶ್ಚಿಮಾತ್ಯ ರಾಷ್ಟ್ರಗಳು ಪ್ರವಾಸಕ್ಕೆ ಹೆಚ್ಚು ಒತ್ತು ಕೊಟ್ಟು ಕೇವಲ ಪ್ರವಾಸಿಗರಿಂದಲೇ ದೇಶದ ಬೊಕ್ಕಸವನ್ನು ತುಂಬಿಸಿಕೊಳ್ಳುತ್ತಿವೆ. ಉದಾಹರಣೆಗೆ: ಸ್ವಿಟ್ಜರ್ಲೆಂಡ್, ಫ್ರಾನ್ಸ್, ಜರ್ಮನಿ, ಅಮೆರಿಕಾ, ಬ್ರಿಟನ್ ಮತ್ತು ಏಷ್ಯಾದ ಜಪಾನ್, ಥೈಲ್ಯಾಂಡ್, ಫಿಲಿಪೈನ್ಸ್, ಮಾರಿಷಸ್, ಮಾಲ್ಡೀವ್ಸ್, ಮಕಾವು, ಚೀನಾ, ದುಬೈ, ಯುಎಯಿ ಇತ್ಯಾದಿ ರಾಷ್ಟ್ರಗಳು. ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಲಿಸಿದರೆ ನಮ್ಮ ರಾಷ್ಟದಲ್ಲಿ ಪ್ರವಾಸೋದ್ಯಮ ಸ್ಥಳಗಳಲ್ಲಿ ಮೂಲ ಸೌಕರ್ಯಗಳು ಉತ್ತಮವಾಗಿಲ್ಲ. ನಮ್ಮ ಕರ್ನಾಟಕದಲ್ಲಿ ಕೂಡ ಪ್ರವಾಸೋದ್ಯಮ ಕ್ಷೇತ್ರಕ್ಕೆ ಇತ್ತೀಚೆಗೆ ಪ್ರೋತ್ಸಾಹ ದೊರಕುತ್ತಿದ್ದರೂ ಇನ್ನೂ ಹೆಚ್ಚು ಪ್ರೋತ್ಸಾಹದ ಅಗತ್ಯವಿದೆ.

ಕರ್ನಾಟಕದಲ್ಲಿ ಹಲವಾರು ಪ್ರವಾಸಿ ತಾಣಗಳಿವೆ. ಇಲ್ಲಿ ದೇಶ ವಿದೇಶಗಳಿಂದ ಪ್ರವಾಸಿಗರು ಬರುತ್ತಾರೆ. ಉದಾಹರಣೆಗೆ: ವಿಶ್ವ ಪಾರಂಪರಿಕ ತಾಣವಾದ ಹಂಪಿ, ಬಾದಾಮಿ, ಇತರೆ ಸ್ಥಳಗಳಾದ ಬೇಲೂರು, ಹಳೇಬೀಡು, ಜೋಗ ಜಲಪಾತ, ಸೋಮನಾಥಪುರ, ಪಟ್ಟದ ಕಲ್ಲು, ಕಲತ್ತಿಗಿರಿ, ಚಾಮುಂಡಿಬೆಟ್ಟ, ಮೈಸೂರು ಅರಮನೆ, ಕುದುರೆಮುಖ, ಕೊಡಚಾದ್ರಿ, ಚಿತ್ರದುರ್ಗದ ಕೋಟೆ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಮೇಲಿನ ಕೆಲವು ಪಟ್ಟಣ ಪ್ರದೇಶಗಳನ್ನು ಹೊರತು ಪಡಿಸಿ ಬೇರೆ ಎಲ್ಲಾ ಪ್ರವಾಸಿ ತಾಣಗಳಲ್ಲಿ ಮೂಲ ಸೌಕರ್ಯಗಳ ಕೊರತೆಯಿದೆ ಉದಾಹರಣೆಗೆ: ಉತ್ತಮ ಗುಣಮಟ್ಟದ ಹೋಟೆಲ್, ಆಸ್ಪತ್ರೆ, ತಂಗಲು ಲಾಡ್ಜ್‌ಗಳ ಕೊರತೆಯಿದ್ದು ಕೆಲವು ಸ್ಥಳಗಳಲ್ಲಿ ರಕ್ಷಣೆ ಕೊರತೆ ಸಹ ಇದೆ. ರಾಜ್ಯ ಸರ್ಕಾರ ನಮ್ಮ ರಾಜ್ಯದ ಎಲ್ಲಾ ಪ್ರವಾಸಿ ತಾಣಗಳಲ್ಲಿ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದರೆ, ಹೆಚ್ಚಿನ ಸಂಖ್ಯೆಯಲ್ಲಿ ಪ್ರಾವಾಸಿಗರ ಭೇಟಿ ನೀಡುತ್ತಾರೆ ಮತ್ತು ಇದರಿಂದ ರಾಜ್ಯದ ಅದಾಯವು ಹೆಚ್ಚುತ್ತದೆ ಹಾಗೂ ಪ್ರವಾಸಿ ತಾಣಗಳ ಬಗ್ಗೆ ಪರಿಣತ ಸ್ಥಳೀಯರಿಗೆ ಉದ್ಯೋಗವು ದೊರಕಿದಂತಾಗುತ್ತದೆ. ರಾಜ್ಯ ಸರ್ಕಾರವು ಪ್ರವಾಸೋದ್ಯಮ ಇಲಾಖೆಯಲ್ಲಿನ ಉದ್ಯೋಗಿಗಳನ್ನು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಪ್ರವಾಸ ಕಳಿಸಿ ಅಲ್ಲಿನ ಪ್ರವಾಸೋದ್ಯಮದ ಅಧ್ಯಯನ ನಡೆಸಿ ಆ ಅನುಭವವನ್ನು ನಮ್ಮ ರಾಜ್ಯದಲ್ಲಿ ಅಳವಡಿಸಿಕೊಳ್ಳುವ ಮೂಲಕ ರಾಜ್ಯದ ಪ್ರವಾಸೋದ್ಯಮವನ್ನು ಉತ್ತುಂಗಕ್ಕೇರುವಂತಾಗಲಿ ಎಂದೂ ಅಶಿಸೋಣ.

– ರಾಸುಮ ಭಟ್, ಚಿಕ್ಕಮಗಳೂರು.

ರಸ್ತೆಬದಿ ವ್ಯಾಪಾರಿಗಳಿಗೆ ಮಳಿಗೆ ನಿರ್ಮಿಸಲಿ

ಮಾನ್ಯರೆ,

ಮಳೆಗಾಲ ಬಂದು ಮಳೆ ಬಂದರೆ ಒಂದಷ್ಟು ಒಳ್ಳೆಯದಾಗಲಿ ಎಂಬುದು ಜನತೆಯ ಸತ್ಯವಾದ ಮಾತುಗಳು. ಅದೇ ತರಹ ಮಳೆಯಿಂದ ರೈತರು ಬೆಳೆಗಳನ್ನು ಬೆಳೆದು ಜೀವನದಲ್ಲಿ ಸುಖ ಕಾಣುವುದುಂಟು. ಇದರ ನಡುವೆ ನಗರ ಪ್ರದೇಶಗಳನ್ನು ಒಳಗೊಂಡಂತೆ ಕೆಲವು ಪ್ರದೇಶಗಳಲ್ಲಿ ಜೀವನ ಸಾಗಿಸುವ ಸಲುವಾಗಿ ರಸ್ತೆ ಬದಿಗಳಲ್ಲಿ ಅನೇಕ ಜನರು ವಿವಿಧ ವ್ಯಾಪಾರಗಳನ್ನು ಮಳಿಗೆ ಇಲ್ಲದೆ ರಸ್ತೆಯ ಬದಿಯಲ್ಲಿ ವ್ಯಾಪಾರಿಗಳು ಮಾಡುತ್ತಾರೆ. ಮಳೆ ಬಂದರೆ ವ್ಯಾಪಾರಕ್ಕೂ ಅಡ್ಡಿಯಾಗಿ ಹಣ ಸಂಪಾದನೆ ಇಲ್ಲದೆ ಜೀವನ ಸಾಗಿಸಲು ಪರದಾಡುವಂತಹ ಸ್ಥಿತಿ ನಿರ್ಮಾಣವಾಗುತ್ತಿರುತ್ತದೆ. ಸರ್ಕಾರವು ರಾಜ್ಯದಾದ್ಯಂತ ರಸ್ತೆಬದಿ ವ್ಯಾಪಾರಿಗಳ ಸ್ಥಿತಿ–ಗತಿಗಳನ್ನು ತಿಳಿದು ರಾಜ್ಯದಾದ್ಯಂತ ವ್ಯಾಪಾರ ಮಳಿಗೆಗಳನ್ನು ನಿರ್ಮಿಸಿ ರಸ್ತೆಬದಿ ವ್ಯಾಪಾರಿಗಳಿಗೆ ಅನೂಕೂಲ ಮಾಡಿಕೊಡಲಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ನಮ್ಮದು ಸೂಜಿಯಂತಹ ಬದುಕಾಗಬೇಕು!!

“ ನಮ್ಮ ಜನಾಂಗ–ಸಮುದಾಯಕ್ಕೆ ವಿಧಾನಸಭಾ ಚುನಾವಣೆಯಲ್ಲಿ ಇಷ್ಟು ಸ್ಥಾನಗಳನ್ನು ನೀಡಬೇಕು ಎಂಬ ಆಗ್ರಹಗಳು ಕೇಳಿಬಂದವು. ಆದರೆ ಜಾತಿಯಾಧಾರಿತ ಸಂಖ್ಯೆಯ ನಿಖರ ಮಾಹಿತಿ ನಮಗೆ ಲಭ್ಯವಾಗಿಲ್ಲ. ಆದರೂ ಒಂದು ಅಂದಾಜಿನ ಮೇರೆಗೆ ಎಲ್ಲಾ ಜಾತಿಯವರೂ ನಮ್ಮ ಜನಸಂಖ್ಯೆ ಇಷ್ಟು ಎಂದು ಹೇಳಿಕೊಂಡೇ ಚುನಾವಣೆಗೆ ಟಿಕೆಟ್ ನೀಡಲು ಕೋರುತ್ತಾರೆ. ಚುನಾವಣೆ ಇಲ್ಲದ ಸಮಯದಲ್ಲಿ ಇಂತಹ ಸಮ್ಮೇಳನಗಳು ನಡೆದರೆ ಆಗ 'ನಮ್ಮ ಸಮಾಜದಲ್ಲಿ ಒಗ್ಗಟ್ಟು ಇಲ್ಲ, ಆದ್ದರಿಂದ ನಾವು ಹಿಂದುಳಿದಿದ್ದೇವೆ. ನಾವು ಒಗ್ಗಟ್ಟಾಗುವವರೆಗೂ ನಮಗೆ ಯಾವುದೇ ಮಾನ್ಯತೆ ಸಿಗುವುದಿಲ್ಲ' ಎಂದು ಹೇಳಿ ಭಾಷಣ ಬಿಗಿಯುವುದನ್ನು ನೋಡುತ್ತೇವೆ. ಯಾವುದೇ ಧರ್ಮ ಅಥವಾ ಜಾತಿಯವರು ನಾವು ಒಗ್ಗಟ್ಟಾಗಿದ್ದೇವೆ, ನಮಗೆ ಈಗ ದೊರಕಿರುವ ಸೌಲಭ್ಯಗಳು ಸಾಕು ಎಂದು ಹೇಳುವುದೇ ಇಲ್ಲ.

ಇತ್ತೀಚೆಗೆ ನಮ್ಮಲ್ಲಿ ಸಮಾಜವನ್ನು ಒಂದು ಮಾಡುವ ಬದಲು ವಿಭಜಿಸುವಂತಹ ಕೆಲಸಗಳು ಹೆಚ್ಚಾಗಿ ಕಂಡುಬರುತ್ತಿವೆ. ನಮಗಿರುವುದು ಒಂದೇ ಭಾರತ. ಮೊದಲಿನಿಂದಲೂ ಹೇಳಿಕೊಂಡು ಬರುತ್ತಿರುವುದು ಏನೆಂದರೆ 'ನಾವೆಲ್ಲಾ ಭಾರತೀಯರು, ನಮಗೆ ಒಬ್ಬಳೇ ತಾಯಿ, ಆಕೆಯೇ ಭಾರತ ಮಾತೆ' ಎಂದು. ಇಲ್ಲಿ ನಾವು ನಮ್ಮ ನಮ್ಮ ಪದ್ಧತಿಯ ಪ್ರಕಾರ ಒಂದಷ್ಟು ಆಚರಣೆಗಳಿವೆ. ಆದರೆ ಅವುಗಳು ನಮ್ಮ ಮನೆಮಟ್ಟಿಗೆ ಇರಬೇಕು. ಹೊರಗೆ ಬಂದಾಗ ನಾನು ಈ ದೇಶದ ಒಂದು ಬಿಂದು ಮಾತ್ರ. ನನ್ನಂತೆ ಇತರರಿಗೂ ಜೀವಿಸುವ ಹಕ್ಕಿದೆ. ಆದ್ದರಿಂದ ಯಾರ ಭಾವನೆಗೂ ಧಕ್ಕೆಯಾಗದಂತೆ ಜೀವನ ಮಾಡಬೇಕು, ಎಲ್ಲ ಧರ್ಮಗಳನ್ನೂ ಏಕ ಭಾವದಿಂದ ಗೌರವಿಸಬೇಕು ಎಂದೇ ಹೇಳಿಕೊಂಡು ಬರಲಾಗುತ್ತಿದೆ. ಈ ಮಾತುಗಳನ್ನು ದೇಶಕ್ಕೆ ಸ್ವಾತಂತ್ರ್ಯ ಬರುವವರೆಗೂ ಎಲ್ಲರೂ ಒಪ್ಪಿ ಪಾಲಿಸಿಕೊಂಡು ಬಂದರು. ಆದರೆ ಸ್ವಾತಂತ್ರ್ಯಾ ನಂತರ, ಕಾಲ ಕಳೆದಂತೆ, ನಾನು, ನನ್ನ ಜಾತಿ, ನನ್ನ ಧರ್ಮವೇ ಹೆಚ್ಚು ಎಂಬ ಮನೋಭಾವ ಬೆಳೆಯತೊಡಗಿತು. ಇದನ್ನು ನಿಯಂತ್ರಿಸುವವರೇ ಇಲ್ಲದಂತಾಗಿ ಒಂದು ರೀತಿಯ ಅರಾಜಕತೆಯ ವಾತಾವರಣ ನಿರ್ಮಾಣವಾಗುತ್ತಾ ಹೋಗುತ್ತಿದೆ. ನಮಗೆ ದೇಶಕ್ಕಿಂತ ನನ್ನ ಜಾತಿ, ಧರ್ಮವೇ ಮುಖ್ಯ ಎಂಬಂತೆ ಜನರ ಭಾವನೆಗಳು ಬದಲಾಗುತ್ತಲೇ ಹೋಗುತ್ತಿವೆ. ಇದು ನಮ್ಮನ್ನು ಬೇರೆಬೇರೆಯಾಗಿಸುತ್ತದೆ ಎಂಬುದನ್ನೂ ಯೋಚಿಸುತ್ತಿಲ್ಲ. ನಮ್ಮ ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಅನೇಕ ಜಾತಿ ಆಧಾರಿತ ಸಮ್ಮೇಳನಗಳು ಆಗಿರುವುದನ್ನು ನಾವು ಕಂಡಿದ್ದೇವೆ. ಈ ಸಮ್ಮೇಳನಗಳಲ್ಲಿ ನಾವು ರಾಜ್ಯದ ಶೇಕಡಾ ಇಷ್ಟು ಜನಸಂಖ್ಯೆಯನ್ನು ಹೊಂದಿದ್ದೇವೆ. ಆದ್ದರಿಂದ ನಮ್ಮ ಜನಾಂಗ–ಸಮುದಾಯಕ್ಕೆ ವಿಧಾನ ಸಭಾ ಚುನಾವಣೆಯಲ್ಲಿ ಇಷ್ಟು ಸ್ಥಾನಗಳನ್ನು ನೀಡಬೇಕು ಎಂಬ ಆಗ್ರಹಗಳು ಕೇಳಿಬಂದವು. ಆದರೆ ಜಾತಿಯಾಧಾರಿತ ಸಂಖ್ಯೆಯ ನಿಖರ ಮಾಹಿತಿ ನಮಗೆ ಲಭ್ಯವಾಗಿಲ್ಲ. ಆದರೂ ಒಂದು ಅಂದಾಜಿನ ಮೇರೆಗೆ ಎಲ್ಲಾ ಜಾತಿಯವರೂ ನಮ್ಮ ಜನಸಂಖ್ಯೆ ಇಷ್ಟು ಎಂದು ಹೇಳಿಕೊಂಡೇ ಚುನಾವಣೆಗೆ ಟಿಕೆಟ್ ನೀಡಲು ಕೋರುತ್ತಾರೆ. ಚುನಾವಣೆ ಇಲ್ಲದ ಸಮಯದಲ್ಲಿ ಇಂತಹ ಸಮ್ಮೇಳನಗಳು ನಡೆದರೆ ಆಗ 'ನಮ್ಮ ಸಮಾಜದಲ್ಲಿ ಒಗ್ಗಟ್ಟು ಇಲ್ಲ, ಆದ್ದರಿಂದ ನಾವು ಹಿಂದುಳಿದಿದ್ದೇವೆ. ನಾವು ಒಗ್ಗಟ್ಟಾಗುವವರೆಗೂ ನಮಗೆ ಯಾವುದೇ ಮಾನ್ಯತೆ ಸಿಗುವುದಿಲ್ಲ' ಎಂದು ಹೇಳಿ ಭಾಷಣ ಬಿಗಿಯುವುದನ್ನು ನೋಡುತ್ತೇವೆ. ಯಾವುದೇ ಧರ್ಮ ಅಥವಾ ಜಾತಿಯವರು ನಾವು ಒಗ್ಗಟ್ಟಾಗಿದ್ದೇವೆ, ನಮಗೆ ಈಗ ದೊರಕಿರುವ ಸೌಲಭ್ಯಗಳು ಸಾಕು ಎಂದು ಹೇಳುವುದೇ ಇಲ್ಲ. ಇತ್ತೀಚೆಗೆ ಇಂತಹ ಜಾತಿ ಸಮಾವೇಶಗಳಲ್ಲಿ ಮಠಾಧಿಪತಿಗಳೂ ಭಾಗವಹಿಸಿ ತಮ್ಮ ಜಾತಿಗೆ ಹೆಚ್ಚಿನ ರಾಜಕೀಯ ಸ್ಥಾನಮಾನ ಬೇಕು ಎಂದು ಹೇಳುವುದನ್ನು ಕೇಳಿದ್ದೇವೆ. ಜನರ ಜಯಕಾರದ ನಡುವೆ, ಇದಕ್ಕಾಗಿ ನಾವು ಸತ್ಯಾಗ್ರಹ ಮಾಡುತ್ತೇವೆ ಎಂದೂ ಹೇಳಿ ಮತ್ತಷ್ಟು ಜಯಕಾರ ಹಾಕಿಸಿಕೊಂಡಿದ್ದನ್ನೂ ಕಂಡಿದ್ದೇವೆ. ಹಾಗಾದರೆ ಈ ದೇಶದಲ್ಲಿರುವವರೆಲ್ಲರೂ ಹಿಂದುಳಿದುಬಿಟ್ಟಿದ್ದಾರೆ ಎಂದು ಅರ್ಥ ಮಾಡಿಕೊಳ್ಳಬೇಕೇ? ಒಂದು ಜಾತಿಯ ಎಲ್ಲರೂ ಒಂದೇ ಪಕ್ಷಕ್ಕೆ ಮತ ಹಾಕಬೇಕೆಂದು ಹೇಗೆ ಅಪೇಕ್ಷೆ ಪಡಲು ಸಾಧ್ಯ. ಹೀಗೆ ಎಲ್ಲರೂ ತಮ್ಮನ್ನು ಧರ್ಮ, ಜಾತಿಗೆ ಸೀಮಿತಗೊಳಿಸಿಕೊಳ್ಳುತ್ತಾ ಹೋದರೆ, ದೇಶದ ಬಗ್ಗೆ ಚಿಂತಿಸುವವರು ಯಾರು? ದೇಶದಲ್ಲಿ ಒಂದಷ್ಟು ಅಸಮಾಧಾನಗಳು ಯಾವಾಗಲೂ ಇರುವುದು ಸಹಜ. ಹಾಗೆಂದು ಅದನ್ನು ಬೆಳೆಸುತ್ತಾ ಹೋಗುವುದು ಎಷ್ಟರಮಟ್ಟಿಗೆ ಸರಿ? ಎಂಬ ಬಗ್ಗೆಯೂ ಆಲೋಚಿಸಬೇಕಾಗುತ್ತದೆ. ದೇಶ ಚೆನ್ನಾಗಿದ್ದಾಗ ನಾವು ದೇಶದೊಳಗೆ ಏನು ಮಾಡಿದರೂ ನಡೆಯುತ್ತದೆ. ಆದರೆ ದೇಶವೇ ನಮ್ಮ ನಿಯಂತ್ರಣದಲ್ಲಿ ಇಲ್ಲದಿದ್ದಾಗ ಹೇಗೆ ಪೇಚಾಡಿದರೂ ಪ್ರಯೋಜನವಾಗುವುದಿಲ್ಲ.



ಇದು ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶದ ಜನರಿಗೆ ಗೊತ್ತಿತ್ತು. ನಮ್ಮ ದೇಶದಲ್ಲೇ ನಾವು ಗುಲಾಮರಂತಿದ್ದೆವು. ಜೊತೆಗೆ ಬ್ರಿಟಿಷರು ನಮ್ಮ ಎಲ್ಲಾ ಧಾರ್ಮಿಕ ಆಚರಣೆಗಳನ್ನು ಖಂಡಿಸಿ, ಬಹಿಷ್ಕರಿಸಿ ಜನರು ಒಟ್ಟಿಗೆ ಸೇರದಂತೆ ನೋಡಿಕೊಂಡಿದ್ದರು. ಆಗ ದೇಶವೂ ಇಲ್ಲ, ಧಾರ್ಮಿಕ ಆಚರಣೆಗಳೂ ಇರಲಿಲ್ಲ. ಅಂತಹ ಸಮಯದಲ್ಲಿ ದೇಶಭಕ್ತಿ ಪ್ರಧಾನವಾಯಿತು. ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಅದು ಸ್ಪೂರ್ತಿಯೂ ಆಯಿತು. ಜನರು ಜಾತಿ, ಧರ್ಮ ನೋಡದೇ ಒಂದಾದರು. ಅವರಿಗೆ ಇದ್ದದ್ದು ಒಂದೇ ಗುರಿ, ದೇಶದ ಸ್ವಾತಂತ್ರ್ಯ ನಮ್ಮ ದೇಶ ನಮ್ಮದಾಗಬೇಕು ಎಂಬುದಾಗಿತ್ತು. ಪಾಕಿಸ್ತಾನ ಬೇರೆಯಾಗುವವರೆಗೂ, ಪಾಕ್ ಪ್ರದೇಶದ ಜನರು ಹೆಚ್ಚಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಆದರೆ ಕೆಲವರ ಹಿತಾಸಕ್ತಿಯಿಂದಾಗಿ ದೇಶ ಇಬ್ಭಾಗವಾಗಬೇಕಾಯಿತು. ಅಲ್ಲಿನ ಜನ ಇಲ್ಲಿಗೆ, ಇಲ್ಲಿನ ಜನ ಅಲ್ಲಿಗೆ ಸ್ಥಳಾಂತರವಾದರು. ಸಾಕಷ್ಟು ಸಾವು ನೋವುಗಳಾದವು. ಅಲ್ಲಿಯವರೆವಿಗೆ ಒಂದೇ ದೇಶದ ಜನರಾಗಿದ್ದವರು ಪರಸ್ಪರ ಶತ್ರುಗಳಂತಾಗಿ ಹೋದರು. ಇದನ್ನು ಕಂಡ ಹಿಂದಿನ ಸ್ವಾತಂತ್ರ್ಯ ಹೋರಾಟಗಾರರು ಇದಕ್ಕಾಗಿ ನಾವು ಇಷ್ಟು ಹೋರಾಟ ಮಾಡಬೇಕಿತ್ತಾ? ಎಂದು ನೊಂದು ಕೊಂಡರು. ಈಗ ನಮಗೆ ಸ್ವಾತಂತ್ರ್ಯ ಸಿಕ್ಕಿದೆ ಆದರೆ ನಮ್ಮ ಮನೋಭಾವ ಏನಾಗಿದೆ? ನಮಗೆ ಸ್ವಾತಂತ್ರ್ಯ ಹಾಗೂ ಸ್ವೇಚ್ಛತೆಯ ನಡುವಿನ ವ್ಯತ್ಯಾಸವೇ ಗೊತ್ತಿಲ್ಲದಂತಹ ನಡವಳಿಕೆಯನ್ನು ನಮ್ಮದಾಗಿಸಿಕೊಂಡುಬಿಟ್ಟಿದ್ದೇವೆ. ಇದರ ಪ್ರಭಾವವೇ ನಮಗೆ ದೇಶಕ್ಕಿಂತ ನಮ್ಮ ಧರ್ಮ, ಜಾತಿಯೇ ದೊಡ್ಡದಾಗಿ ಕಾಣುವಂತೆ ಆಗಿದೆ. ಇದು ನಿಜವಾಗಿಯೂ ಅನಪೇಕ್ಷಿತ ಬೆಳವಣಿಗೆ ಎಂದೇ ಹೇಳಬಹುದು. ಇಂದು ನಮ್ಮ ದೇಶವನ್ನು ನಾವೇ ಆಳಿಕೊಳ್ಳುತ್ತಿದ್ದೇವೆ. ಈಗ ಇಲ್ಲಿ ಬ್ರಿಟಿಷರಿಲ್ಲ, ಈಗ ನಾವು ಯಾರ ವಿರುದ್ಧ ಹೋರಾಟ ಮಾಡುವುದು? ಒಂದು ರೀತಿಯಲ್ಲಿ ನಮ್ಮ ವಿರುದ್ಧ ನಾವೇ ಹೋರಾಟ ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದನ್ನು ಉಪಯೋಗಿಸಿಕೊಂಡ ಒಂದಷ್ಟು ಜನರು, ಜನರ ನಡುವೆ ಭಿನ್ನಮತ ಮೂಡಿಸುವಂತಹ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಇದಕ್ಕೆ ಒಬ್ಬ ಹಿರಿಯರು ಪ್ರತಿಕ್ರಿಯಿಸಿದ್ದು 'ಇಂದು ನಮ್ಮ ದೇಶದಲ್ಲಿ ವಿವಿಧ ಜಾತಿ ವರ್ಗದ ಭಾರತೀಯರು ಕಂಡುಬರುತ್ತಾರೆ. ಆದರೆ ದೇಶಭಕ್ತರು ಕಾಣದಾಗಿದ್ದಾರೆ'. ಇದರ ಅರ್ಥ ಇಂದು ಮತ್ತೆ ಸಮಾಜ, ದೇಶವನ್ನು ಒಂದುಗೂಡಿಸುವವರು ಬೇಕಾಗಿದ್ದಾರೆ.

ಟೈಲರಿಂಗ್ ವೃತ್ತಿ ಮಾಡುವವರು ಕತ್ತರಿ ಹಾಗೂ ಸೂಜಿ ಎರಡನ್ನೂ ಉಪಯೋಗಿಸುವುದು ಅವಶ್ಯ. ಇವೆರಡೂ ಆ ವೃತ್ತಿಗೆ ಅನಿವಾರ್ಯವೇ. ಒಂದು ಕತ್ತರಿಸುತ್ತದೆ, ಮತ್ತೊಂದು ಜೋಡಿಸುತ್ತದೆ. ಆದರೆ ಕತ್ತರಿಸುವುದಕ್ಕಿಂತ ಜೋಡಿಸುವ ಕೆಲಸ ಮಹತ್ವದ್ದು. ಇಲ್ಲದಿದ್ದರೆ ತಂದ ಬಟ್ಟೆಯು ಛಿದ್ರವಾಗಿ ಉಪಯೋಗವಿಲ್ಲದಂತಾಗಿಬಿಡುತ್ತದೆ. ಹಾಗೆ ನೋಡಿದರೆ ಇವೆರಡರ ಕೆಲಸವೂ ಭಿನ್ನವಾದುದು. ಒಂದು ಕತ್ತರಿಸಿ ತುಂಡುತುಂಡು ಮಾಡಿದರೆ ಮತ್ತೊಂದು ಆ ತುಂಡುಗಳನ್ನು ಒಗ್ಗೂಡಿಸುವ ಕೆಲಸ ಮಾಡುತ್ತದೆ. ಹಾಗೆ ಒಗ್ಗೂಡಿಸುವ ಕೆಲಸವಾದಾಗಲೇ ಆ ಬಟ್ಟೆಯನ್ನು ಧರಿಸಿ ಸಂಭ್ರಮಪಡಲು ಹಾಗೂ ಮಾನ ಮುಚ್ಚಿಕೊಳ್ಳಲು ಸಾಧ್ಯವಾಗುತ್ತದೆ.

ಕತ್ತರಿಗೆ ಹೋಲಿಸಿದರೆ ಸೂಜಿ ಬಹಳ ಚಿಕ್ಕ ವಸ್ತು. ಇದೇ ರೀತಿ ನಮ್ಮ ಸಮಾಜದಲ್ಲಿ ದೊಡ್ಡದಾದ ಕತ್ತರಿಯ ಕೆಲಸವನ್ನು ಹಲವರು ಮಾಡುತ್ತಾರೆ. ಈ ಕತ್ತರಿಯ ಮನೋಭಾವ ಹೇಗೆ ಕಂಡುಬರುತ್ತಿದೆ ಎಂದರೆ ಉಪಯೋಗಕ್ಕೆ ಬರುವ ಭಾಗಗಳನ್ನೂ ಕತ್ತರಿಸಿ ಹಾಕಲಾಗುತ್ತದೆ. ಸೂಜಿ ಚಿಕ್ಕದಾದರೂ ಅದು ಕ್ರಮೇಣ ತಂಡಾದ ಭಾಗವನ್ನು ಸುಂದರವಾಗಿ ಒಂದುಗೂಡಿಸುತ್ತಾ ಹೋಗುತ್ತದೆ. ಬಟ್ಟೆ ಧರಿಸಲು ಯೋಗ್ಯವಾಗಬೇಕಾದರೆ ಸೂಜಿಯ ಕೆಲಸ ಮಹತ್ವದ್ದಾಗಿರುತ್ತದೆ. ಕತ್ತರಿಸುವಾಗ ಸ್ವಲ್ಪ ಹೆಚ್ಚು–ಕಡಿಮೆಯಾದರೂ ಪರವಾಗಿಲ್ಲ, ಅಂತಹ ಲೋಪವನ್ನು ಸೂಜಿ ಸರಿಪಡಿಸುತ್ತದೆ. ಸಮಾಜದಲ್ಲಿ ಈಗ ಕತ್ತರಿ ಮನೋಭಾವ ಜಾಸ್ತಿಯಾದಂತೆ ತೋರುತ್ತಿದೆ. ಇದು ಸುಲಭದ ಕೆಲಸ. ಮುಗ್ಧ ಮನೋಭಾವದವರು ಎಲ್ಲೆಡೆಯೂ ಇದ್ದೇ ಇರುತ್ತಾರೆ. ಅವರು ಹೇಳಿದ ಮಾತುಗಳನ್ನು ಪೂರ್ಣವಾಗಿ ನಂಬುತ್ತಾರೆ, ಹಾಗೂ ಅದೇ ರೀತಿಯ ಮನೋಭಾವವನ್ನು ಬೆಳೆಸಿಕೊಂಡುಬಿಡುತ್ತಾರೆ. ಇಂತಹವರು ಗೊಂದಲವನ್ನೂ ಸೃಷ್ಟಿಸುತ್ತಾರೆ. ಆದರೆ ಈಗ ಸಮಾಜವನ್ನು ಒಗ್ಗೂಡಿಸುವ, ಸೂಜಿಯ ಕೆಲಸ ಮಾಡುವ ಮನೋಭಾವದವರು ಅಗತ್ಯವಾಗಿ ಬೇಕಾಗಿದ್ದಾರೆ.

ಈ ವೇಳೆ ಒಂದು ಕಥೆ ನೆನಪಾಗುತ್ತದೆ. ಒಂದು ಊರಿನಲ್ಲಿ ಒಬ್ಬ ನೇಕಾರನಿದ್ದ. ಆತ ಶಾಂತ ಸ್ವಭಾವದ ಮನುಷ್ಯ. ನಿಗರ್ವಿ ಹಾಗೂ ಪ್ರಾಮಾಣಿಕ. ಆತ ಸಿಟ್ಟಾಗಿದ್ದನ್ನು ನೋಡಿದವರೇ ಇರಲಿಲ್ಲ. ಈತನನ್ನು ಸಿಟ್ಟಿಗೇಳಿಸಬೇಕು ಎಂದು ಕೆಲ ಯುವಕರು ತೀರ್ಮಾನಿಸಿ ಒಮ್ಮೆ ನೇಕಾರನ ಅಂಗಡಿಗೆ ಬಂದರು. ಅವರಲ್ಲಿ ಒಬ್ಬ ಶ್ರೀಮಂತನ ಮಗನೂ ಇದ್ದ. ಅವನು ನೇಕಾರನ ಅಂಗಡಿಯಲ್ಲಿ ಒಂದು ಅತ್ಯಂತ ಬೆಲೆಬಾಳುವ ಸೀರೆಯನ್ನು ಆಯ್ಕೆ ಮಾಡಿ ಅದರ ಬೆಲೆ ಕೇಳಿದ. ನೇಕಾರ ಬೆಲೆ ಹೇಳಿದ. ಆಗ ಶ್ರೀಮಂತ ಯುವಕ ಆ ಸೀರೆಯನ್ನು ಕತ್ತರಿಸಿ ಎರಡು ಭಾಗ ಮಾಡಿ, ಅದರ ಒಂದು ಭಾಗದ ಬೆಲೆ ಕೇಳಿದ. ನೇಕಾರ ಶಾಂತವಾಗಿ ಸೀರೆಯ ಅರ್ಧ ಭಾಗದ ಬೆಲೆ ಹೇಳಿದ. ಯುವಕ ಮತ್ತೆ ಅದನ್ನು ಎರಡೆರಡು ಭಾಗ ಮಾಡಿ ಅದರ ಒಂದು ಭಾಗದ ಬೆಲೆ ಕೇಳಿದ. ನೇಕಾರ ಅದಕ್ಕೂ ಕಾಲು ಭಾಗದ ಬೆಲೆ ಹೇಳಿದ. ಆದರೆ ಯುವಕ ಇಷ್ಟು ಚಿಕ್ಕ ಬಟ್ಟೆಯಿಂದ ನನಗೆ ಏನೂ ಉಪಯೋಗವಿಲ್ಲ, ಆದ್ದರಿಂದ ಬೇಡ ಎಂದ. ಆಗ ನೇಕಾರ 'ಮಗು ಈ ಸೀರೆ ನಿನಗಷ್ಟೇ ಅಲ್ಲ ಯಾರಿಗೂ ಉಪಯೋಗಕ್ಕೆ ಬರುವುದಿಲ್ಲ' ಎಂದು ಶಾಂತನಾಗಿ ಉತ್ತರಿಸಿದ. ಇಷ್ಟಾದರೂ ನೇಕಾರನಿಗೆ ಸಿಟ್ಟು ಬರದಿದ್ದನ್ನು ಕಂಡು ಯುವಕನಿಗೆ ನಾಚಿಕೆಯಾಗಿ ಕ್ಷಮೆ ಕೇಳಿದ. ನನ್ನಿಂದ ಪೂರ್ತಿ ಸೀರೆಯ ಬೆಲೆ ತೆಗೆದುಕೊಳ್ಳಿ ಎಂದ. ಆದರೆ ನೇಕಾರ ಬೆಲೆ ತೆಗೆದುಕೊಳ್ಳಲು ನಿರಾಕರಿಸಿದ. ನೀನು ಸೀರೆ ಕೊಂಡಿಲ್ಲ, ಆದ್ದರಿಂದ ನಾನು ಹಣ ಪಡೆಯಲಾರೆ ಎಂದ. ಆಗ ಯುವಕ ನಾಚಿ ಸಂಕೋಚದಿಂದ ಮತ್ತೆ ಕ್ಷಮೆ ಕೇಳಿದ. ಆಗ ನೇಕಾರ ಹೇಳಿದ ಮಾತು ಮನನೀಯ. ಆತ ಹೇಳುತ್ತಾನೆ "ನೀನು ಹಣ ಕೊಡುವುದರಿಂದ ಎಲ್ಲ ನಷ್ಟ ಭರಿಸಲಾಗುವುದಿಲ್ಲ. ಹತ್ತಿ ಬೆಳೆಯಲು ರೈತ ಎಷ್ಟು ಶ್ರಮಪಟ್ಟಿದ್ದಾನೆ, ಆ ಹತ್ತಿಯಿಂದ ನೂಲು ತೆಗೆಯುವವ, ಸೀರೆ ನೇಯುವವ, ಬಣ್ಣ ಹಾಕುವವರ ಶ್ರಮದ ಜೊತೆಗೆ ನನ್ನ ಮತ್ತು ನನ್ನ ಹೆಂಡತಿ ಬೆವರು ಹರಿದಿದೆ. ನಮ್ಮೆಲ್ಲರ ಶ್ರಮ ಸಾರ್ಥಕವಾಗುವುದು ಆ ಸೀರೆಯನ್ನು ಯಾರಾದರೂ ಧರಿಸಿ ಸಂಭ್ರಮಿಸಿದಾಗ, ಆದರೆ ನೀನು ಸೀರೆಯನ್ನು ತುಂಡುತುಂಡು ಮಾಡಿಬಿಟ್ಟೆ, ಈಗ ಇದನ್ನು ಯಾರೂ ಧರಿಸಲು ಸಾಧ್ಯ ವಾಗುವುದಿಲ್ಲ. ಈಗ ಹಣ ಕೊಡುವುದರಿಂದ ನೀನು ಈ ನಷ್ಟವನ್ನು ತುಂಬಿಕೊಡಲಾರೆ ಎಂದ. ಶ್ರೀಮಂತ ಯುವಕ ನಾಚಿ ಕಾಲು ಹಿಡಿದು ಕ್ಷಮೆ ಕೇಳಿದ' ಎಂಬುದು ಕಥೆ ಸಾರಾಂಶ.

ಇದು ನಮ್ಮ ಸಮಾಜದ ಇಂದಿನ ಸ್ಥಿತಿಗೂ ಅನ್ವಯಿಸುತ್ತದೆ. ತುಂಡುತುಂಡು ಮಾಡುವುದು ಸುಲಭ. ಆದರೆ ಆ ದೇಶವನ್ನು ಈವರೆವಿಗೆ ಉಳಿಸಿಕೊಂಡು ಬರಲು ಶ್ರಮಿಸಿರುವವರಿಗೆ ಈ ಬಗ್ಗೆ ಹೇಗೆ ಸಮಜಾಯಿಷಿ ನೀಡಲು ಸಾಧ್ಯ? ದೇಶ ಇಲ್ಲಿಯವರೆಗೆ ಉಳಿದು ಬಂದಿರುವುದಕ್ಕೆ ಅದೆಷ್ಟೋ ಜನರು ಶ್ರಮ ಹಾಕಿ ಬೆವರು ಸುರಿಸಿದ್ದಾರೆ. ದೇಶವು ಶಾಂತವಾಗಿ, ಜನರು ಅನ್ಯೋನ್ಯವಾಗಿದ್ದರೆ ಆವರೆಲ್ಲರ ಶ್ರಮವೂ ಸಾರ್ಥಕವಾಗುತ್ತದೆ. ಸಮಾಜವನ್ನು ಸೂಜಿಯಂತೆ ಜೋಡಿಸುವ ಮನೋಭಾವ ನಮಗೆ ಇಂದು ಹೆಚ್ಚಾಗಿ ಬೇಕಾಗಿದೆ.

ಹಿರಿಯ ರಂಗಕರ್ಮಿ ಮೈಮ್ ರಮೇಶ್‌ಗೆ 'ಸಿಜಿಕೆ ಪ್ರಶಸ್ತಿ'



“ ರಂಗಭೂಮಿ ಸಾಮಾಜಿಕ ಸ್ನೇಹಿ ಮಾಧ್ಯಮವಾಗಿದ್ದು, ಯಾರೇ ಬಂದರು ಕಲಿಯಬಹುದಾಗಿದೆ. ರಂಗಭೂಮಿಯನ್ನು ನಿಜವಾದ ಅರ್ಥದಲ್ಲಿ ಕಟ್ಟಿದಲ್ಲಿ ಸಾಮಾಜಿಕ ಚಲನಶೀಲತೆ ಎಂಬುದು ಸಾಧ್ಯವಾಗುವ ಜೊತೆಗೆ ನಿಜವಾದ ರೀತಿಯಲ್ಲಿ ಶಿಕ್ಷಣ ನೀಡಬಹುದು. ಇಂತಹ ಸಾಮಾಜಿಕ ಸ್ನೇಹಿ ರಂಗಭೂಮಿಯನ್ನು ಆರಂಭ ಮಾಡಿದವರಲ್ಲಿ ಸಿಜಿಕೆ ಪ್ರಮುಖರಾಗಿದ್ದಾರೆ. – ಪ್ರಸನ್ನ, ರಂಗಕರ್ಮಿ

ಮೈಸೂರು, ಜು.29(ಎಂಕೆ)– ಮೈಸೂರು ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ನೆಲೆ ಹಿನ್ನೆಲೆ, ಕರ್ನಾಟಕ ರಂಗ ಪರಿಷತ್ತು ಹಾಗೂ ಕರ್ನಾಟಕ ಬೀದಿನಾಟಕ ಅಕಾಡೆಮಿ ವತಿಯಿಂದ ಆಯೋಜಿಸಿದ್ದ ಸಿಜಿಕೆ ಬೀದಿರಂಗ ದಿನ ಕಾರ್ಯಕ್ರಮದಲ್ಲಿ ಹಿರಿಯ ರಂಗಕರ್ಮಿ ಮೈಮ್ ರಮೇಶ್ ಅವರಿಗೆ 2023ನೇ ಸಾಲಿನ 'ಸಿಜಿಕೆ ಪ್ರಶಸ್ತಿ' ನೀಡಿ ಅಭಿನಂದಿಸಲಾಯಿತು.

ಖ್ಯಾತ ಚಲನಚಿತ್ರ ನಟ ಡಾಲಿ ಧನಂಜಯ್ ಪ್ರಶಸ್ತಿ ಪ್ರದಾನ ಮಾಡಿದರು. ಬಳಿಕ ಮಾತನಾಡಿದ ಅವರು, ಬಡವರ ಮಕ್ಕಳು ಬೆಳೆಯಬೇಕು ಎಂಬುದು ಬರೀ ಡೈಲಾಗ್ ಅಲ್ಲ. ನಿರಂತರವಾಗಿ ನಡೆಯಬೇಕಾಗಿರುವ ಪ್ರಕ್ರಿಯೆಯಾಗಿದೆ. ಎಲ್ಲಾ ಸವಲತ್ತುಗಳನ್ನು ಪಡೆದು ಬೆಳೆದವರು ಸಮಾಜಕ್ಕೆ ಏನಾದರೂ ಕೊಡುಗೆಯನ್ನು ನೀಡಿ ಹೋಗಬೇಕು. ನಮಗೇನು ಸಿಗುತ್ತಿದೆ ಎಂಬುದರ ಕುರಿತು ಯೋಚಿಸಬಾರದು. ಆಗ ಮತ್ತಷ್ಟು ಪ್ರತಿಭೆಗಳು ಬೆಳೆಯಲು ನೆರವಾಗುತ್ತದೆ. ಸಮಾಜಕ್ಕೆ ಕೊಡುಗೆ ನೀಡುವುದೇ ಅತೀದೊಡ್ಡ ತತ್ವಶಾಸ್ತ್ರವಾಗಿದೆ ಎಂದು ಹೇಳಿದರು.

ನನ್ನ ಬದುಕಿನಲ್ಲಿ ಒಂದಷ್ಟು ಜೀವಗಳು ಬಂದು ಹೋಗಿವೆ. ಅದರಲ್ಲಿ ಮೈಮ್ ಪ್ರಮುಖರು. ನಮ್ಮಿಂದ ನಿರಂತರವಾಗಿ ನಾಟಕಗಳನ್ನು ಮಾಡಿಸುತ್ತಿದ್ದರು. ಅವರ ಪ್ರೋತ್ಸಾಹ ಚೆನ್ನಾಗಿತ್ತು. ಒಂದಾದ ಮೇಲೊಂದು ನಾಟಕ ಕಲಿಸುತ್ತಿದ್ದರು. ಪ್ರಾಯೋಜಕರನ್ನು ಹೇಗೆ ಹಿಡಿಯಬೇಕು ಎಂದು ಹೇಳಿಕೊಡುತ್ತಿದ್ದರು. ಸಿನಿಮಾಗೆ ಹೋಗುತ್ತೇವೆ ಎಂದರೆ ಬೈಯ್ಯುತ್ತಿದ್ದ ಅವರು, ಇಲ್ಲಿ ಮೊದಲು ಚೆನ್ನಾಗಿ ಕಲಿಯಿರಿ ಎಂದು ಬುದ್ಧಿ ಹೇಳುತ್ತಿದ್ದರು. ನಾನು ಸಿನಿಮಾಗೆ ಹೋದ ಮೇಲೆ ಸಾಕಷ್ಟು ಮಂದಿ ಕಲಾವಿದರು ನಾವು ಮೈಮ್ ರಮೇಶ್ ಅವರ ಶಿಷ್ಯಂದಿರು ಎಂದು ಹೇಳಿದಾಗ ಹೆಮ್ಮೆ ಎನಿಸಿದೆ ಎಂದು ಹಳೆಯ ನೆನಪುಗಳನ್ನು ಮೆಲುಕು ಹಾಕಿದರು.

ಅತಿರೇಕದ ಕೆಲಸ: ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಹಿರಿಯ ರಂಗ ನಿರ್ದೇಶಕ ಪ್ರಸನ್ನ, ಮೈಸೂರು ರಂಗಾಯಣದ ಒಳಗೆ ಪ್ರವೇಶ ಮಾಡಿದರೆ ಬಿ.ವಿ.ಕಾರಂತರ ಹೆಸರಿನಲ್ಲಿ ಪ್ರತಿಮೆ, ರಂಗಮಂಟಪ, ವನ ಕಾಣುತ್ತದೆ. ಆದರೆ ಅದೇ ರಂಗಾಯಣದ ಆವರಣದಲ್ಲಿದ್ದ ಶ್ರೀರಂಗ ರಂಗ ವೇದಿಕೆ ಮರೆಯಾಗಿದೆ. ಲಂಕೇಶ್ ಹೆಸರಿನಲ್ಲಿದ್ದ ಒಂದು ವೇದಿಕೆ ಮರೆಯಾಗಿದೆ. ಇದು ಕಾರಂತರು ಬಯಸಿದ್ದಲ್ಲ. ನಾವೇ ಅತಿರೇಕದಿಂದ ಮಾಡಿರುವ ಕೆಲಸವಾಗಿದೆ. ಇದರಿಂದ ಹೊಸ ಜನರಿಗೆ ಬಿ.ವಿ.ಕಾರಂತರ ಹಿಂದೆ ರಂಗಭೂಮಿ ಇರಲಿಲ್ಲ. ಕಾರಂತರಿಂದಲೇ ರಂಗಭೂಮಿ ಬಂತು ಎಂಬ ತಪ್ಪು ಕಲ್ಪನೆ ಬರಲು ಕಾರಣವಾಗುತ್ತದೆ ಎಂದರು.

ನಾಟಕ ಪ್ರದರ್ಶನ: ಬಳಿಕ ರಂಗಪಯಣ ತಂಡದ ವತಿಯಿಂದ 'ಪೂಲನ್ ದೇವಿ' ನಾಟಕ ಪ್ರದರ್ಶನ ಪ್ರಸ್ತುತಪಡಿಸಲಾಯಿತು. ಯೋಜನಾ ಇಲಾಖೆಯ ಪ್ರದೇಶ ಅಭಿವೃದ್ಧಿ ಮಂಡಳಿ ನಿರ್ದೇಶಕ ಡಿ.ಚಂದ್ರಶೇಖರಯ್ಯ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಜವರಪ್ಪ, ರಂಗಕರ್ಮಿ ಸಿ.ಎಂ. ನರಸಿಂಹಮೂರ್ತಿ, ನೆಲೆ ಹಿನ್ನೆಲೆ ಸಂಸ್ಥೆಯ ಕೆ.ಆರ್.ಗೋಪಾಲಕೃಷ್ಣ ಮತ್ತಿತರರಿದ್ದರು.

ಧರ್ಮಸ್ಥಳ ವಿರೇಂದ್ರ ಹೆಗ್ಗಡೆಯವರ ತೇಜೋವಧೆಗೆ ಜೈನ್ ಮಿಲನ್ ಖಂಡನೆ

ಮೈಸೂರು, ಜು.29(ಎಂಕೆ)– ಧರ್ಮಸ್ಥಳದಲ್ಲಿ ನಡೆದ ಸೌಜನ್ಯ ಕೊಲೆ ಪ್ರಕರಣ ವಿಚಾರವಾಗಿ ಯಾವುದೇ ವ್ಯಕ್ತಿ ಅಥವಾ ಕುಟುಂಬದ ತೇಜೋವಧೆ ಮಾಡುವುದನ್ನು ಭಾರತೀಯ ಜೈನ್ ಮಿಲನ್ ಖಂಡಿಸಿದೆ. 12 ವರ್ಷದ ಹಿಂದೆ ನಡೆದ ಸೌಜನ್ಯರ ಕೊಲೆ ಪ್ರಕರಣ ಸಂಬಂಧ ನ್ಯಾಯಾಲಯದಿಂದ ತೀರ್ಪು ಹೊರಬಂದಿದೆ. ಆದರೆ ನಿಜವಾದ ಆರೋಪಿಗಳು ಪತ್ತೆಯಾಗಿಲ್ಲ. ಅಪರಾಧಿಗಳನ್ನು ಪತ್ತೆ ಹಚ್ಚುವ ಕೆಲಸವನ್ನು ಸರ್ಕಾರ ಕಾನೂನು ರೀತಿಯಲ್ಲಿ ಮಾಡಬೇಕು. ಆದರೆ ಕೆಲವರು ಸಾಮಾಜಿಕ ಜಾಲತಾಣದಲ್ಲಿ ಧರ್ಮಸ್ಥಳ ಧರ್ಮಾಧಿಕಾರಿಗಳಾದ ಡಾ.ವಿರೇಂದ್ರ ಹೆಗ್ಗಡೆ, ಅವರ ಕುಟುಂಬ ಹಾಗೂ ಜೈನ್ ಸಮಾಜವನ್ನು ಅವಹೇಳನಕಾರಿಯಾಗಿ ನಿಂದನೆ ಮಾಡುತ್ತಿರುವುದು ಸರಿಯಲ್ಲ. ಧರ್ಮಸ್ಥಳ ಕ್ಷೇತ್ರವೂ ಪವಿತ್ರ ಧಾರ್ಮಿಕ ಯಾತ್ರಾ ಸ್ಥಳವಾಗಿದ್ದು, ಚಾರಿತ್ರಿಕ ಮಹತ್ವ ಹೊಂದಿದೆ.

ಎಲ್ಲರೂ ಕಾನೂನು ಚೌಕಟ್ಟಿನಲ್ಲಿದ್ದು, ಅಪಪ್ರಚಾರ ಮಾಡುವುದು ಸರಿಯಲ್ಲ. ಇನ್ನು ಮುಂದೆ ಅವಹೇಳನಕಾರಿ ಹೇಳಿಕೆಗಳನ್ನು ನೀಡಬಾರದು ಎಂದು ತಿಳಿಸುವುದಲ್ಲದೆ, ಅಪಪ್ರಚಾರಕ್ಕೆ ಮುಂದಾಗುವವರ ವಿರುದ್ಧ ಸರ್ಕಾರ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸುವುದಲ್ಲದೆ ಪ್ರತಿಭಟನೆ ಮಾಡುವುದಾಗಿ ಪ್ರಕಟಣೆ ಮೂಲಕ ಎಚ್ಚರಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಭಾನುವಾರ 30 ಜುಲೈ 2023

ಯೂಟ್ಯೂಬ್ ಲೈಕ್ ಮಾಡಿದರೆ ಹಣ ನೀಡುವ ಆಮಿಷ ತೋರಿ ಗೃಹಿಣಿಗೆ 6.90 ಲಕ್ಷ ವಂಚನೆ

ಕ್ರೈಂ ಬಾಕ್ಸ್

ಮೈಸೂರು, ಜು.29– ಯೂಟ್ಯೂಬ್ ಲೈಕ್ ಮಾಡಿದರೆ ಹಣ ನೀಡುವುದಾಗಿ ನಂಬಿಸಿ ಗೃಹಿಣಿಗೆ 6.90 ಲಕ್ಷ ರೂ. ವಂಚಿಸಲಾಗಿದೆ. ಮೈಸೂರಿನ ಹೆಬ್ಬಾಳ ಎರಡನೇ ಹಂತದ ಎಂ.ಡಿ. ಸುಮಂತ್(25) ಎಂಬವರ ಪತ್ನಿ ಮೊಬೈಲ್‌ಗೆ ಯೂಟ್ಯೂಬ್‌ಗೆ ಲೈಕ್ ಮಾಡಿದರೆ 1 ವೀಡಿಯೋಗೆ 50 ರೂ. ನೀಡುವುದಾಗಿ ಸಂದೇಶ ಬಂದಿತ್ತು. ಅದರಂತೆ ಅವರು 6 ವೀಡಿಯೋಗಳನ್ನು ಲೈಕ್ ಮಾಡಿದಾಗ ಅವರ ಖಾತೆಗೆ 300 ರೂ.ಗಳನ್ನು ಜಮೆ ಮಾಡಲಾಗಿತ್ತು. ನಂತರ 3,000 ರೂ. ಇನ್ವೆಸ್ಟ್ ಮಾಡಿದರೆ 3,900 ರೂ. ಕೊಡುವುದಾಗಿ ವಂಚಕರು ತಿಳಿಸಿದಾಗ ಅವರು ಅದರಂತೆ ಮಾಡಿ 3,900 ರೂ. ಪಡೆದಿದ್ದರು. ನಂತರ ಹಂತ ಹಂತವಾಗಿ 6.90 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಆನ್‌ಲೈನ್ ಕಾಯಿನ್ ಟ್ರೇಡಿಂಗ್ ಮಾಡಿದರೆ ಹೆಚ್ಚಿನ ಲಾಭ ಬರುತ್ತದೆ ಎಂದು ನಂಬಿಸಿ ವ್ಯಕ್ತಿಯೋರ್ವರಿಗೆ 13.94 ಲಕ್ಷ ರೂ. ವಂಚಿಸಲಾಗಿದೆ.

ಮೈಸೂರಿನ ಜೆ.ಪಿ.ನಗರ ನಿವಾಸಿ ಯು.ಕಿರಣ್(33) ಎಂಬವರ ಮೊಬೈಲ್‌ಗೆ 1203205862 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ಆನ್‌ಲೈನ್ ಕಾಯಿನ್ ಟ್ರೇಡಿಂಗ್ ಬಗ್ಗೆ ಆಸೆ ಹುಟ್ಟಿಸಿದ್ದಾನೆ. ನಂತರ ಅವರ ಹೆಸರಿನಲ್ಲಿ ಅಕೌಂಟ್‌ವೊಂದನ್ನು ಕ್ರಿಯೇಟ್ ಮಾಡಿ ಅದರ ಮೂಲಕ ಹಣ ಹೂಡುವಂತೆ ತಿಳಿಸಿ, 13,94,663 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಇವೆರಡು ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿದೆ.

ಮೊಪೆಡ್ ನಂಬರ್ ಮರೆಮಾಡಿದವನ ಬಂಧನ

ಮೈಸೂರು, ಜು.29– ಮೊಪೆಡ್‌ನ ನಂಬರ್ ಮರೆಮಾಚಿದ್ದ ವ್ಯಕ್ತಿಯೋರ್ವನನ್ನು ಬಂಧಿಸಿ, ಮೊಪೆಡ್ ವಶಪಡಿಸಿಕೊಳ್ಳಲಾಗಿದೆ. ಮೈಸೂರಿನ ಬಸವೇಶ್ವರ ರಸ್ತೆ ನಿವಾಸಿ ಮೊಹಮ್ಮದ್ ಪೀರ್(38) ಆರೋಪಿಯಾಗಿದ್ದು, ಈತ ಸೆಂಟ್ ಮೇರಿಸ್ ಸರ್ಕಲ್ ಬಳಿ ಮೊಪೆಡ್‌ನಲ್ಲಿ ಬರುತ್ತಿದ್ದಾಗ ಗಸ್ತಿನಲ್ಲಿದ್ದ ಕೆ.ಆರ್. ಠಾಣೆಯ ಅಪರಾಧ ವಿಭಾಗದ ಸಬ್‌ಇನ್ಸ್‌ಪೆಕ್ಟರ್ ಸಿ.ಆರ್.ಮಂಜು ಹಾಗೂ ಸಿಬ್ಬಂದಿ ಈತನ ಟಿವಿಎಸ್ ಎಕ್ಸೆಲ್ 100 ಮೊಪೆಡ್ ಅನ್ನು ಗಮನಿಸಿದಾಗ ಅದರ ಸಂಖ್ಯೆ ಕೆಎ09 ಹೆಚ್‌ಎಲ್17 ಮಾತ್ರ ಇದ್ದು ಉಳಿದ ನಂಬರ್‌ಗಳನ್ನು ಉಜ್ಜಿ ಮರೆಮಾಚಲಾಗಿತ್ತು. ಇದರ ಬಗ್ಗೆ ವಿಚಾರಿಸಿದಾಗ ಮೊಹಮ್ಮದ್ ಪೀರ್ ಸಮರ್ಪಕವಾದ ಉತ್ತರ ನೀಡಲಿಲ್ಲ. ಈ ಹಿನ್ನೆಲೆಯಲ್ಲಿ ಈತ ಮೋಸ ಮಾಡುವ ಅಥವಾ ಅಪರಾಧ ಕೃತ್ಯಗಳನ್ನು ಎಸಗುವ ಉದ್ದೇಶದಿಂದ ಮೊಪೆಡ್‌ನ ನಂಬರ್ ಮರೆಮಾಚಿದ್ದಾನೆ ಎಂಬ ಆರೋಪದ ಮೇರೆಗೆ ಕೆ.ಆರ್.ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಈತನನ್ನು ಬಂಧಿಸಿ ಮೊಪೆಡ್ ವಶಪಡಿಸಿಕೊಳ್ಳಲಾಗಿದೆ.

ಬಯಲಲ್ಲಿ ಮೇಯುತ್ತಿದ್ದ 5 ಹಸು ಕಳವು

ಹುಣಸೂರು, ಜು.29– ಬಯಲಲ್ಲಿ ಮೇಯುತ್ತಿದ್ದ ಐದು ಹಸುಗಳನ್ನು ಕಳವು ಮಾಡಿರುವ ಘಟನೆ ಹುಣಸೂರು ಪಟ್ಟಣದ ಆರ್‌ಟಿಓ ಕಚೇರಿಯ ಬಳಿ ಇರುವ ಮೈದಾನದಲ್ಲಿ ನಡೆದಿದೆ.

ಹುಣಸೂರಿನ ಮರೂರಮ್ಮ ಕಾಲೋನಿ ನಿವಾಸಿ ಎಸ್.ಶಿವರಾಜು(25) 4 ಹಸುಗಳನ್ನು ಹಾಗೂ ದೊಡ್ಡವೀರಪ್ಪ 1 ಹಸುವನ್ನು ಜು.27ರಂದು ಬೆಳಗ್ಗೆ 10 ಗಂಟೆಯಿಂದ ಆರ್‌ಟಿಓ ಕಚೇರಿ ಸಮೀಪದ ಬಯಲಿನಲ್ಲಿ ಮೇಯಿಸುತ್ತಿದ್ದರು. ಮಧ್ಯಾಹ್ನ 3 ಗಂಟೆಗೆ ಊಟಕ್ಕೆಂದು ಹೋಗಿ 3.45ಕ್ಕೆ ವಾಪಸ್ಸಾದಾಗ ಇವರ ಹಸುಗಳು ಕಳವು ಆಗಿರುವುದು ಗೊತ್ತಾ ಗಿದೆ.

ಮತ್ತೊಂದು ಪ್ರಕರಣದಲ್ಲಿ ಹುಣಸೂರಿನ ಆಶ್ರಯ ಬಡಾವಣೆ ನಿವಾಸಿ ಲೋಕದಾಸ್ (71) ಎಂಬುವರು ಜು.27 ರಂದು ಮಧ್ಯಾಹ್ನ 12.30ರಲ್ಲಿ ಇಲ್ಲಿನ ತಾಲೂಕು ಕಚೇರಿ ಮುಂಭಾಗ ಫ್ಯಾಶನ್ ಪ್ಲಸ್ ಸ್ಕೂಟರ್ ಅನ್ನು(ಕೆಎ45 ಹೆಚ್7357) ನಿಲ್ಲಿಸಿ ಕಚೇರಿ ಒಳಗೆ ಹೋಗಿ, ಒಂದು ಗಂಟೆ ಸುಮಾರಿಗೆ ಹೊರಬರುವಷ್ಟರಲ್ಲಿ ಅವರ ಸ್ಕೂಟರ್ ಅನ್ನು ಕಳವು ಮಾಡಲಾಗಿದೆ.

ಇವೆರಡು ಪ್ರಕರಣಗಳು ಹುಣಸೂರು ಟೌನ್ ಠಾಣೆಯಲ್ಲಿ ದಾಖಲಾಗಿವೆ.


ಕೆಲಸ ಕೊಡಿಸುವುದಾಗಿ ಹಣ ಪಡೆದು ವಂಚನೆ

ಪೊನ್ನಂಪೇಟೆ, ಜು.29– ಪುತ್ರನಿಗೆ ಕೆಲಸ ಕೊಡುವುದಾಗಿ ನಂಬಿಸಿ ಆನ್‌ಲೈನ್ ಮೂಲಕ ವ್ಯಕ್ತಿಯೋರ್ವ 50,700 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಪೊನ್ನಂಪೇಟೆ ತಾಲೂಕು ಮುಗುಟಗೇರಿ ಗ್ರಾಮದ ಕೆ.ಎಂ.ಹಸನ್(49) ವಂಚನೆಗೊಳಗಾದವರಾಗಿದ್ದು, ಇವರಿಗೆ ಪರಿಚಯವಿರುವ ಸಾಲಿ ಎಂಬಾತ ಕೇರಳದ ಎಂ.ವಿ.ವಿಜೇಶ್ ಎಂಬುವರು ಮಂಗಳೂರು ಅಥವಾ ಕೊಚ್ಚಿನ್‌ನಲ್ಲಿ ಕೆಲಸ ಕೊಡಿಸುತ್ತಾರೆ. ನನ್ನ ತಂಗಿ ಮಗನಿಗೂ ಕೆಲಸ ಕೊಡಿಸಲು ಇವರಿಗೆ ಹಣ ನೀಡಿದ್ದೇನೆ ಎಂದು ತಿಳಿಸಿ, ವಿಜೇಶ್‌ನ ಮೊಬೈಲ್ ನಂಬರ್ ಅನ್ನು ನೀಡಿದ್ದಾರೆ.

ಮಗನಿಗೆ ಕೆಲಸದ ವಿಚಾರವಾಗಿ ಹಸನ್ ಅವರು ವಿಜೇಶ್‌ನನ್ನು ಮೊಬೈಲ್ ಮೂಲಕ ಸಂಪರ್ಕಿಸಲಾಗಿ, ಆತ ಅವರ ಪುತ್ರ ಶಾನಿದ್‌ಗೆ ಮಂಗಳೂರು ಅಥವಾ ಕೊಚ್ಚಿನ್‌ನಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ, 50,700 ರೂ. ವರ್ಗಾವಣೆ ಮಾಡಿಸಿಕೊಂಡ ನಂತರ ವಿಜೇಶ್ ಮೊಬೈಲ್ ಸ್ವಿಚ್‌ಆಫ್ ಮಾಡಿಕೊಂಡಿದ್ದಾನೆ. ಈ ಸಂಬಂಧ ಪೊನ್ನಂಪೇಟೆ ಪೊಲೀಸ್ ಠಾಣೆಯಲ್ಲಿ ವಿಜೇಶ್ ವಿರುದ್ಧ ಪ್ರಕರಣ ದಾಖಲಾಗಿದೆ.

ಮೊಹರಂ ಮೆರವಣಿಗೆ ವೇಳೆ ವಿದ್ಯುತ್ ತಂತಿ ತಗುಲಿ ನಾಲ್ವರು ಸಾವು: 10 ಮಂದಿಗೆ ಗಾಯ



ರಾಂಚಿ, ಜು.29– ಶನಿವಾರ ದೇಶದಾದ್ಯಂತ ಮೊಹರಂ ಹಬ್ಬವನ್ನು ಶ್ರದ್ಧಾ ಭಕ್ತಿಯಿಂದ ಆಚರಣೆ ಮಾಡಲಾಯಿತು. ಆದರೆ ಈ ಸಂಭ್ರಮದ ನಡುವೆ ಒಂದು ಆಘಾತಕಾರಿ ಘಟನೆಯೊಂದು ನಡೆದಿದೆ. ಮೊಹರಂ ಹಬ್ಬದ ಮೆರವಣಿಗೆ ವೇಳೆ ಹೈಟೆನ್ಷನ್ ವಿದ್ಯುತ್ ತಂತಿ ತಗುಲಿ ನಾಲ್ವರು ಮೃತಪಟ್ಟಿದ್ದಾರೆ. 10 ಮಂದಿ ಗಾಯಗೊಂಡ ಘಟನೆ ಬೊಕಾರೊ ಜಿಲ್ಲೆಯಲ್ಲಿ ಶನಿವಾರ ನಡೆದಿದೆ.

ಖೆಟ್ಕೊ ಎನ್ನುವ ಗ್ರಾಮದಲ್ಲಿ ಮೆರವಣಿಗೆ ವೇಳೆ ಕಬ್ಬಿಣದಿಂದ ಮಾಡಿದ ಧಾರ್ಮಿಕ ಧ್ವಜವು 11 ಸಾವಿರ ವೋಲ್ಟ್‌ನ ವಿದ್ಯುತ್ ತಂತಿಗೆ ತಾಗಿದ ಕಾರಣ ದುರ್ಘಟನೆ ಸಂಭವಿಸಿದೆ ಎಂದು ಬೊಕಾರೊ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರಿಯದರ್ಶಿ ಅಲೋಕ್ ಹೇಳಿದ್ದಾರೆ.

10 ಮಂದಿಗೆ ಸುಟ್ಟಗಾಯಗಳಾಗಿವೆ. ಮೆರವಣಿಗೆಯಲ್ಲಿ ಹೊತ್ತೊಯ್ಯುತ್ತಿದ್ದ ತಾಜಿಯಾ ಹೈಟೆನ್ಷನ್ ವಿದ್ಯುತ್ ತಂತಿಗೆ ತಗುಲಿ ಈ ದುರಂತ ನಡೆದಿದೆ ಎಂದು ಹೇಳಲಾಗಿದೆ. ಇದೀಗ ಗಾಯಗೊಂಡವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಶನಿವಾರ ಬೆಳಗ್ಗೆ 6 ಗಂಟೆಯ ಹೊತ್ತಿಗೆ ಈ ಘಟನೆ ನಡೆದಿದೆ. ಇಬ್ಬರ ಸ್ಥಿತಿ ಗಂಭೀರವಾಗಿದೆ, ಇನ್ನು ಸ್ಥಳಕ್ಕೆ ಧಾವಿಸಿದ ಬೊಕಾರೊನ ಪೊಲೀಸ್ ವರಿಷ್ಠಾಧಿಕಾರಿ ಪ್ರಿಯದರ್ಶಿ ಅಲೋಕ್ ಈ ಬಗ್ಗೆ ತನಿಖೆ ನಡೆಸಲಾಗಿದ್ದು, ಘಟನೆ ಬಗ್ಗೆ ವರದಿ ಪಡೆಯಲಾಗಿದೆ ಎಂದು ಹೇಳಿದ್ದಾರೆ. ಇಂದು ಬೆಳಗ್ಗೆ ಸುಮಾರು 6 ಗಂಟೆಗೆ ಮೊಹರಂ ಮೆರವಣಿಗೆ ಪ್ರಾರಂಭವಾಗಿತ್ತು.



ಮೈಸೂರಿನ ಗಾಂಧಿನಗರದಲ್ಲಿ ಸಂತ ಅನ್ನಮ್ಮ ದೇವಾಲಯದಲ್ಲಿ ಸಂತ ಅನ್ನಮ್ಮನವರ ಹುಟ್ಟುಹಬ್ಬವನ್ನು ಗಾಯನ, ಬಲಿಪೂಜೆ ಮೂಲಕ ಆಚರಿಸಲಾಯಿತು. ಸಂತ ಜೋಸೆಫ್‌ರ ಪ್ರಧಾನ ದೇವಾಲಯದ ಧರ್ಮಗುರುಗಳಾದ ಸ್ಟ್ಯಾನ್ಲಿ ಡಿ ಆಲ್ಮೇಡ್, ಎಫ್.ಆರ್.ಪೀಟರ್, ಸಬಸ್ಟೀನ್ ಸಂತ ಅನ್ನಮ್ಮ ದೇವಾಲಯದ ಮುಖ್ಯಸ್ಥರಾದ ಸುಸೈರಾಜು, ಆರೋಗ್ಯದಾಸ್ (ಸಂಪತ್), ದೇವಾಲಯದ ಯುವಕರ ಸಂಘದ ಸಂದೀಪ್, ಆಂಬ್ರೋಸ್, ಸಂದೇಶ್, ಜೆರಾಲ್ಡ್, ಪ್ರವೀಣ್, ಅರ್ಜುನ್, ಅಮರ್, ಕಿರಣ್, ಶಾನ್, ಸ್ಟೀಫನ್, ನವೀನ್, ಜೋಸೆಫ್, ವಿಮಲ್, ಮರಿಯಾಪವನ್ ಇನ್ನಿತರರು ಉಪಸ್ಥಿತರಿದ್ದರು.

ಸಾರ್ವಜನಿಕ ರಸ್ತೆಯಲ್ಲೇ ಮಾರುಕಟ್ಟೆ ಮಳಿಗೆ ನಿರ್ಮಾಣ; ನಗರಪಾಲಿಕೆ ಕ್ರಮಕ್ಕೆ ಸಾರ್ವಜನಿಕರ ತೀವ್ರ ಆಕ್ರೋಶ

- ಮಾಜಿ ಮೇಯರ್ ಸಂದೇಶ್ ಸ್ವಾಮಿ ಇತರರಿಂದ ಪರಿಶೀಲನೆ
- ರಸ್ತೆ ಮುಕ್ತಗೊಳಿಸದಿದ್ದರೆ ಕಾನೂನು ಮೊರೆ ಹೋಗುವ ಎಚ್ಚರಿಕೆ





ಮೈಸೂರು, ಜು.29(ಎಸ್‌ಬಿಡಿ)– ಸಾರ್ವಜನಿಕ ರಸ್ತೆ ಮಾರುಕಟ್ಟೆಯಾಗಿ ಪರಿವರ್ತನೆಯಾಗಿರುವ ಸಂಗತಿ ಮೈಸೂರಿನಲ್ಲಿ ಬೆಳಕಿಗೆ ಬಂದಿದೆ.

ಉದಯಗಿರಿಯ ಸತ್ಯನಗರ 14ನೇ ವಾರ್ಡ್‌ನ ಪಿ ಅಂಡ್ ಟಿ ಕ್ವಾಟ್ರರ್ಸ್ ಹಾಗೂ ದಲಿತ ಸಮುದಾಯದ ರುದ್ರಭೂಮಿ ಮಧ್ಯದ ಸಾರ್ವಜನಿಕರ ರಸ್ತೆ ಈಗ ಮಾರುಕಟ್ಟೆಯಾಗಿ ಬದಲಾಗಿದೆ. ಬೀದಿಬದಿ ವ್ಯಾಪಾರಿಗಳಿಗಾಗಿ ನಗರಪಾಲಿಕೆ ವತಿಯಿಂದಲೇ ಇಲ್ಲಿ ಸುಸಜ್ಜಿತ ಶೆಡ್ ಮಾದರಿ ಮಾರುಕಟ್ಟೆ ನಿರ್ಮಿಸಿಕೊಡಲಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದರ ಹಿನ್ನೆಲೆಯಲ್ಲಿ ಮಾಜಿ ಮೇಯರ್ ಸಂದೇಶ್ ಸ್ವಾಮಿ ಹಾಗೂ ಅನೇಕ ಮುಖಂಡರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಈ ವೇಳೆ ರಸ್ತೆ ಮುಚ್ಚಿ, ನಿರ್ಮಾಣ ಮಾಡುತ್ತಿರುವ ಬಗ್ಗೆ ದೂರಿದರೂ ಪಾಲಿಕೆ ಅಧಿಕಾರಿಗಳು ನಿರ್ಲಕ್ಷಿಸಿ, ಕೆಲಸ ಮುಂದುವರೆಸಿರುವುದಾಗಿ ಸ್ಥಳೀಯರು ಬೇಸರ ವ್ಯಕ್ತಪಡಿಸಿದರು.

ಈ ಸಂಬಂಧ ಸಂದೇಶ್ ಸ್ವಾಮಿ ಮಾತನಾಡಿ, ರಸ್ತೆ ಮತ್ತು ಫುಟ್‌ಪಾತ್‌ನಲ್ಲಿ ಯಾವುದೇ ನಿರ್ಮಾಣಗಳು ಇರಬಾರದೆಂದು ಸುಪ್ರೀಂಕೋರ್ಟ್ ಆದೇಶವಿದೆ. ಈ ಹಿನ್ನೆಲೆಯಲ್ಲೇ ಮೈಸೂರಿನ ಹಲವೆಡೆ ಧಾರ್ಮಿಕ ನಿರ್ಮಾಣಗಳನ್ನೂ ತೆರವು ಮಾಡಲಾಗಿದೆ. ಈ ನಿಯಮವನ್ನು ಇಡೀ ದೇಶದಲ್ಲಿ ಪಾಲಿಸಲಾಗುತ್ತಿದೆ. ಆದರೆ ನ್ಯಾಯಾಲಯದ ಆದೇಶವನ್ನೂ ಧಿಕ್ಕರಿಸಿ, ನಗರ ಪಾಲಿಕೆಯಿಂದಲೇ ರಸ್ತೆಯನ್ನು ಮಾರುಕಟ್ಟೆಯಾಗಿ ಪರಿವರ್ತಿಸಿರುವುದು ಖಂಡನೀಯ ಎಂದರು.

ಪಿ ಅಂಡ್ ಟಿ ಕ್ವಾಟ್ರರ್ಸ್ ಹಾಗೂ ದಲಿತ ಸಮುದಾಯದ ರುದ್ರಭೂಮಿ ಮಧ್ಯದಲ್ಲಿರುವ ರಸ್ತೆಯನ್ನು ಬಂದ್ ಮಾಡಿ, ಬೀದಿಬದಿ ವ್ಯಾಪಾರಿಗಳಿಗಾಗಿ ಸುಮಾರು 90 ಲಕ್ಷ ರೂ.ವೆಚ್ಚದಲ್ಲಿ 70ಕ್ಕೂ ಹೆಚ್ಚು ಮಳಿಗೆಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ಇದು ಏಳೆಂಟು ದಶಕಗಳಿಂದಿರುವ ರಸ್ತೆ ಅಲ್ಲದೆ ಸಮಗ್ರ ಅಭಿವೃದ್ಧಿ ಯೋಜನೆಯಲ್ಲೂ ಈ ರಸ್ತೆಯನ್ನು ಗುರುತಿಸಲಾಗಿದೆ. ಆದರೆ ಇದ್ಯಾವುದನ್ನೂ ಪರಿಗಣಿಸದೆ ಸಾರ್ವಜನಿಕ ರಸ್ತೆಯನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಸ್ತೆ ಸಂಚಾರ ಬಂದ್ ಮಾಡಿ, ಮಳಿಗೆಗಳನ್ನು ನಿರ್ಮಿಸುತ್ತಿರುವುದರಿಂದ ರುದ್ರಭೂಮಿ ಹಾಗೂ ಕ್ವಾರ್ಟರ್ಸ್‌ಗೆ ಓಡಾಡುವವರಿಗೆ ತೊಂದರೆಯಾಗಿದೆ ಎಂದು ಸ್ಥಳೀಯರು ನನ್ನ ಗಮನಕ್ಕೆ ತಂದಾಗ ಕೂಡಲೇ ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದಿದ್ದೆ. ನಿಯಮಬಾಹಿರವಾಗಿ ರಸ್ತೆಯಲ್ಲಿ ಮಳಿಗೆ ನಿರ್ಮಾಣ ಮಾಡದಂತೆ ಮನವಿ ಮಾಡಿದ್ದೆ. ಆದರೆ ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ. ಹೀಗೆ ಬೇಲಿಯೇ ಎದ್ದು ಹೊಲ ಮೇಯ್ದಂತೆ ನಗರ ಪಾಲಿಕೆ ವರ್ತಿಸಿದರೆ ಭೂಕಬಳಿಕೆ ಮಾಡುವವರಿಗೆ ರಹದಾರಿ ಕೊಟ್ಟಂತಾಗುತ್ತದೆ. ರಸ್ತೆ ಸುರಕ್ಷತಾ ಕಾಯ್ದೆಯನ್ವಯ ಜಿಲ್ಲಾಧಿಕಾರಿಗಳು ಹಾಗೂ ನಗರ ಪೊಲೀಸ್ ಆಯುಕ್ತರು ಕ್ರಮ ವಹಿಸಬೇಕಿತ್ತು. ಆದರೆ ಅವರೂ ಸುಮ್ಮನಿದ್ದಾರೆ. ಸಾರ್ವಜನಿಕರ ಹಿತಾಸಕ್ತಿಗಾಗಿ ಕೂಡಲೇ ಕ್ರಮ ಕೈಗೊಳ್ಳದಿದ್ದರೆ ಜನರ ಪರವಾಗಿ ಕಾನೂನು ಹೋರಾಟ ಮುಂದುವರೆಸುತ್ತೇವೆ ಎಂದು ಆಗ್ರಹಿಸಿದರು.

ಪರಿಶೀಲನೆ ವೇಳೆ ಬಿಜೆಪಿ ಮುಖಂಡರಾದ ಭಾನುಪ್ರಕಾಶ್, ಮುರುಳಿಧರ್, ನರಸಿಂಹಮೂರ್ತಿ, ವೇಲು ಮತ್ತಿತರರಿದ್ದರು.

ತೆರವಿಗೆ ಮನವಿ

ಪಿ ಅಂಡ್ ಟಿ ಕ್ವಾಟ್ರರ್ಸ್ ಹಾಗೂ ದಲಿತರ ರುದ್ರಭೂಮಿ ಮಧ್ಯದ ರಸ್ತೆಯಲ್ಲಿ ಮೈಸೂರು ನಗರ ಪಾಲಿಕೆ ಅಧಿಕಾರಿಗಳು ಯಾವುದೋ ಒತ್ತಡಕ್ಕೆ ಮಣಿದು ಮಳಿಗೆಗಳನ್ನು ನಿರ್ಮಿಸಿದ್ದಾರೆ. ಈಗಾಗಲೇ ನ್ಯಾಯಾಲಯದ ಆದೇಶದಂತೆ ಹಲವಾರು ರಸ್ತೆ ಫುಟ್‌ಪಾತ್‌ಗಳಲ್ಲಿದ್ದ ಕಟ್ಟಡಗಳನ್ನು ತೆರವುಗೊಳಿಸಲಾಗಿದೆ. ಹಾಗಾಗಿ ನಿಯಮಾನುಸಾರ ಸ್ಥಳ ಪರಿಶೀಲನೆ ನಡೆಸಿ, ಸಾರ್ವಜನಿಕ ರಸ್ತೆಯ ಮೇಲಿರುವ ಕಟ್ಟಡಗಳನ್ನು ತೆರವುಗೊಳಿಸಿ, ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು. ಜೊತೆಗೆ ಅನಧಿಕೃತವಾಗಿ ಕಟ್ಟಡ ನಿರ್ಮಿಸಿರುವ ಮಹಾನಗರ ಪಾಲಿಕೆಯ ಅಧಿಕಾರಿಗಳು ಹಾಗೂ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಹಾಗೂ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ.

ಲಯನ್ಸ್ ಸಂಸ್ಥೆ ಸೇರುವವರು ಸೇವಾ ಮನೋಭಾವ ಬೆಳೆಸಿಕೊಂಡಿರಬೇಕು



'ಅನುಸ್ಥಾಪನಾ ಸಮಾರಂಭ'ದಲ್ಲಿ ಕಾರ್ಗಿಲ್ ಯುದ್ಧದಲ್ಲಿ ಭಾಗಿಯಾಗಿದ್ದ ನಿವೃತ್ತ ಯೋಧರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಮೈಸೂರು,ಜು.29(ಸಿಎನ್)–ಲಯನ್ಸ್ ಕ್ಲಬ್ ಸಂಸ್ಥೆಗಳಿಗೆ ಹೊಸದಾಗಿ ಸೇರ್ಪಡೆಯಾಗುವವರು, ಸಾಮಾಜಿಕ ಕಳಕಳಿ, ಸಮಾಜಮುಖಿ ಕಾರ್ಯದಲ್ಲಿ ತೊಡಗಿ, ಸೇವಾ ಮನೋಭಾವ ಬೆಳೆಸಿಕೊಂಡಿರಬೇಕು. ನಮ್ಮ ಕ್ಲಬ್ ಹಲವು ವರ್ಷಗಳಿಂದ ಸಮಾಜಸೇವೆ ಮಾಡುತ್ತಾ ಹೆಮ್ಮರವಾಗಿ ಬೆಳೆದು ನಿಂತಿದೆ ಎಂದು ಬಹು ಕೌನ್ಸಿಲ್ ಅಧ್ಯಕ್ಷ ಲಯನ್ ಬಿ.ಎಸ್.ರಾಜಶೇಖರಯ್ಯ ಸಂತಸ ವ್ಯಕ್ತಪಡಿಸಿದರು.

ಹೆಬ್ಬಾಳಿನ ಹೊರವರ್ತುಲ ರಸ್ತೆಯ ಖಾಸಗಿ ಹೋಟೆಲ್‌ನಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ನಾರ್ತ್ (ಉತ್ತರ) ವತಿಯಿಂದ ಶನಿವಾರ ಆಯೋಜಿಸಲಾಗಿದ್ದ 'ಅನುಸ್ಥಾಪನಾ ಸಮಾರಂಭ' ಉದ್ಘಾಟಿಸಿ ಮಾತನಾಡಿದರು.

ದೇಶ ವಿದೇಶಗಳಲ್ಲೂ ಲಯನ್ಸ್ ಕ್ಲಬ್ ಸಂಸ್ಥೆ ಹೆಸರುವಾಸಿಯಾಗಿದೆ. ಸೇವಾ ಮನೋಭಾವ ಇರುವ ವ್ಯಕ್ತಿಗಳು ಮಾತ್ರ ಸಂಸ್ಥೆಗೆ ಬರುತ್ತಾರೆ. ಹಣ ಮಾಡುವ ಉದ್ದೇಶದಿಂದ ಬಂದ ಮಂದಿ ಬಹುಬೇಗನೇ ಸಂಸ್ಥೆಯಿಂದ ಹೊರಬೀಳುತ್ತಾರೆ ಎಂದು ಹೇಳಿದರು.

ಕ್ಲಬ್‌ನ ಜಿಲ್ಲಾ ಮಾಜಿ ಗವರ್ನರ್ ಎಂ.ವಿ.ದೇವಿಪ್ರಸಾದ್ ಮಾತನಾಡಿ, ಸಂಸ್ಥೆಯ ಮೂವತ್ತೈದನೇ ಅಧ್ಯಕ್ಷರು ಹಾಗೂ ತಂಡದ ಪದಗ್ರಹಣ ಕಾರ್ಯಕ್ರಮ ನಡೆಯುತ್ತಿರುವುದು ಹೆಮ್ಮೆಯ ವಿಚಾರವಾಗಿದೆ. ನಮ್ಮ ಸಂಸ್ಥೆ 1992ರಲ್ಲಿ ಸ್ಥಾಪನೆಯಾಗಿದೆ. ಈವರೆಗೆ 24 ಸದಸ್ಯರ ಗಡಿ ದಾಟಿಲ್ಲ. ನೂತನ ಸದಸ್ಯರನ್ನು ಸೇರಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದೇವೆ. ಏಕೆಂದರೆ ಸದಸ್ಯರು ಹೆಚ್ಚು ಸೇರ್ಪಡೆಯಾದಷ್ಟು, ಮನಸ್ತಾಪಗಳು ಹೆಚ್ಚಾಗುತ್ತವೆ. ಹೀಗಾಗೇ ಒಂದು ಗುಂಪು ಇಲ್ಲಿಂದ ಬೇರ್ಪಟ್ಟಿದೆ ಎಂದು ತಿಳಿಸಿದರು.

ಕ್ಲಬ್‌ನ ಜಿಲ್ಲಾ ಮಾಜಿ ಗವರ್ನರ್ ಲಯನ್ ಕೆ.ದೇವೇಗೌಡ ಮಾತನಾಡಿ, ಮಾಡಿದ ಒಳ್ಳೆಯ ಕೆಲಸಗಳು ನಮ್ಮನ್ನು ಎಲ್ಲಿಯಾದರೂ ಗುರುತಿಸಲ್ಪಡುತ್ತವೆ. ನನ್ನನ್ನು ವಿದೇಶಗಳಲ್ಲಿಯೂ ಆತ್ಮೀಯವಾಗಿ, ಗೌರವದಿಂದ ನೋಡಿಕೊಳ್ಳುತ್ತಾರೆ ಎಂದರೆ ಅದಕ್ಕೆ ಲಯನ್ಸ್ ಎಂಬ ನಿಸ್ವಾರ್ಥ ಸಂಸ್ಥೆಯೇ ಕಾರಣ ಎಂದು ಸ್ಮರಿಸಿದರು.

ಲಯನ್ಸ್ ಸಿಂಹದ ಚಿಹ್ನೆ ಕುರಿತು ಹಾಸ್ಯದ ಮೂಲಕ ವಿವರಣೆ ನೀಡಿದ ಅವರು, ಲಯನ್ ಎಂದರೆ ಪ್ರಾಣಿಯ ಕ್ರೂರತೆ ಅಲ್ಲ, ಅದರ ಸ್ವಾಭಿಮಾನ, ಗಾಂಭೀರ್ಯ ನಡೆಯನ್ನು ನಾವು ಅಳವಡಿಸಿಕೊಂಡು ಅದರ ಚಿಹ್ನೆ ಬಳಸಿದ್ದೇವೆ ಅಷ್ಟೇ. ನೀವು ಅಂದುಕೊಂಡ ಕ್ರೌರ್ಯದ ಸಂಕೇತವಲ್ಲ, ಸೇವಾ ಸಾಧುಗಳು ಎಂದರು.

ಈ ವೇಳೆ ಲಯನ್ ಎಂ.ವಿ.ದೇವಿಪ್ರಸಾದ್ ಅಧ್ಯಕ್ಷತೆಯಲ್ಲಿ, ಕ್ಲಬ್‌ನ ಹಿಂದಿನ ಜಿಲ್ಲಾ ಗವರ್ನರ್ ಲಯನ್ ಕೆ. ದೇವೇಗೌಡರ ಮೂಲಕ, 2023–24ನೇ ಸಾಲಿನ ಲಯನ್ಸ್ ಕ್ಲಬ್ ಉತ್ತರ ವಿಭಾಗದ ನೂತನ ಸದಸ್ಯರಾದ, ಅಂತೋನಿ ರಾಬರ್ಟ್, ಶೀಲಾ ಅವರಿಗೆ ಕ್ಲಬ್ ನಿಯಮದ ಪ್ರತಿಜ್ಞಾ ವಿಧಿ ಬೋಧಿಸುವ ಮೂಲಕ ಸೇರ್ಪಡೆ ಮಾಡಿಕೊಳ್ಳಲಾಯಿತು. ಬಳಿಕ ಬಹು ಕೌನ್ಸಿಲ್ ಅಧ್ಯಕ್ಷ ಲಯನ್ ಬಿ.ಎಸ್.ರಾಜಶೇಖರಯ್ಯರಿಂದ ನೂತನ ಅಧ್ಯಕ್ಷ, ಉಪಾಧ್ಯಕ್ಷರು, ನಿರ್ದೇಶಕರಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಕ್ಲಬ್ ನಿರ್ವಹಣೆ, ಜವಾಬ್ದಾರಿ ತಿಳಿಸಿದರು.

ನಂತರ ಕಾರ್ಗಿಲ್ ಯುದ್ಧದಲ್ಲಿ ಭಾಗಿಯಾಗಿದ್ದ ನಿವೃತ್ತ ಯೋಧರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ನೂತನ ಕಚೇರಿಧಾರಕರಾದ, 1ನೇ ಉಪಾಧ್ಯಕ್ಷ ಕಿರಣ್ ರಾಜ್, ಕಾರ್ಯದರ್ಶಿ ರವಿ, ಖಜಾಂಚಿ ಪರಿಮಳ, ಜಂಟಿ ಕಾರ್ಯದರ್ಶಿ ಶಾರದೆ ಕಾಳೇಗೌಡ, ಎಲ್‌ಸಿಎಫ್ ನೇತಾಜಿರಾವ್ ತಾವ್ಡೆ, ಜಿಎಸ್ಟಿ ಮಂಗಳಾ, ಜಿಎಂಟಿ ಬಸವೇಗೌಡ, ಜಿಎಲ್ಟಿ ಎಂ.ವಿ. ದೇವಿ ಪ್ರಸಾದ್, ನಿರ್ದೇಶಕರ ಮಂಡಳಿಯವರಾದ ಕಾಳೇಗೌಡ, ಡಾ.ಆಶಾ ಕೃಪಾ, ಡಿ.ಟಿ.ವೆಂಕಟೇಗೌಡ, ಉಮ್ರಾನಾ ಇಸ್ಮಾಯಿಲ್, ನಾರಾಯಣಗೌಡ, ರೇವಣ್ಣ, ರಘು. ಕೆ.ಬಿ.ಮನೋಹರ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಉಚಿತ ವೈದ್ಯಕೀಯ ತಪಾಸಣಾ ಶಿಬಿರ

ಮೈಸೂರು,ಜು.29–ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್, ಮೈಸೂರು ಜಿಲ್ಲಾ ಸಮಿತಿಯು ಮೆಡಿಕಲ್ ಸರ್ವಿಸ್ ಸೆಂಟರ್, ವೈದ್ಯಕೀಯ ವಿದ್ಯಾರ್ಥಿಗಳ ಸಂಘದ ಸಹಯೋಗದಲ್ಲಿ ಜು.30 ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಹೈವೇ ಸರ್ಕಲ್ ಹತ್ತಿರವಿರುವ ಮಾರೇಗೌಡನಹಳ್ಳಿ, ಹಲೀಮ್ ನಗರದ ಸಮುದಾಯ ಭವನದಲ್ಲಿ ಉಚಿತ ವೈದ್ಯಕೀಯ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಜೆಡಿಎಸ್‌ಗೆ ನೇಮಕ



ಮೈಸೂರು,ಜು.29–ಮೈಸೂರಿನ ಕುಂಬಾರಕೊಪ್ಪಲು ನಿವಾಸಿ ವಿ.ಶಿವಪ್ರಸಾದ್ ಅವರನ್ನು ಮೈಸೂರು ನಗರದ ಚಾಮರಾಜ ವಿಧಾನಸಭಾ ಕ್ಷೇತ್ರ ಜಾತ್ಯತೀತ ಜನತಾದಳದ ಕುಂಬಾರಕೊಪ್ಪಲು ಐದನೇ ವಾರ್ಡ್ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಪಿ.ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಣಿಪುರ ಇಬ್ಬರು ಮಹಿಳೆಯರ ವಿಡಿಯೋ ವೈರಲ್ ಪ್ರಕರಣ: ತನಿಖೆ ಕೈಗೆತ್ತಿಕೊಂಡ ಸಿಬಿಐ



ನವದೆಹಲಿ: ಮೇ 4ರಂದು ಮಣಿಪುರದಲ್ಲಿ ಗುಂಪೊಂದು ಇಬ್ಬರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ತನಿಖೆಯನ್ನು ಸಿಬಿಐ ಕೈಗೆತ್ತಿಕೊಂಡಿದೆ.

ರಾಜ್ಯದಲ್ಲಿನ ಎರಡು ಸಮುದಾಯದ ಪೈಕಿ ಒಂದು ಸಮುದಾಯಕ್ಕೆ ಸೇರಿದ ಇಬ್ಬರು ಮಹಿಳೆಯರನ್ನು ಇನ್ನೊಂದು ಸಮುದಾಯದ ಪುರುಷರು ಬೆತ್ತಲೆಗೊಳಿಸಿ, ಮೆರವಣಿಗೆ ಮಾಡಿರುವುದನ್ನು ತೋರಿಸುವ ವಿಡಿಯೋ ಜುಲೈ 19ರಂದು ಸಾಮಾಜಿಕ ಮಾಧ್ಯಮಗಳಲ್ಲಿ ಭಾರೀ ವೈರಲ್ ಆಗಿತ್ತು. ಇದರ ಪರಿಣಾಮವಾಗಿ ಈಶಾನ್ಯ ರಾಜ್ಯದಲ್ಲಿ ನಡೆದ ಅಪರಾಧಗಳ ಬಗ್ಗೆ ದೇಶಾದ್ಯಂತ ತೀವ್ರ ಕೋಲಾಹಲ ಉಂಟಾಗಿದೆ.

ವ್ಯಾಪಕ ಖಂಡನೆಗೆ ಗುರಿಯಾದ ವಿಡಿಯೋದಲ್ಲಿ, ಪುರುಷರು ಇಬ್ಬರು ಮಹಿಳೆಯರಿಗೆ ನಿರಂತರವಾಗಿ ಕಿರುಕುಳ ನೀಡುವುದನ್ನು ತೋರಿಸುತ್ತದೆ. ಅವರು ಈ ವೇಳೆ ಎಷ್ಟೇ ಅತ್ತು ಗೋಗರೆದರೂ, ಯಾವುದೇ ಪ್ರಯೋಜನವಾಗಿರಲಿಲ್ಲ. ಕೇಂದ್ರ ಗೃಹ ಸಚಿವಾಲಯದ ಸೂಚನೆಯ ಮೇರೆಗೆ ಪ್ರಕರಣವನ್ನು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಣಿಪುರದ ಹಿಂಸಾಚಾರಕ್ಕೆ ಸಂಬಂಧಿಸಿದ ಆರು ಪ್ರಕರಣಗಳ ತನಿಖೆಯನ್ನು ಈಗಾಗಲೇ ಸಿಬಿಐಗೆ ಹಸ್ತಾಂತರಿಸಲು ಸರ್ಕಾರ ನಿರ್ಧರಿಸಿದೆ.

ರಾಜ್ಯ ಪೊಲೀಸರು ಮೇ 18ರಂದು ತೌಬಲ್ ಜಿಲ್ಲೆಯ ನಾಂಗ್‌ಪೋಕ್ ಸೆಕ್ಮೈ ಪೊಲೀಸ್ ಠಾಣೆಯಲ್ಲಿ ಅಪರಿಚಿತ ಶಸ್ತ್ರಧಾರಿಗಳ ವಿರುದ್ಧ ಅಪಹರಣ, ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ದಾಖಲಿಸಿದ್ದಾರೆ. ತನಿಖಾ ಸಂಸ್ಥೆಯು ಈಗಾಗಲೇ ಡಿಐಜಿ ಶ್ರೇಣಿಯ ಅಧಿಕಾರಿ ನೇತೃತ್ವದ ತನ್ನ ವಿಶೇಷ ತನಿಖಾ ತಂಡವನ್ನು ಈಶಾನ್ಯ ರಾಜ್ಯದಲ್ಲಿ ಇರಿಸಿತ್ತು. ಪ್ರಕರಣದ ತನಿಖೆಗೆ ವಿಧಿವಿಜ್ಞಾನ ತಜ್ಞರಲ್ಲದೆ ಇನ್ನೂ ಕೆಲವು ಮಹಿಳಾ ಅಧಿಕಾರಿಗಳನ್ನು ಸಿಬಿಐ ಕಳುಹಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಬ್ಬರು ಮಹಿಳೆಯರನ್ನು ವಿವಸ್ತ್ರಗೊಳಿಸಿ, ಮೆರವಣಿಗೆ ಮಾಡಿದ ವಿಡಿಯೋ ವೈರಲ್ ಆದ ಬಳಿಕ ಪ್ರಧಾನಿ ಮೋದಿ ಮತ್ತು ಭಾರತದ ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್, ಘಟನೆ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ ಮತ್ತು ಇದು 'ನಾಚಿಕೇಡಿನ' ಮತ್ತು 'ಸ್ವೀಕಾರಾರ್ಹವಲ್ಲ' ಎಂದಿದ್ದರು. ಇಂಫಾಲ್ ಕಣಿವೆಯಲ್ಲಿ ವಾಸವಾಗಿರುವ ಬಹುಸಂಖ್ಯಾತ ಮೇಟಿ ಸಮುದಾಯ ಮತ್ತು ಬೆಟ್ಟಗಳನ್ನು ಆಕ್ರಮಿಸಿಕೊಂಡಿರುವ ಕುಕಿ ಸಮುದಾಯಗಳ ನಡುವೆ ಮೇ 3ರಿಂದ ಜನಾಂಗೀಯ ಘರ್ಷಣೆಗೆ ಸಾಕ್ಷಿಯಾಗಿದೆ. ಹಿಂಸಾಚಾರದಲ್ಲಿ ಇದುವರೆಗೆ 150ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದಾರೆ. ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ. ಮಣಿಪುರದ ಜನಸಂಖ್ಯೆ ಸುಮಾರು ಶೇ.53ರಷ್ಟಿರುವ ಮೇಟಿ ಸಮುದಾಯವು ಇಂಫಾಲದ ಕಣಿವೆಯಲ್ಲಿ ವಾಸಿಸುತ್ತಿದ್ದಾರೆ.



ಮೈಸೂರು ತಾಲೂಕಿನ ನಾಗವಾಲ ಗ್ರಾಪಂ ಅಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾದ ಭಾಗ್ಯ ರಮೇಶ್, ಬೆಂಗಳೂರಿನಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಅಭಿನಂದಿಸಿದರು. ಈ ವೇಳೆ ನಾಗವಾಲ ಗ್ರಾಪಂ ಮಾಜಿ ಅಧ್ಯಕ್ಷ ಹಾಗೂ ಕೆಪಿಸಿಸಿ ಕಾರ್ಯದರ್ಶಿ ಸಿ.ನರೇಂದ್ರ ಮತ್ತಿತರರಿದ್ದರು.

ಆ.2, ರಾಜ್ಯ ಕಾಂಗ್ರೆಸ್ ನಾಯಕರ ಸಭೆ

ಬೆಂಗಳೂರು, ಜು.29– ಕೆಲ ದಿನಗಳಿಂದ ಉಂಟಾಗಿರುವ ಭಿನ್ನಮತವನ್ನು ಶಮನಗೊಳಿಸಲು ಕಾಂಗ್ರೆಸ್ ಹೈಕಮಾಂಡ್ ಆ.2ರಂದು ನವದೆಹಲಿಯಲ್ಲಿ ಕರ್ನಾಟಕದ ಪಕ್ಷದ ನಾಯಕರೊಂದಿಗೆ ಎರಡು ಸಭೆಗಳನ್ನು ಕರೆದಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಹೈಕಮಾಂಡ್ ಮತ್ತು ಕರ್ನಾಟಕದ ಪ್ರಮುಖ ಕಾಂಗ್ರೆಸ್ ನಾಯಕರ ನಡುವೆ ಮೊದಲ ಸಭೆ ನಡೆಯಲಿದೆ. ಸಭೆಯಲ್ಲಿ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಹಾಗೂ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾನೂನು ಸಚಿವ ಎಚ್.ಕೆ. ಪಾಟೀಲ್, ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲಾ. ಕರ್ನಾಟಕ ಉಸ್ತುವಾರಿ ಮತ್ತು ಇತರ ಕೆಲವು ಉನ್ನತ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಕಾಂಗ್ರೆಸ್ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಜ್ಯ ಬಿಜೆಪಿಯ ಕೆಲ ನಾಯಕರ ವಿರೋಧ ನಡುವೆಯೂ ಸಂತೋಷ್ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿ ಮುಂದುವರಿಕೆ

- ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ಸಿ.ಟಿ.ರವಿಗೆ ಕೊಕ್
- ಸಿ.ಟಿ. ರವಿಗೆ ಪಕ್ಷದ ರಾಜ್ಯಾಧ್ಯಕ್ಷ ಗಾದಿ ನೀಡುವ ಸಾಧ್ಯತೆ





ಬೆಂಗಳೂರು, ಜು.29(ಕೆಎಂಶಿ)– ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಭಾರೀ ಹಿನ್ನಡೆಯಾದರೂ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಹುದ್ದೆಯಲ್ಲಿ ಸಂತೋಷ್ ಅವರನ್ನೇ ದೆಹಲಿಯ ಬಿಜೆಪಿ ವರಿಷ್ಠರು ಮುಂದುವರೆಸಿದ್ದಾರೆ.

ಸಂತೋಷ್ ಬದಲಾವಣೆಗೆ ರಾಜ್ಯ ನಾಯಕರಿಂದ ಉತ್ತಡ ಬಂದರೂ, ವರಿಷ್ಠರು ಲೆಕ್ಕಿಸದೆ ಅವರನ್ನೇ ಉನ್ನತ ಹುದ್ದೆಯಲ್ಲಿ ಮುಂದುವರೆಸಿದ್ದಾರೆ.

ಇದರಿಂದ ಸಂತೋಷ್ ಅವರು ಮತ್ತೊಮ್ಮೆ ಮೇಲುಗೈ ಸಾಧಿಸಿದ್ದು ಅವರ ಬಣದವರೇ ಬಿಜೆಪಿ ರಾಜ್ಯಾಧ್ಯಕ್ಷ ಹುದ್ದೆ ಹಾಗೂ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸ್ಥಾನಕ್ಕೆ ಆಯ್ಕೆಗೊಳ್ಳುವುದು ಖಚಿತ. ಮುಂಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ರಾಷ್ಟ್ರೀಯ ಬಿಜೆಪಿ ಸಂಘಟನೆಯಲ್ಲಿ ಮಹತ್ತರ ಬದಲಾವಣೆ ಮಾಡಲಾಗಿದ್ದು ಇದುವರೆಗೂ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿದ್ದ ರಾಜ್ಯದ ಸಿ.ಟಿ.ರವಿ ಅವರನ್ನು ಆ ಹುದ್ದೆಯಿಂದ ಬಿಡುಗಡೆಗೊಳಿಸಲಾಗಿದೆ. ಆದರೆ, ಸಿ.ಟಿ.ರವಿ ಅವರಿಗೆ ರಾಜ್ಯಾಧ್ಯಕ್ಷ ಸ್ಥಾನ ನೀಡುವ ಉದ್ದೇಶದಿಂದ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಕೈಬಿಡಲಾಗಿದೆ ಎನ್ನಲಾಗಿದೆ. ರವಿ ಅವರನ್ನು ಕೈಬಿಟ್ಟ ನಂತರ ರಾಜ್ಯ ಬಿಜೆಪಿಯಲ್ಲಿನ ಬೇರೆ ಯಾವುದೇ ನಾಯಕರಿಗೆ ಪರ್ಯಾಯವಾಗಿ ಈ ಸ್ಥಾನ ನೀಡಿಲ್ಲ. ಕರ್ನಾಟಕ ಬಿಜೆಪಿ ಸಂಘಟನೆಯ ಪುನರ್ ರಚನೆಗೆ ವರಿಷ್ಠರು ಮುಂದಾಗಿದ್ದು ಯಾವುದೇ ಸಂದರ್ಭದಲ್ಲಿ ರಾಜ್ಯಾಧ್ಯಕ್ಷರ ನೇಮಕಾತಿ ಆದೇಶ ಹೊರಬೀಳಬಹುದು. ಸಂತೋಷ್ ಅವರಿಗೆ ಆಪ್ತರಾಗಿರುವ ರವಿ ಅವರಿಗೆ ಈ ಸ್ಥಾನ ದಕ್ಕಲಿದೆ ಎಂದು ಪಕ್ಷದ ವಲಯದಲ್ಲಿ ಕೇಳಿಬಂದಿದೆ.

ಇತ್ತೀಚೆಗಷ್ಟೇ ಜೆಡಿಎಸ್ ವರಿಷ್ಠ ನಾಯಕ ಹಾಗೂ ಮಾಜಿ ಪ್ರಧಾನಿ ದೇವೇಗೌಡ ಅವರು, ಬಿಜೆಪಿ ರಾಜ್ಯಾಧ್ಯಕ್ಷರ ಹುದ್ದೆ ಚಿಕ್ಕಮಗಳೂರಿನ ಮುಖಂಡರಿಗೆ ದೊರೆಯಲಿದೆ. ಇದೇ ಕಾಲದಲ್ಲಿ ವಿಧಾನಸಭೆ ಪ್ರತಿಪಕ್ಷದ ನಾಯಕತ್ವ ವಿಜಯಪುರದ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ದಕ್ಕಲಿದೆ ಎಂದು ತಿಳಿಸಿದ್ದರು. ಅವರು ಹೇಳಿದಂತೆ, ರವಿ ಅವರನ್ನು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಬಿಡುಗಡೆಗೊಳಿಸಿರುವುದು ಇಂಬು ನೀಡಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನವನ್ನು ತಮ್ಮ ಪುತ್ರ ವಿಜಯೇಂದ್ರ ಇಲ್ಲವೇ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ನೀಡಬೇಕೆಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವರಿಷ್ಠರಿಗೆ ಶಿಫಾರಸು ಮಾಡಿದ್ದರು, ಅಲ್ಲದೆ, ಪ್ರತಿಪಕ್ಷ ನಾಯಕ ಸ್ಥಾನವನ್ನು ಆರ್. ಅಶೋಕ್ ಇಲ್ಲವೇ ಬಸವರಾಜ ಬೊಮ್ಮಾಯಿ ಅವರಿಗೆ ನೀಡುವಂತೆ ಶಿಫಾರಸು ಮಾಡಿದ್ದರು.

ಈ ಎರಡೂ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂಬಂಧ ವರಿಷ್ಠರು ಈಗಾಗಲೇ ವೀಕ್ಷಕರನ್ನು ಕಳುಹಿಸಿ ಮಾಹಿತಿ ಪಡೆದುಕೊಂಡಿದ್ದಾರೆ. ರಾಷ್ಟ್ರೀಯ ಸಂಘಟನೆಯಲ್ಲಿ ಭಾರೀ ಬದಲಾವಣೆ ತಂದಿರುವ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿಯನ್ನೂ ವರಿಷ್ಠರು ಪುನರ್ ರಚಿಸಬಹುದು ಎನ್ನಲಾಗಿದೆ.

ಪತ್ರಕರ್ತರು ಸತ್ಯಾಸತ್ಯತೆ ಪರಿಶೀಲಿಸಿ ವರದಿ ಮಾಡಿ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿ ಜಯರಾಂ ಸಲಹೆ



ಮಂಡ್ಯ, ಜು.29– ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಾಧ್ಯಮಗಳು ತಪ್ಪು ಮಾಹಿತಿ ನೀಡುವುದು ಸರಿಯಲ್ಲ. ಸತ್ಯಾಸತ್ಯತೆ ಪರಿಶೀಲಿಸಿ ವರದಿ ಮಾಡುವುದು ಸೂಕ್ತ. ಆಗ ಜನರಿಗೆ ಮಾಧ್ಯಮಗಳ ಮೇಲೆ ನಂಬಿಕೆ ಬರುತ್ತದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿ ಎನ್.ಜಯರಾಂ ಸಲಹೆ ನೀಡಿದರು.

ಶನಿವಾರ ನಗರದ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡರ ಶತಮಾನೋತ್ಸವ ಭವನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಶಾಖೆ ವತಿಯಿಂದ ನಡೆದ ಸಾಧನೆಗೈದ ಪತ್ರಕರ್ತರಿಗೆ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಮಾಧ್ಯಮ ನಾಗಾಲೋಟದಲ್ಲಿ ಓಡುತ್ತಿದೆ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಾಧ್ಯಮವೂ ಪೈಪೋಟಿ ಎದುರಿಸಬೇಕಾಗಿದೆ. ಇಂತಹ ಸಂದರ್ಭ ಎಲ್ಲಾ ಮಾಧ್ಯಮಗಳು ಅಸ್ತಿತ್ವ ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದರು.

ಸರ್ಕಾರದ ಒಳ್ಳೆಯ ಕಾರ್ಯಕ್ರಮಗಳನ್ನೂ ತಿಳಿಸುವ ಜೊತೆಗೆ ಸಾರ್ವಜನಿಕರ ಹಿತರಕ್ಷಣೆಯೂ ಮುಖ್ಯವಾಗಿರುತ್ತದೆ. ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರ ಹಿತರಕ್ಷಣೆಗಾಗಿ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಾಧ್ಯಮದವರ ಬಗ್ಗೆ ಅಪಾರ ಪ್ರೀತಿ ಇದೆ. ಮುಂದಿನ ಬಜೆಟ್‌ನಲ್ಲಿ 500 ಕೋಟಿ ರೂ. ಒದಗಿಸಬೇಕೆಂಬ ಇಚ್ಛೆ ಇದೆ ಮುಂದಿನ ವರ್ಷಗಳಲ್ಲಿ ಮತ್ತಷ್ಟು ಒಳ್ಳೆಯ ಬೆಳವಣಿಗೆಗಳು ಆಗಬಹುದು ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಇದೇ ವೇಳೆ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಉಪ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಪಿ.ತ್ಯಾಗರಾಜು, ಶಾಸಕ ಗಣಿಗ ರವಿಕುಮಾರ್, ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಸೋಮಶೇಖರ್ ಕೆರಗೋಡು, ಡಿ.ಎಲ್.ಲಿಂಗರಾಜು ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕಾರ್ಯದರ್ಶಿ ಮತ್ತೀಕೆರೆ ಜಯರಾಂ, ಜಿಲ್ಲಾಧ್ಯಕ್ಷ ಕೆ.ಸಿ.ಮಂಜುನಾಥ, ಪದಾಧಿಕಾರಿಗಳಾದ ಸಿ.ಎನ್.ಮಂಜುನಾಥ್, ಬಿ.ಪಿ.ಪ್ರಕಾಶ್, ಕೆ.ಎನ್.ನವೀನ್‌ಕುಮಾರ್, ನಂಜುಂಡಸ್ವಾಮಿ, ರವಿ ಸಾವಂದಿಪುರ, ಪಿ.ಜೆ.ಚೈತನ್ಯಕುಮಾರ್ ಇತರರಿದ್ದರು.

ಆತ್ಮಸಾಕ್ಷಿಗನುಗುಣವಾಗಿ ಕೆಲಸ ಮಾಡಿ: ಸಿಆರ್‌ಎಸ್

ಮಂಡ್ಯ: ಪತ್ರಕರ್ತರು ಪೂರ್ವಾಗ್ರಹ ಪೀಡಿತರಾಗಿ, ದ್ವೇಷ ರಾಜಕಾರಣ ಬಿಟ್ಟು ಆತ್ಮಸಾಕ್ಷಿಗನುಗುಣವಾಗಿ ಕೆಲಸ ಮಾಡಬೇಕು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ 2 ತಿಂಗಳಾಗಿದೆ. ಇಷ್ಟು ಕಡಿಮೆ ಅವಧಿಯಲ್ಲಿ ಎಲ್ಲಾ ಕಾರ್ಯಗಳಿಗೂ ವೇಗ ನೀಡಿದ್ದೇವೆ. ಇದಕ್ಕೆ ಕೆಲವರು ಅಪಸ್ವರ ಎತ್ತುತ್ತಿರುವುದು ಸರಿಯಲ್ಲ. ಕೆಲಸ ಮಾಡಿದರೂ ಅಪವಾದ, ಮಾಡದಿದ್ದರೂ ಅಪವಾದ ಎಂಬಂತೆ ಬಿಂಬಿಸುವುದು ಸರಿಯಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಬಹಳಷ್ಟು ಸಮಸ್ಯೆಗಳಿವೆ. ಹೆದ್ದಾರಿಗೆ ಅಗತ್ಯವಾಗಿ ಬೇಕಾಗಿರುವ ಸೌಲಭ್ಯಗಳನ್ನು ನೀಡದೆ ಸಾರ್ವಜನಿಕ ಸೇವೆಗೆ ಆತುರಾತುರವಾಗಿ ಲೋಕಾರ್ಪಣೆ ಮಾಡಿದ್ದು ಎಷ್ಟು ಸರಿ ಎಂದು ಪ್ರಶ್ನಿಸಿದ ಅವರು, ಯಾವುದೇ ಯೋಜನೆ ರೂಪಿಸಬೇಕಾದರೂ ಅದಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನೂ ಪೂರ್ಣಗೊಳಿಸಿದ ಬಳಿಕವಷ್ಟೇ ಸಾರ್ವಜನಿಕ ಸೇವೆಗೆ ಅರ್ಪಿಸಬೇಕು. ಈ ಬಗ್ಗೆ ಮಾಧ್ಯಮಗಳು ತಮ್ಮ ಕರ್ತವ್ಯ ಸಮರ್ಪಕವಾಗಿ ನಿರ್ವಹಿಸಬೇಕು ಎಂದರು.

ಹೆದ್ದಾರಿಯಲ್ಲಿ ಬರುವ 5 ನಗರ ಮತ್ತು ಪಟ್ಟಣಗಳ ಅಭಿವೃದ್ಧಿಗೆ ಕೇಂದ್ರಕ್ಕೆ 150 ಕೋಟಿ ರೂ.ಗಳ ಪ್ರಸ್ತಾವನೆ ಸಲ್ಲಿಸಲಾಗಿದೆ. ಶೀಘ್ರ ಈ ಬಗ್ಗೆ ಕ್ರಮ ವಹಿಸಿ ಹೆದ್ದಾರಿ ಸಂಪೂರ್ಣ ಅಭಿವೃದ್ಧಿಗೆ ನಮ್ಮ ಸರ್ಕಾರ ಮುಂದಾಗಿದೆ. ಅದಕ್ಕಾಗಿ ಮುಖ್ಯಮಂತ್ರಿಗಳೇ ಖುದ್ದು ಹೆದ್ದಾರಿ ಪರಿಶೀಲನೆ ನಡೆಸಿದ್ದಾರೆ ಎಂದರು.

ಹೆದ್ದಾರಿಯಲ್ಲಿ ತಿಂಗಳಿಗೆ 30 ರಿಂದ 50 ಅಪಘಾತಗಳು ಸಂಭವಿಸುತ್ತಿದ್ದವು. ಈ ಬಗ್ಗೆ ಪೊಲೀಸ್ ಇಲಾಖೆಗೆ ಸಿಎಂ ಸೂಚನೆ ನೀಡಿದ ನಂತರ ಹೆದ್ದಾರಿ ಪ್ರಾಧಿಕಾರ, ಪೊಲೀಸ್ ಇಲಾಖೆ ಸೇರಿದಂತೆ ಹಲವು ಇಲಾಖೆಗಳ ಅಧಿಕಾರಿಗಳು 10 ಬಾರಿ ಪರಿಶೀಲನೆ ನಡೆಸಿವೆ. 10ಕ್ಕೂ ಹೆಚ್ಚು ಬಾರಿ ಸಭೆಗಳನ್ನು ನಡೆಸಿ ಈಗ ಅಪಘಾತಗಳಾಗುವುದನ್ನು ಸ್ವಲ್ಪ ಮಟ್ಟಿಗೆ ತಡೆಯಲಾಗಿದೆ. ಇದರಿಂದ ಸಾವು–ನೋವುಗಳ ಸಂಖ್ಯೆಯೂ ಇಳಿಮುಖವಾಗಿದೆ ಎಂದು ಹೇಳಿದರು.

ಅಧಿಕ ಶ್ರಾವಣ: ವಿಶೇಷ ಪೂಜೆ

ಭಾರತೀನಗರ, ಜು.29– ಅಧಿಕ ಶ್ರಾವಣ ಮಾಸದ ಶ್ರಾವಣ ನಕ್ಷತ್ರದ ಪೂಜೆ ಅಂಗವಾಗಿ ಭಾರತೀನಗರದ ಶ್ರೀವೆಂಕಟೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಜರುಗಿತು.

ಸುತ್ತಮುತ್ತಲ ಗ್ರಾಮಗಳ ಭಕ್ತರು ಪೂಜೆಯಲ್ಲಿ ಭಾಗವಹಿಸಿ ದೇವರ ದರ್ಶನ ಪಡೆದರು. ದೇವಸ್ಥಾನದ ಆವರಣದಲ್ಲಿ ಮಳವಳ್ಳಿ ಗಾಯಿತ್ರಿ ಮಹಿಳಾ ಸಂಘ ಹಾಗೂ ಕೊಳ್ಳೇಗಾಲ ರಾಮಲಿಂಗ



ಭಜನಾ ಮಂಡಳಿಯಿಂದ ಶ್ರೀವೆಂಕಟೇಶ್ವರ ನಾಮಸ್ಮರಣೆ ಕಾರ್ಯಕ್ರಮ ಜರುಗಿತು. ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ರೈತರು ಸಾವಯವ ಕೃಷಿ ಕೈಗೊಳ್ಳಿ: ಕೆ.ಟಿ.ಹನುಮಂತು



ಕೆ.ಆರ್.ಪೇಟೆ, ಜು.29– ರಸಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು ಅತಿಯಾಗಿ ಬಳಸಿ ಬೇಸಾಯ ಮಾಡುವುದರಿಂದ ಭೂಮಿ ಬಂಜರಾಗುವುದಲ್ಲದೇ ಫಲವತ್ತತೆ ನಾಶವಾಗುತ್ತದೆ. ಹೀಗಾಗಿ ರೈತರು ಸಾವಯವ ಕೃಷಿ ಕೈಗೊಂಡು ನೈಸರ್ಗಿಕ ಪದ್ಧತಿಯಲ್ಲಿ ಬೇಸಾಯ ಮಾಡಬೇಕು ಎಂದು ಮಂಡ್ಯದ ಕೃಷಿಕ ಲಯನ್ ಸಂಸ್ಥೆ ಆಡಳಿತಾಧಿಕಾರಿ ಕೆ.ಟಿ.ಹನುಮಂತು ತಿಳಿಸಿದರು.

ತಾಲೂಕಿನ ವಿಠಲಾಪುರ ಗ್ರಾಮ ವ್ಯಾಪ್ತಿಯ ಸಾವಯವ ನೈಸರ್ಗಿಕ ಕೃಷಿಕ ವಿಠಲಾಪುರ ಸುಬ್ಬೇಗೌಡರ ತೋಟದಲ್ಲಿ ಕೃಷಿಕ ಲಯನ್ ಸಂಸ್ಥೆ, ನಂಜಮ್ಮ ಮೋಟೆಗೌಡ ಚಾರಿಟಬಲ್ ಟ್ರಸ್ಟ್ ಹಾಗೂ ಸಕ್ಕರೆ ನಾಡು ಲಯನ್ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರಗತಿಪರ ರೈತ ಸುಬ್ಬೇಗೌಡರಿಗೆ ತೋಟಗಾರಿಕೆ ಪಿತಾಮಹ ಡಾ.ಎಂ.ಎಚ್.ಮರಿಗೌಡ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಪ್ರಗತಿಪರ ಕೃಷಿಕ ಕೆ.ಎಸ್.ಸೋಮಶೇಖರ್, ಭೂಮಿ ತಾಯಿ ನಂಬಿ ಬೇಸಾಯ ಮಾಡುತ್ತಿರುವ ಸುಬ್ಬೇಗೌಡರು ಕೃಷಿಯನ್ನು ಲಾಭದಾಯಕ ಉದ್ಯಮವನ್ನಾಗಿಸಿಕೊಂಡಿದ್ದಾರೆ. ತೋಟಗಾರಿಕೆ ಬೆಳೆ ಬೆಳೆಯುವ ಮೂಲಕ ಲಕ್ಷಾಂತರ ರೂ. ಆದಾಯ ಗಳಿಸುತ್ತಿದ್ದಾರೆ. ಸಾವಯವ ಹಾಗೂ ನೈಸರ್ಗಿಕ ಪದ್ಧತಿಯಲ್ಲಿ ಬೇಸಾಯ ಮಾಡುವ ರೈತರಿಗೆ ಮಾರ್ಗದರ್ಶನ ನೀಡುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸಾವಯವ ಕೃಷಿಕ ವಿಠಲಾಪುರ ಸುಬ್ಬೆ ಗೌಡ, ಕಾಡಿನಂತಿದ್ದ ಈ ಭೂಮಿಯಲ್ಲಿ ನನ್ನ ಪತ್ನಿ ಹಾಗೂ ನನ್ನ ಮಕ್ಕಳ ಸಹಾಯದಿಂದ ಕಷ್ಟಪಟ್ಟು ಮಲೆನಾಡಿನಲ್ಲಿ ಬೆಳೆಯುವ ಕಾಫಿ, ಏಲಕ್ಕಿ, ಕರಿಮೆಣಸು, ಜಾಯಿಕಾಯಿ, ಮೋಸಂಬಿ, ಚಕ್ಕೆ, ಲವಂಗ ಮುಂತಾದ ಪದಾರ್ಥಗಳನ್ನು ಬೆಳೆದು ಲಕ್ಷಗಟ್ಟಲೆ ಆದಾಯ ಸಂಪಾದಿಸುತ್ತಿದ್ದೇನೆ. ನನ್ನ ಶ್ರಮ ಗುರುತಿಸಿ ಮಂಡ್ಯದ ಲಯನ್ಸ್ ಸೇವಾ ಸಂಸ್ಥೆ ತೋಟಗಾರಿಕಾ ಪಿತಾಮಹ ಮರಿಗೌಡ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಸಂತಸ ತಂದಿದೆ ಎಂದರು.

ಮಂಡ್ಯ ಕೃಷಿಕ ಲಯನ್ ಸಂಸ್ಥೆ ಅಧ್ಯಕ್ಷ ಕೆ.ಪಿ.ವೀರಪ್ಪ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತರಾದ ಬಳ್ಳೇಕೆರೆ ಮಂಜುನಾಥ್, ಕೆ.ಆರ್.ನೀಲಕಂಠ, ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪದ್ಮೇಶ್, ಮಂಡ್ಯದ ಪ್ರತಿಭಾಂಜಲಿ ಸುಗಮ ಸಂಗೀತ ಅಕಾಡೆಮಿ ಅಧ್ಯಕ್ಷ ಪ್ರೊ.ಡೇವಿಡ್, ಜಿಲ್ಲಾ ಲಯನ್ಸ್ ನಾಯಕ ಕೆ.ಆರ್.ಶಶಿಧರ್, ಎಸ್.ಎನ್.ಕೃಷ್ಣಪ್ಪ, ಖಜಾಂಚಿ ರಮೇಶ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸೇವಾ ಪ್ರತಿನಿಧಿ ಅಮೂಲ್ಯ, ಉದ್ಯಮಿ ಬಿ.ರಾಜಶೇಖರ್, ಸಕ್ಕರೆ ನಾಡು ಲಯನ್ ಸಂಸ್ಥೆ ಅಧ್ಯಕ್ಷ ಮಹಾಲಿಂಗೇಗೌಡ ಸೇರಿದಂತೆ ಇತರರಿದ್ದರು.


ಅರ್ಜಿ ಆಹ್ವಾನ

ಮಂಡ್ಯ, ಜು.29– ಭಾರತೀಯ ವಾಯುಪಡೆಯ ಅಗ್ನಿಪಥ್ ಯೋಜನೆಯಡಿ ವಾಯುಸೇನೆಯಲ್ಲಿ ಅಗ್ನಿವೀರ್ ವಾಯು ಹುದ್ದೆಯಲ್ಲಿ ಸೇವೆ ಸಲ್ಲಿಸಲು ಅರ್ಹ ಅವಿವಾಹಿತ ಯುವಕ, ಯುವತಿಯರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಆ.17 ಕೊನೆ ದಿನ. ಅರ್ಜಿ ಸಲ್ಲಿಕೆಗಾಗಿ http://agnipathvayu.cdac.in ಜಾಲತಾಣಕ್ಕೆ ಭೇಟಿ ನೀಡಿ.

ಪುಟ್ಟೇಗೌಡ ನಿಧನ

ಕೆ.ಆರ್.ಪೇಟೆ, ಜು.29– ತಾಲೂಕಿನ ಅಗ್ರಹಾರ ಬಾಚಹಳ್ಳಿ ಗ್ರಾಮದ ಹಿರಿಯ ಮುಖಂಡ ಪುಟ್ಟೇಗೌಡ (73) ನಿಧನರಾದರು.



ಮೃತರು ಪತ್ನಿ ಜಯಮ್ಮ, ಇಬ್ಬರು ಪುತ್ರರು, ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ವಿ.ಶಂಕರಗೌಡರು ಬಹುಮುಖ ಪ್ರತಿಭೆ ಹೊಂದಿದ್ದ ನಾಯಕ

ಬೆಂಗಳೂರು ಮಹಾನಗರ ಪಾಲಿಕೆ ವಿಶೇಷ ಆಯುಕ್ತ ಜಯರಾಮ್ ರಾಯಪುರ

ಮಂಡ್ಯ, ಜು.29– ನಿತ್ಯ ಸಚಿವ ಕೆ.ವಿ.ಶಂಕರಗೌಡರು ಬಹುಮುಖ ಪ್ರತಿಭೆ ಹೊಂದಿದ್ದ ನಾಯಕರಾಗಿದ್ದರು. ನಾಟಕ, ಸಮಾಜ ಸೇವೆ, ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರದಲ್ಲಿ ಅನೇಕ ಪ್ರತಿಭೆಗಳನ್ನು ಹುಟ್ಟು ಹಾಕಿ, ನಾಡಿಗೆ ಸಾಕ್ಷಿಪ್ರಜ್ಞೆ ಆಗಿದ್ದರು ಎಂದು ಬೆಂಗಳೂರು ಮಹಾನಗರ ಪಾಲಿಕೆ ವಿಶೇಷ ಆಯುಕ್ತ ಜಯರಾಮ್ ರಾಯಪುರ ಬಣ್ಣಿಸಿದರು.

ನಗರದ ಪಿಇಎಸ್ ಕಾಲೇಜಿನ ಸ್ವಾಮಿ ವಿವೇಕಾನಂದ ರಂಗಮಂದಿರದಲ್ಲಿ ಕರ್ನಾಟಕ ಸಂಘ, ಕರ್ನಾಟಕ ಮೂಡಲಪಾಯ ಯಕ್ಷಗಾನ ಪರಿಷತ್ ಹಾಗೂ ಆದಿಚುಂಚನಗಿರಿ ಮೂಡಲಪಾಯ ಯಕ್ಷಗಾನ ಕೇಂದ್ರದಿಂದ ನಡೆದ ನಾಟಕೋತ್ಸವ, ಕೆ.ವಿ.ಶಂಕರಗೌಡ ಲಲಿತ ಕಲಾ ಪ್ರಶಸ್ತಿ ಪ್ರದಾನ ಹಾಗೂ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೂರದರ್ಶಿತ್ವದ ವ್ಯಕ್ತಿಯಾಗಿದ್ದ ಅವರು



ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮರುಭೂಮಿಯಲ್ಲಿ ಪ್ರತಿಭೆ ಹುಡುಕುವುದು ಅವರ ಕೆಲಸವಾಗಿತ್ತು. ಸಾಂಸ್ಕೃತಿಕ ಪ್ರಜ್ಞೆ ಮೂಡಿಸಲು ನಾಟಕ ಸಂಸ್ಥೆ ಕಟ್ಟಿದ್ದರು. ಯುವಕರು, ಯುವತಿಯರಿಗೆ ಉನ್ನತ ಶಿಕ್ಷಣ ನೀಡಲು ಜನತಾ ಶಿಕ್ಷಣ ಟ್ರಸ್ಟ್ ಸ್ಥಾಪಿಸಿದರು. ಹಲವು ನಾಯಕರನ್ನು ರಾಜಕಾರಣಿಯನ್ನಾಗಿ ಬೆಳೆಸಿದ್ದಾರೆ. ಸಾಹಿತಿ, ನಾಟಕಕಾರರನ್ನು ಗುರುತಿಸಿ ಸನ್ಮಾನ ಮಾಡಿಸಿ ಹೆಚ್ಚಿನ ಕೆಲಸ ಮಾಡಲು ಉತ್ತೇಜನ ನೀಡಿದರು ಎಂದರು.

ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮಾತನಾಡಿ, ಕೆ.ವಿ.ಶಂಕರಗೌಡರು ಕೈಹಾಕದ ಕ್ಷೇತ್ರಗಳೇ ಇಲ್ಲ. ಶಿಕ್ಷಣ, ಸಹಕಾರ, ಸಾಹಿತ್ಯ, ರಂಗಭೂಮಿ, ಸಾಮಾಜಿಕ ಕ್ಷೇತ್ರಗಳಲ್ಲಿ ಅದ್ವಿತೀಯ ಸಾಧನೆ ಮಾಡಿದ್ದಾರೆ. ಶಂಕರಗೌಡ ಅವರು ಮಂಡ್ಯ ಜಿಲ್ಲೆ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಶಂಕರಗೌಡರು ಇಲ್ಲದಿದ್ದರೆ ಮಂಡ್ಯ ಎಂದರೆ ಇಂಡಿಯಾ ಎಂಬ ಜವಾಬ್ದಾರಿ ಸಿಗುತ್ತಿರಲಿಲ್ಲ. ಶಂಕರಗೌಡರು ವಿಶಾಲ ಮನೋಭಾವ ಹೊಂದಿದ್ದರು. ಸಂಘಟನಾತ್ಮಕ ನಾಯಕತ್ವ ಮಂಡ್ಯದಲ್ಲಿ ಕಟ್ಟಿದ್ದರು. ವಿಧಾನಸೌಧ ಅಲುಗಾಡಿಸುವ ಶಕ್ತಿ ಅವರಿಗಿತ್ತು ಎಂದರು.

ಕಾರ್ಯಕ್ರಮದಲ್ಲಿ ವಿದ್ವಾಂಸ ಡಾ.ರಾಗೌ ಅವರು ಅಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕ ಹುದ್ದೆ ಸ್ವೀಕಾರ ಮಾಡಿದರು. ಕಲಾವಿದ ಮಾರ್ಕಾಲು ದೇವರಾಜು ಅವರಿಗೆ ಕೆ.ವಿ.ಶಂಕರಗೌಡ ಲಲಿತಕಲಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಂತರ ಭಾಗವತರು ಹಾಗೂ ವಿವಿಧ ಪರಿಣತರನ್ನು ಸನ್ಮಾನಿಸಲಾಯಿತು. ಈ ಸಂದರ್ಭ ಕೆ.ವಿ.ಶಂಕರಗೌಡ ಜೀವನಾಧಾರಿತ ನಿತ್ಯ ಸಚಿವ ನಾಟಕ ಪ್ರದರ್ಶನ ನಡೆಯಿತು. ವೇದಿಕೆಯಲ್ಲಿ ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ, ಪ್ರೊ.ರಾಜಪ್ಪ ದಳವಾಯಿ, ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, ಪ್ರಮೋದ್ ಶಿಗ್ಗಾವ್, ಅಜಯ್ ನೀನಾಸಂ ಇತರರಿದ್ದರು.

ಭಯೋತ್ಪಾದಕ ಕೃತ್ಯಕ್ಕೆ ಸಂಚು: ಪ್ರಮುಖ ಆರೋಪಿ ನಜೀರ್ ವಶಕ್ಕೆ ಪಡೆದ ಸಿಸಿಬಿ

ಬೆಂಗಳೂರು,ಜು.29–ರಾಜ್ಯ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯ ಇತರೆಡೆ ಭಾರೀ ಪ್ರಮಾಣದಲ್ಲಿ ದಾಳಿ ನಡೆಸಲು ಸಂಚು ರೂಪಿಸಿದ್ದ ಪ್ರಕರಣದ ಪ್ರಮುಖ ಆರೋಪಿ ಎಲ್‌ಇಟಿ ಉಗ್ರ ನಜೀರ್ ಅಲಿಯಾಸ್ ಉಮ್ಮರ್ ಹಾಜಿಯನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದು ತೀವ್ರ ವಿಚಾರಣೆ ನಡೆಸುತ್ತಿದ್ದಾರೆ.



ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಕೇಂದ್ರ ಅಪರಾಧ ವಿಭಾಗದ ಪೊಲೀಸರು ನಜೀರ್‌ನನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಅಪರಾಧ ಸಂಖ್ಯೆ 149/2023ರ ಪ್ರಮುಖ ಆರೋಪಿ ನಜೀರ್, ಹೆಚ್ಚಿನ ಭದ್ರತೆಯ ನಡುವೆಯೂ ಐವರು ಆರೋಪಿಗಳನ್ನು ಉಗ್ರಗಾಮಿಗಳಾಗಿ ಹೇಗೆ ಪರಿವರ್ತಿಸಿದ ಎಂಬುದರ ಕುರಿತು ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದಾರೆಂದು ಮೂಲಗಳು ತಿಳಿಸಿವೆ. ಇದರ ಜೊತೆಗೆ ಬಂಧಿತ ಶಂಕಿತ ಉಗ್ರರಿಗೆ ಮದ್ದುಗುಂಡುಗಳನ್ನು ಪೂರೈಸುವಲ್ಲಿ ಆತನ ಪಾತ್ರದ ಕುರಿತಂತೆಯೂ ಪ್ರಶ್ನಿಸುತ್ತಿದ್ದಾರೆಂದು ತಿಳಿದುಬಂದಿದೆ. 2008ರ ಬೆಂಗಳೂರು ಸರಣಿ ಬಾಂಬ್ ಸ್ಫೋಟ ಪ್ರಕರಣದಲ್ಲಿ ನಜೀರ್ ಪ್ರಮುಖ ಆರೋಪಿಯಾಗಿದ್ದಾನೆ. ತಲೆಮರೆಸಿಕೊಂಡಿರುವ ಆರೋಪಿ ನಂ. 2 ಜುನೈದ್ ಅಹ್ಮದ್ ಎಲ್ಲಿದ್ದಾನೆಂಬುದರ ಕುರಿತು ನಜೀರ್‌ಗೆ ತಿಳಿದಿದೆಯೇ ಎಂಬುದರ ಕುರಿತಂತೆಯೂ ಸಿಸಿಬಿ ವಿಚಾರಣೆ ನಡೆಸುತ್ತಿದೆ.

ಈ ನಡುವೆ ಶಂಕಿತರೊಬ್ಬರಿಗೆ ಬಂದೂಕುಗಳನ್ನು ಪೂರೈಸಿದ ಸಲ್ಮಾನ್‌ನನ್ನೂ ಅಧಿಕಾರಿಗಳು ಪತ್ತೆ ಮಾಡಿದ್ದಾರೆಂದು ತಿಳಿದುಬಂದಿದೆ. ಜುನೈದ್ ಸೂಚನೆ ಮೇರೆಗೆ ತುಮಕೂರು ರಸ್ತೆಯ ಟಿ ಬೇಗೂರಿನಲ್ಲಿ ಶಂಕಿತರಿಗೆ ಬಂದೂಕುಗಳನ್ನು ಹಸ್ತಾಂತರಿಸಲಾಗಿತ್ತು ಎಂಬ ವಿಚಾರ ಅಧಿಕಾರಿಗಳಿಗೆ ಸಿಕ್ಕಿದೆ. ಈ ಹಿಂದೆ ಸಲ್ಮಾನ್ ಪೋಕ್ಸೋ ಪ್ರಕರಣದಲ್ಲಿ ಬಂಧಿತನಾಗಿದ್ದ. ಈತ ನೇಪಾಳ ಗಡಿ ಮೂಲಕ ದೇಶ ತೊರೆದಿರುವ ಶಂಕೆ ವ್ಯಕ್ತವಾಗಿದೆ. ಐವರು ಭಯೋತ್ಪಾದಕರಲ್ಲಿ ಒಬ್ಬನಿಗೆ ಬಂದೂಕುಗಳನ್ನು ಪೂರೈಸಿದ ಆರೋಪಿಗಳ ಬಗ್ಗೆ ನಮಗೆ ಸುಳಿವು ಸಿಕ್ಕಿದೆ' ಎಂದು ಜಂಟಿ ಪೊಲೀಸ್ ಆಯುಕ್ತ ಎಸ್‌ಡಿ ಶರಣಪ್ಪ ಮಾಹಿತಿ ನೀಡಿದ್ದಾರೆ.

ಬರಿ ಕತೆಯಲ್ಲ ಅಗ್ರಹಾರದ ಕಥನ ಕೃತಿ ಬಿಡುಗಡೆ

ಮೈಸೂರು, ಜು.29(ಎಂಕೆ)– ಲೇಖಕಿ ಕೆ.ಎಸ್.ಸುಚೇತ ಅವರ 'ಬರಿ ಕತೆಯಲ್ಲ ಅಗ್ರಹಾರದ ಕಥನ' ಕೃತಿಯನ್ನು ಶನಿವಾರ ಲೋಕಾರ್ಪಣೆ ಗೊಳಿಸಲಾಯಿತು.

ಮೈಸೂರು ವಿವಿ ಮಾನಸ ಗಂಗೋತ್ರಿಯ ಇಎಂಎಂಆರ್‌ಸಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಅಂಗಳ ಸಾಹಿತ್ಯ ಬಳಗದ ಸಹಯೋಗದಲ್ಲಿ ಅಭಿರುಚಿ ಪ್ರಕಾಶನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಮಾಜಶಾಸ್ತ್ರಜ್ಞೆ ಪ್ರೊ.ಆರ್.ಇಂದಿರಾ ಕೃತಿ ಬಿಡುಗಡೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಸಮಾಜ ಮತ್ತು ಜನಸಮುದಾಯದ ಬಗ್ಗೆ ತಿಳಿದುಕೊಳ್ಳಲು ಪುಸ್ತಕಗಳು ಮುಖ್ಯವಾಗಿದ್ದು, ಸುಚೇತ ಅವರ 'ಬರಿ ಕತೆಯಲ್ಲ ಅಗ್ರಹಾರದ ಕಥನ'ದಲ್ಲಿ ಸಮಾಜದ ಮೂಲ ವಿಷಯಗಳು ಅಡಗಿವೆ. ಯಾವುದೇ ಕತೆ, ವಿಚಾರಗಳನ್ನು ಸರಳವಾಗಿ ಹೇಳಿದರೆ ಅರ್ಥವಾಗುತ್ತದೆ. ಆದರೆ, ಕೆಲವು ವಿದ್ವಾಂಸರು ಪದಗಳು ಗಟ್ಟಿಯಾಗಿ, ಸೈದ್ಧಾಂತಿಕವಾಗಿರಬೇಕು ಎನ್ನುತ್ತಾರೆ. ಜನರನ್ನು ತಲುಪಲು ಅರ್ಥವಾಗುವ ಸರಳ ಪದಗಳಲ್ಲಿದ್ದರೆ ಸಾಕು. ಅಲ್ಲದೆ ಕಥೆಗಳ ರೂಪದಲ್ಲಿ ಜೀವನದ ಆಗು–ಹೋಗುಗಳನ್ನು ದಾಖಲಿಸುವುದು ಮುಖ್ಯವಾಗಿದೆ ಎಂದು ಹೇಳಿದರು.



> ಕೆ.ಎಸ್.ಸುಚೇತ ಅವರ 'ಬರಿ ಕತೆಯಲ್ಲ ಅಗ್ರಹಾರದ ಕಥನ' ಕೃತಿಯಲ್ಲಿ ಕಾಶ್ಮೀರಿ ಬ್ರಾಹ್ಮಣರ ವಲಸೆ ಕುರಿತು ಬರೆಯಲಾಗಿದೆ. ಮುಖ್ಯವಾಗಿ ಕಾಶ್ಮೀರದ ಬ್ರಾಹ್ಮಣರು ಇತ್ತೀಚಿನ ದಶಕಗಳಲ್ಲಿ ಅಲ್ಲಿಂದ ವಲಸೆ ಹೋಗುತ್ತಿಲ್ಲ. ಬದಲಿಗೆ 12ನೇ ಶತಮಾನದಲ್ಲೇ ತಮ್ಮ ಪ್ರದೇಶವನ್ನು ಬಿಟ್ಟು ಹೊರಬಂದು ಹಾಸನ, ಚಿಕ್ಕಮಗಳೂರು ಪ್ರದೇಶ ಸೇರಿದಂತೆ ಹಲವೆಡೆ ನೆಲೆಸಿದ್ದರು ಎನ್ನುವುದಕ್ಕೆ ಶಾಸನಗಳ ದಾಖಲೆ ಇದೆ.
>
> **– ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ, ವಿಮರ್ಶಕ**

ಮನುಕುಲದ ಅಧ್ಯಯನ ಈ ಹಿಂದೆ ಆಗುತ್ತಿತ್ತು ಆದರೆ ಈಗೀಗ ಕಡಿಮೆ ಆಗುತ್ತಿದೆ. ಒಂದು ಸಮುದಾಯದ ಅಧ್ಯಯನ ಮಾಡುವಾಗ ಒಳಹೊಕ್ಕು ವಸ್ತುಸ್ಥಿತಿಯನ್ನು ಬರೆಯಬೇಕಾಗುತ್ತದೆ. ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಎಲ್ಲಾ ಮಹಿಳೆಯರು ಅನುಭವಿಸುವ ಅನುಭವಗಳು ಒಂದೇ ಆಗಿರುತ್ತವೆ ಎನ್ನುವುದು ಸರಿಯಲ್ಲ. ಜಾತಿ ವ್ಯವಸ್ಥೆ, ಆರ್ಥಿಕ ಸ್ಥಿತಿಗತಿ, ದೌರ್ಜನ್ಯ ಎಂಬುದೆಲ್ಲವೂ ಮಹಿಳೆಯರ ಬದುಕಿನ ಅನುಭವಗಳು ಬೇರೆ ಬೇರೆಯಾಗಿರುತ್ತದೆ ಎಂಬುದನ್ನು ತಿಳಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಸಮಾಜದ ಚಿತ್ರಣ: ವಿಮರ್ಶಕ ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ಮಾತನಾಡಿ, ಈ ಕೃತಿ ಎಲ್ಲಾ ಮಹಿಳೆಯರ ಕಥೆ. ಮಹಿಳಾ ಕುಲದ ಆತ್ಮಕಥನ ಇದಾಗಿದ್ದು, ಹೆಣ್ಣಿನ ಮನಸ್ಸು ತನ್ನ ಸುತ್ತಲಿನ ಸಮಾಜವನ್ನು ಹೇಗೆ ಗ್ರಹಿಸುತ್ತದೆ ಎಂಬುದರ ಒಳನೋಟ ಇದರಲ್ಲಿದೆ. ಇಡೀ ಸಮಾಜದ ಚಿತ್ರಣ ಈ ಕೃತಿಯಲ್ಲಿ ಅಡಗಿದ್ದು, ಸಮಾಜ ಕುರಿತು ಯೋಚನೆ ಮಾಡುವವರಿಗೆ ಈ ಪುಸ್ತಕ ಮುಖ್ಯವಾಗಿದೆ ಎಂದರು.

ಒಬ್ಬ ವ್ಯಕ್ತಿಯ ಮೌಲ್ಯಮಾಪನವನ್ನು ಆತ ಹುಟ್ಟಿದ ಸಮುದಾಯದಿಂದ ಮಾಡುವುದು ತಪ್ಪು. ಅದನ್ನು ಬಹಳ ಸ್ಪಷ್ಟ ಮತ್ತು ನಿಖರವಾಗಿ ಈ ಕೃತಿಯಲ್ಲಿ ಪ್ರತಿಪಾದಿಸಲಾಗಿದೆ. ಈ ಜಾತಿಯಲ್ಲಿ ಹುಟ್ಟಿದರೆ ಗ್ರೇಟ್, ಮತ್ತೊಂದು ಜಾತಿಯಲ್ಲಿ ಹುಟ್ಟಿದರೆ ಇನ್ನೂ ಗ್ರೇಟ್ ಎನ್ನುವುದು ಸರಿಯಲ್ಲ. ಅನುಭವ ಬರೀ ಮಾತಿನ ರೂಪದಲ್ಲಿ ಇರಬಾರದು. ಅದನ್ನು ಅಕ್ಷರ ರೂಪಕ್ಕಿಳಿಸಬೇಕು. ಇಲ್ಲವಾದರೆ ಅನುಭವ ಅನುಭವವಾಗಿಯೇ ಉಳಿಯುತ್ತದೆ. ಅನುಭವ ಜ್ಞಾನವಾಗುವುದು ಅಕ್ಷರ ರೂಪದಿಂದ ಮಾತ್ರ ಎಂದರಲ್ಲದೆ ತಮ್ಮ ಕೃತಿಯ ಮೂಲಕ ಅಪರೂಪದ ಮಹಿಳಾ ಅನುಭವವನ್ನು ಕೆ.ಎಸ್.ಸುಚೇತ ಅವರು ಕಟ್ಟಿಕೊಂಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಸ್ಕೃತಿ ಚಿಂತಕ ನಾ.ದಿವಾಕರ ಅಧ್ಯಕ್ಷತೆ ವಹಿಸಿದ್ದರು. ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ನೀಲಗಿರಿ ಎಂ.ತಳವಾರ್, ಲೇಖಕಿ ಕೆ.ಎಸ್. ಸುಚೇತ, ಪ್ರಕಾಶಕ ಅಭಿರುಚಿ ಗಣೇಶ್, ಅಂಗಳ ಸಾಹಿತ್ಯ ಬಳಗದ ಹರೀಶ್ ಕುಮಾರ್, ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಶಬಾನಾ ಬಾನು ಮತ್ತಿತರರಿದ್ದರು.

ಪ್ರಧಾನಿ ಮೋದಿ ಜೊತೆಗೆ ವೇದಿಕೆ ಹಂಚಿಕೊಳ್ಳಲಿರುವ ಶರದ್ ಪವಾರ್

INDIA ನಾಯಕರ ಅಸಮಾಧಾನ

ನವದೆಹಲಿ: ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಯನ್ನು ಸೋಲಿಸಲು ಒಗ್ಗಟ್ಟಾಗಿರುವ ಕಾಂಗ್ರೆಸ್ ನೇತೃತ್ವದ INDIA ಒಕ್ಕೂಟ ಆ.25ರಂದು ಮುಂಬೈನಲ್ಲಿ ಮುಂದಿನ ಸಭೆ ನಡೆಸಲು ತೀರ್ಮಾನಿಸಿದೆ. ಆದರೆ, ಆ.1ರಂದು ಪುಣೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಎನ್‌ಸಿಪಿ ವರಿಷ್ಠ ಶರದ್ ಪವಾರ್, ಪ್ರಧಾನಿ ಮೋದಿ ಅವರೊಂದಿಗೆ ವೇದಿಕೆ ಹಂಚಿಕೊಳ್ಳುತ್ತಿರುವುದಕ್ಕೆ ವಿಪಕ್ಷಗಳ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಶುಕ್ರವಾರ ನಡೆದ ಇಂಡಿಯಾ ಒಕ್ಕೂಟದ ನಾಯಕರ ಸಭೆಯಲ್ಲಿ ಪ್ರಧಾನಿ ಮೋದಿಗೆ ಲೋಕಮಾನ್ಯ ತಿಲಕ್ ಪ್ರಶಸ್ತಿ ನೀಡಿ ಗೌರವಿಸುವ ಸಮಾರಂಭಕ್ಕೆ ಪವಾರ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುತ್ತಿರುವ ಬಗ್ಗೆ ಕೆಲವು ಸದಸ್ಯರು ಕಳವಳ ವ್ಯಕ್ತಪಡಿಸಿದ್ದು, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ ಹಿರಿಯ ನಾಯಕನೊಂದಿಗೆ ಮಾತನಾಡಿ ಸಮಾರಂಭಕ್ಕೆ ಹಾಜರಾಗದಂತೆ ಒತ್ತಾಯಿಸುವಂತೆ ಸಲಹೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. 2024ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು ಸಮಾನ ಮನಸ್ಕ ವಿಪಕ್ಷಗಳು ಒಗ್ಗೂಡುತ್ತಿರುವಾಗ ಇಂಡಿಯಾ ಒಕ್ಕೂಟವನ್ನು ಈಸ್ಟ್ ಇಂಡಿಯಾ ಕಂಪನಿ ಮತ್ತು ಭಯೋತ್ಪಾದಕ ಸಂಘಟನೆ ಇಂಡಿಯನ್ ಮುಜಾಹಿದ್ದೀನ್‌ಗೆ ಹೋಲಿಸಿರುವ ಮೋದಿಯವರೊಂದಿಗೆ ಶರದ್ ಪವಾರ್ ವೇದಿಕೆ ಹಂಚಿಕೊಳ್ಳುವುದು ಜನರಲ್ಲಿ ತಪ್ಪು ಸಂದೇಶ ರವಾನಿಸಲು ಕಾರಣವಾಗುತ್ತದೆ ಎಂದು ವಿಪಕ್ಷಗಳ ನಾಯಕರು ಹೇಳಿರುವುದಾಗಿ ಮೂಲಗಳು ಹೇಳಿವೆ.

ಕ್ಯಾಪ್ಟನ್ ಕುಶಾಲಪ್ಪ ನಿಧನ



ಮೈಸೂರು, ಜು.29–ಮೈಸೂರಿನ ಹಿನಕಲ್ ನಿವಾಸಿ ಕ್ಯಾಪ್ಟನ್ ಕುಶಾಲಪ್ಪ (62) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರು ಮಿಲಿಟರಿಯ ಮದ್ರಾಸ್ ರಿಜಿಮೆಂಟ್‌ನಲ್ಲಿ 32 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಇವರಿಗೆ ಮೈಸೂರು ಎಕ್ಸ್ ಸರ್ವಿಸ್‌ಮೆನ್ ಮೂವಮೆಂಟ್‌ನ ಸುಮಾರು 50 ಮಂದಿ ಸದಸ್ಯರು ರಿಟ್ ಪೆರೇಡ್ ಮಾಡಿ ಅಂತಿಮ ಗೌರವ ಸಲ್ಲಿಸಿದರು. ವಿಜಯನಗರದ ಮುಕ್ತಿಧಾಮದಲ್ಲಿ ಅಂತ್ಯಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾಹಿತಿ ಭೈರವಮೂರ್ತಿ ಸಂಸ್ಮರಣಾ ಕಾರ್ಯಕ್ರಮ

ಹೆಸರಿಗೆ ವ್ಯತಿರಿಕ್ತವಾದ ಮೃದು ಸ್ವಭಾವದ ಮೂರ್ತಿ: ಸಿಪಿಕೆ

ಮೈಸೂರು, ಜು.29(ಎಂಕೆ)– ಮೈಸೂರಿನ ಶಾರದಾದೇವಿನಗರದಲ್ಲಿರುವ ಸರಸ್ವತಿ ಸದನದಲ್ಲಿ ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ಹಾಗೂ ಜಿಲ್ಲಾ ಕಸಾಪ ವತಿಯಿಂದ ಸಾಹಿತಿ ಪ್ರೊ.ಕೆ.ಭೈರವಮೂರ್ತಿ ಒಂದು ಸ್ಮರಣೆ ಕಾರ್ಯಕ್ರಮ ನಡೆಯಿತು.

ಸಾಹಿತಿ ಪ್ರೊ.ಕೆ.ಭೈರವಮೂರ್ತಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮಾತನಾಡಿ, ಜೀವನದುದ್ದಕ್ಕೂ ಯಾರಿಗೂ ಕೆಡುಕನ್ನು ಬಯಸದೆ ಸಾಹಿತ್ಯವನ್ನೇ ಉಸಿರಾಗಿಸಿಕೊಂಡ ಪ್ರೊ.ಕೆ.ಭೈರವಮೂರ್ತಿ ಇತರರಿಗೆ ಮಾದರಿಯಾಗಿದ್ದಾರೆ. ಗುರು–ಹಿರಿಯರೆಂದರೆ ಅಪಾರ ಭಕ್ತಿ, ಗೌರವ ಭಾವನೆ ಹೊಂದಿದ್ದ ಅವರು, ಪ್ರತಿಯೊಬ್ಬರನ್ನು ಅತ್ಯಂತ ವಿಶ್ವಾಸದಿಂದ ಕಾಣುತ್ತಿದ್ದರು ಎಂದು ಸ್ಮರಿಸಿದರು.



ಹಿರಿಯ ಸಾಹಿತಿ ಸಿಪಿಕೆ ಮಾತನಾಡಿ, ಭೈರವ ಮೂರ್ತಿ ಹೆಸರಿಗೆ ವ್ಯತಿರಿಕ್ತವಾದ ಮೃದು ಸ್ವಭಾವದ ಮೂರ್ತಿಯಾಗಿದ್ದರು. ನಿರಂತರ ಸಾಹಿತ್ಯ ಕೃಷಿಯಲ್ಲಿ ತೊಡಗಿ ಅನೇಕ ಉದಯೋನ್ಮುಖ ಬರಹಗಾರರಿಗೆ ಮುನ್ನುಡಿ ಬರೆದು ಪ್ರೋತ್ಸಾಹಿಸುತ್ತಿದ್ದರು, ಹಿರಿಯ ಸಾಹಿತಿಗಳ ಅಭಿನಂದನಾ ಗ್ರಂಥಗಳನ್ನು ಹೊರ ತರುವಲ್ಲಿ ಶ್ರಮ ವಹಿಸುತ್ತಿದ್ದ ಅವರು, ನಿರಂತರ ಕಾಯಕಯೋಗಿ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಡಾ.ಕೆ.ಲೀಲಾ ಪ್ರಕಾಶ್, ಸಂಸ್ಕೃತ ವಿದ್ವಾಂಸ ಡಾ.ಹೆಚ್.ವಿ.ನಾಗರಾಜರಾವ್, ಸಮಾಜ ಸೇವಕ ಡಾ.ಕೆ ರಘುರಾಂ ವಾಜಪೇಯಿ, ಕವಿ ಜಯಪ್ಪ ಹೊನ್ನಾಳಿ, ರಂಗಕರ್ಮಿ ನಾಗಚಂದ್ರ, ಎಂ.ವಿ.ನಾಗೇಂದ್ರ ಬಾಬು, ಜಿಲ್ಲಾ ಕಸಾಪ ಉಪಾಧ್ಯಕ್ಷ ಎನ್.ಅನಂತ, ಕೇಶವ ಪ್ರಕಾಶ್ ಮತ್ತಿತರರಿದ್ದರು.

ನಿಗದಿತ ಸಮಯಕ್ಕೆ ನಿವೇಶನ ನೀಡದ ರಿಯಲ್ ಎಸ್ಟೇಟ್ ಸಂಸ್ಥೆಗೆ ದಂಡ

ಮೈಸೂರು, ಜು.29–ಹಣ ಕಟ್ಟಿಸಿಕೊಂಡು ಸಕಾಲದಲ್ಲಿ ನಿವೇಶನ ನೀಡದ ರಿಯಲ್ ಎಸ್ಟೇಟ್ ಸಂಸ್ಥೆ, ಗ್ರಾಹಕ ಪಾವತಿಸಿದ್ದ ಹಣದ ಜೊತೆಗೆ ಬಡ್ಡಿ ಹಾಗೂ 63 ಸಾವಿರ ರೂ. ದಂಡ ವಿಧಿಸಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶ ನೀಡಿದೆ.

ವಿವರ: ಮೈಸೂರಿನ ವೀಣೆಶೇಷಣ್ಣ ರಸ್ತೆ ನಿವಾಸಿ ಶ್ರೀರಾಮಕೃಷ್ಣಾರ್ಪಣಾನಂದ ಅವರು ಬಿ.ಎನ್.ರಸ್ತೆಯಲ್ಲಿರುವ ಟೆರ್ರಕಾನ್ ಪ್ರಾಜೆಕ್ಟ್ಸ್ ಸಂಸ್ಥೆಯಿಂದ ನಿವೇಶನ ಪಡೆಯಲು 2010ರ ಆ.18ರಿಂದ 2017ರ ಮೇ 27ರವರೆಗೆ 3 ಕಂತುಗಳಲ್ಲಿ 5.20 ಲಕ್ಷ ರೂ.ಗಳನ್ನು ಪಾವತಿಸಿದ್ದರು. 1 ವರ್ಷದೊಳಗೆ ನಿವೇಶನ ನೀಡುವುದಾಗಿ ತಿಳಿಸಿದ್ದ ಸಂಸ್ಥೆಯು ನಾಲ್ಕೈದು ವರ್ಷ ಕಳೆದರೂ ನಿವೇಶನ ಅಭಿವೃದ್ಧಿಪಡಿಸಿರಲಿಲ್ಲ.

ಈ ಹಿನ್ನೆಲೆಯಲ್ಲಿ ಶ್ರೀ ರಾಮಕೃಷ್ಣಾರ್ಪಣಾನಂದ ಅವರು ತಮಗೆ ನಿವೇಶನ ನೊಂದಾಯಿಸಿಕೊಡಬೇಕು ಅಥವಾ ಹಣ ಹಿಂತಿರುಗಿಸಬೇಕು ಎಂದು ಎರಡು ನೋಟಿಸ್‌ಗಳನ್ನು ನೀಡಿದ್ದರೂ ಅದಕ್ಕೆ ಸಂಸ್ಥೆ ಸ್ಪಂದಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಅವರು 2022ರ ಮೇ 20ರಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷೆ ಎ.ಕೆ.ನವೀನ್ ಕುಮಾರಿ, ಸದಸ್ಯರಾದ ಮಾರುತಿ ವಡ್ಡಾರ್ ಮತ್ತು ಎ.ಕೆ.ಲಲಿತ ಅವರು ಶ್ರೀರಾಮಕೃಷ್ಣಾರ್ಪಣಾನಂದ ಅವರು ಪಾವತಿಸಿರುವ 5.20 ಲಕ್ಷ ರೂ.ಗಳಿಗೆ ಅವರು ಹಣ ಪಾವತಿಸಿದ ದಿನಾಂಕದಿಂದ ವಾರ್ಷಿಕ ಶೇ.8ರಷ್ಟು ಬಡ್ಡಿಯೊಂದಿಗೆ 2 ತಿಂಗಳೊಳಗಾಗಿ ಟೆರ್ರಕಾನ್ ಪ್ರಾಜೆಕ್ಟ್ಸ್ ಸಂಸ್ಥೆ ಪಾವತಿಸಬೇಕು. ಅದಕ್ಕೆ ತಪ್ಪಿದಲ್ಲಿ ಈ ಆದೇಶದ ದಿನಾಂಕದಿಂದ ವಾರ್ಷಿಕ ಶೇ.15ರಷ್ಟು ಬಡ್ಡಿ ಪಾವತಿಸಬೇಕು. ಗ್ರಾಹಕರ ಆರ್ಥಿಕ ನಷ್ಟಕ್ಕೆ 50 ಸಾವಿರ ರೂ., ಮಾನಸಿಕ ಸಂಕಷ್ಟಕ್ಕೆ 10 ಸಾವಿರ ರೂ. ಹಾಗೂ ಪ್ರಕರಣದ ವೆಚ್ಚ 3 ಸಾವಿರ ರೂ.ಗಳನ್ನು ಈ ಆದೇಶದ 2 ತಿಂಗಳೊಳಗಾಗಿ ಪಾವತಿಸಬೇಕು. ಇದಕ್ಕೆ ತಪ್ಪಿದಲ್ಲಿ 63 ಸಾವಿರ ರೂ.ಗಳಿಗೆ ವಾರ್ಷಿಕ ಶೇ.12ರಷ್ಟು ಬಡ್ಡಿಯೊಂದಿಗೆ ಪಾವತಿಸಬೇಕಾಗುತ್ತದೆ ಎಂದು ಜು.24ರಂದು ಆದೇಶ ನೀಡಿದ್ದಾರೆ.

ಕೆ-ಕಿಸಾನ್ ವೆಬ್‌ಸೈಟ್ ಮೂಲಕ ರೈತರಿಗೆ ಬಿತ್ತನೆ ಬೀಜ ವಿತರಣೆ

- ಕ್ಯೂಆರ್ ಕೋಡ್ ಬಳಸಿ ಬಿತ್ತನೆ ಬೀಜ ಸರಬರಾಜು
- ಹೈಟೆಕ್ ವಿಧಾನದಿಂದ ದುರುಪಯೋಗಕ್ಕೆ ಕಡಿವಾಣ
- ಬಿತ್ತನೆ ಬೀಜ, ರಸಗೊಬ್ಬರಕ್ಕೆ ಯಾವ ಕೊರತೆ ಇಲ್ಲ
- ಬೆಳೆಗೆ ಅವಶ್ಯವಿರುವಷ್ಟು ಉತ್ತಮ ಮಳೆಯಾಗಿದೆ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾಹಿತಿ





ಮೈಸೂರು, ಜು.29(ಬಿಎಲ್‌ಯು)- ಪ್ರಸಕ್ತ ವರ್ಷದಿಂದ ರೈತರಿಗೆ ಬಿತ್ತನೆ ಬೀಜಗಳನ್ನು ಕೆ-ಕಿಸಾನ್ ವೆಬ್‌ಸೈಟ್ ಮೂಲಕ ಕ್ಯೂಆರ್ ಕೋಡ್ ಬಳಸಿ ವಿತರಣೆ ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಭತ್ತ, ಮುಸುಕಿನ ಜೋಳ, ರಾಗಿ ಸೇರಿದಂತೆ ಎಲ್ಲಾ ರೀತಿಯ ಬಿತ್ತನೆ ಬೀಜಗಳನ್ನು ಕೆ-ಕಿಸಾನ್ ವೆಬ್‌ಸೈಟ್ ಮೂಲಕ ಕ್ಯೂಆರ್ ಕೋಡ್ ಬಳಸಿ ನೀಡಲಾಗುತ್ತದೆ. ನೂತನ ವಿಧಾನದಿಂದ ಯಾವ ರೈತರಿಗೆ ಯಾವ ಬೆಳೆ, ಯಾವ ತಳಿ ಹಾಗೂ ಯಾವ ಲಾಟ್ ನಂಬರ್‌ನ ಬಿತ್ತನೆ ಬೀಜ ವಿತರಿಸಲಾಗಿದೆ ಎಂಬ ಮಾಹಿತಿ ದಾಖಲಾಗಿರುತ್ತದೆ ಎಂದರು.

ಈ ಮೊದಲು ಎರಡು ಎಕರೆ ಇರುವ ರೈತ ಐದಾರು ಎಕರೆಯಷ್ಟು ಬಿತ್ತನೆ ಬೀಜ ಪಡೆಯುತ್ತಿದ್ದರು. ಇದರಿಂದ ಸರ್ಕಾರ ರೈತರಿಗೆ ನೀಡುವ ಬಿತ್ತನೆ ಬೀಜದ ಸವಲತ್ತು ದುರುಪಯೋಗ ಆಗುತ್ತಿತ್ತು ಆದರೆ ನೂತನ ವಿಧಾನದಿಂದ ರೈತ ಹೊಂದಿರುವಷ್ಟು ಭೂಮಿಗೆ ಮಾತ್ರ ಬಿತ್ತನೆ ಬೀಜ ನೀಡಲಾಗುತ್ತಿದೆ. ಇಲ್ಲಿ ಯಾವುದೇ ರೀತಿಯ ದುರುಪಯೋಗ ಆಗುವುದಿಲ್ಲ ಎಂದು ಡಾ.ಮಹದೇವಪ್ಪ ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಈ ಸಾಲಿನಲ್ಲಿ 3,97,879 ಹೆಕ್ಟೇರ್ ಹಂಗಾಮಿನ ಬಿತ್ತನೆ ಪ್ರದೇಶವಿದೆ. ಇದಕ್ಕಾಗಿ 88,786 ಕ್ವಿಂಟಾಲ್ ಬಿತ್ತನೆ ಬೀಜಕ್ಕೆ ಬೇಡಿಕೆ ಇದೆ. ಇದಕ್ಕಾಗಿ ಕೃಷಿ ಇಲಾಖೆ 88,930 ಕ್ವಿಂಟಾಲ್ ಬಿತ್ತನೆ ಬೀಜವನ್ನು ದಾಸ್ತಾನು ಮಾಡಿಕೊಂಡಿದೆ. ರೈತ ಸಂಪರ್ಕ ಕೇಂದ್ರಗಳಿಗೆ 11,449 ಕ್ವಿಂಟಾಲ್ ಬಿತ್ತನೆ ಬೀಜವನ್ನು ಸರಬರಾಜು ಮಾಡಲಾಗಿದೆ. ಇದರಲ್ಲಿ ಈಗಾಗಲೇ 2,137 ಕ್ವಿಂಟಾಲ್ ಬಿತ್ತನೆ ಬೀಜವನ್ನು ರೈತರಿಗೆ ವಿತರಣೆ ಮಾಡಲಾಗಿದೆ. ಈ ಮೂಲಕ 2,11,170 ಹೆಕ್ಟೇರ್ ಪ್ರದೇಶದಲ್ಲಿ ರೈತರು ಬಿತ್ತನೆ ಮಾಡಿದ್ದು, ಶೇಕಡ 53 ರಷ್ಟು ಬಿತ್ತನೆಯಾಗಿದೆ ಎಂದು ಡಾ.ಮಹದೇವಪ್ಪ ಅಂಕಿ ಅಂಶಗಳ ಸಮೇತ ವಿವರಿಸಿದರು.

ಮುಂಗಾರು ಹಂಗಾಮಿಗೆ 1.27 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರಕ್ಕೆ ಬೇಡಿಕೆ ಇದೆ. 1.28 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನಿದೆ. ಈ ಮೂಲಕ ಬೇಡಿಕೆಗಿಂತ ಹೆಚ್ಚು ರಸಗೊಬ್ಬರದ ದಾಸ್ತಾನಿದೆ. ಖಾಸಗಿ ಮಾರಾಟಗಾರರು ಹಾಗೂ ಸಹಕಾರ ಸಂಘಗಳಲ್ಲಿ ರಸಗೊಬ್ಬರ ದಾಸ್ತಾನಿದ್ದು, ರಸಗೊಬ್ಬರಕ್ಕೆ ಕೊರತೆ ಇಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಮಾರ್ಚ್ 1ರಿಂದ ಮೇ 30ರ ಪೂರ್ವ ಮುಂಗಾರಿನ ವೇಳೆ 198.10 ಮಿಲಿ ಮೀಟರ್‌ನಷ್ಟು ವಾಡಿಕೆ ಮಳೆ ಆಗಬೇಕಿತ್ತು. ಆದರೆ 207.2ರಷ್ಟು ಮಳೆಯಾಗಿದೆ. ಈ ಮೂಲಕ ಶೇಕಡ 4.59ರಷ್ಟು ಹೆಚ್ಚುವರಿ ಮಳೆಯಾಗಿದೆ. ಇನ್ನು ಜೂನ್ 1ರಿಂದ ಜುಲೈ 27ರವರೆಗೆ ಮುಂಗಾರಿನಲ್ಲಿ 202.1 ಮಿಲಿ ಮೀಟರ್‌ನಷ್ಟು ವಾಡಿಕೆ ಮಳೆಯಾಗಬೇಕಿತ್ತು. ಆದರೆ 166.5 ಮಿಲಿ ಮೀಟರ್ ಮಳೆಯಾಗಿದ್ದು, ಶೇಕಡಾ 17.61ರಷ್ಟು ಮಳೆ ಕೊರತೆಯಾಗಿದೆ. ಒಟ್ಟಾರೆ ಮಾರ್ಚ್ ತಿಂಗಳಿನಿಂದ ಇಲ್ಲಿವರೆಗೆ 407.3 ಮಿಲಿ ಮೀಟರ್ ವಾಡಿಕೆ ಮಳೆಯಾಗಬೇಕಿತ್ತು. ಆದರೆ 378 ಮಿಲಿ ಮೀಟರ್ ಮಳೆಯಾಗಿದ್ದು, ಶೇಕಡ 7.19ರಷ್ಟು ಮಳೆ ಕೊರತೆಯಾಗಿದೆ. ಆದರೆ ಶೇಕಡ 19ರಷ್ಟು ಮಳೆ ಕೊರತೆ ಆದರೂ ಉತ್ತಮ ಬೆಳೆಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ಡಾ.ಮಹದೇವಪ್ಪ ತಿಳಿಸಿದರು.

ಕಬಿನಿ ಜಲಾಶಯದಿಂದ ರೈತರ ಬೆಳೆಗೆ ಶೀಘ್ರವೇ ನೀರು

ಮೈಸೂರಿನ ಕಬಿನಿ ಜಲಾಶಯದಿಂದ ಶೀಘ್ರದಲ್ಲೇ ರೈತರ ಬೆಳೆಗೆ ನೀರು ಹರಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಕಬಿನಿ ಜಲಾಶಯ ಭರ್ತಿಯಾಗಿರುವ ಕಾರಣ ರೈತರು ಬೆಳೆ ಬೆಳೆಯಲು ನಾಲೆ ಮೂಲಕ ನೀರು ಬಿಡಲಾಗುವುದು. ಈ ಸಂಬಂಧ ಕಬಿನಿ ಜಲಾಶಯದ ನೀರಾವರಿ ಸಲಹಾ ಸಮಿತಿಯ ಸಭೆಯನ್ನು ಶೀಘ್ರವೇ ಕರೆದು ಈ ಬಗ್ಗೆ ತೀರ್ಮಾನ ಮಾಡಲಾಗುವುದು ಎಂದರು. ಕೃಷ್ಣರಾಜ ಸಾಗರ ಜಲಾಶಯ 112 ಅಡಿ ತನಕ ತುಂಬಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗುತ್ತಿರುವ ಕಾರಣ ಕೆಲವೇ ದಿನಗಳಲ್ಲಿ ಕೆಆರ್‌ಎಸ್ ಕೂಡ ಭರ್ತಿಯಾಗಲಿದೆ. ತರುವಾಯ ಕೃಷ್ಣರಾಜ ಸಾಗರದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ರೈತರು ಬೆಳೆಯುವ ಬೆಳೆಗೆ ನೀರು ಬಿಡಲು ತೀರ್ಮಾನ ಕೈಗೊಳ್ಳಲಾಗುವುದು ಎಂದು ಡಾ.ಮಹದೇವಪ್ಪ ಹೇಳಿದರು.

ಮೈಸೂರು ಜಿಲ್ಲೆಯ ಪ್ರಮುಖ ಬೆಳೆಗಳು

ಮೈಸೂರು ಜಿಲ್ಲೆಯಲ್ಲಿ 1,03200 ಹೆಕ್ಟೇರ್ ಪ್ರದೇಶದಲ್ಲಿ ಭತ್ತ, 63,525 ಹೆಕ್ಟೇರ್ ಪ್ರದೇಶದಲ್ಲಿ ರಾಗಿ, 36,140 ಹೆಕ್ಟೇರ್ ಪ್ರದೇಶದಲ್ಲಿ ಮುಸುಕಿನ ಜೋಳ, 42,900 ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ ಬೆಳೆಯಲಾಗುತ್ತದೆ. ಅಷ್ಟೆ ಅಲ್ಲದೆ 66,335 ಹೆಕ್ಟೇರ್ ಪ್ರದೇಶದಲ್ಲಿ ತಂಬಾಕು, 40,614 ಹೆಕ್ಟೇರ್ ಪ್ರದೇಶದಲ್ಲಿ ದ್ವಿದಳ ದಾನ್ಯ, 4,615 ಹೆಕ್ಟೇರ್ ಪ್ರದೇಶದಲ್ಲಿ ಸೂರ್ಯಕಾಂತಿ ಹಾಗೂ 12,520 ಹೆಕ್ಟೇರ್ ಪ್ರದೇಶದಲ್ಲಿ ರೈತರು ಕಬ್ಬು ಬೆಳೆಯಲಿದ್ದಾರೆ. ಕೃಷಿಯಲ್ಲಿ ರೈತ ಮಹಿಳೆಯರನ್ನು ಪ್ರೋತ್ಸಾಹಿಸಲು ಹಲವು ಕೃಷಿ ಪ್ರಶಸ್ತಿಗಳನ್ನು ನೀಡಲಾಗುತ್ತಿದ್ದು, ಹೆಸರು ನೋಂದಾಯಿಸಿಕೊಳ್ಳಲು ಆಗಸ್ಟ್ 30 ಕೊನೆಯ ದಿನವಾಗಿದೆ ಎಂದು ಡಾ.ಮಹದೇವಪ್ಪ ತಿಳಿಸಿದರು. ಜಂಟಿ ಕೃಷಿ ನಿರ್ದೇಶಕ ಚಂದ್ರಶೇಖರ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಮಾಧ್ಯಮಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಲೆಟರ್‌ಹೆಡ್ ಬಳಸಿ ಅಕ್ರಮವಾಗಿ ಸಭೆ ಕರೆಯಲಾಗಿದೆ: ಆರೋಪ



ಮೈಸೂರು, ಜು.29(ಜಿಎ)-ಮೈಸೂರು ನಗರಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾ ಸಂಘದ ಲೆಟರ್‌ಹೆಡ್ ಬಳಸಿ ಅಕ್ರಮವಾಗಿ ಈ ಹಿಂದಿನ ಗೌರವಾಧ್ಯಕ್ಷ ನಾರಾಯಣ್ ಅವರು ಸಭೆ ಕರೆದಿದ್ದಾರೆ ಎಂದು ಸಂಘದ ಉನ್ನತ ಸಮಿತಿ ಅಧ್ಯಕ್ಷ ಎನ್.ಮಾರ ಆರೋಪಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ನಗರಪಾಲಿಕೆ ಖಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರ ಕಾರ್ಮಿಕರ ಮಹಾ ಸಂಘದ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿ ಅವರ ಅವಧಿ ಮುಕ್ತಾಯವಾದ ನಂತರ ಅವರು ರಾಜೀನಾಮೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಜು.23 ರಂದು ಸಂಘದ ಸರ್ವ ಸದಸ್ಯರ ಸಭೆ ಕರೆದು ನೂತನ ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಬೈಲಾದಲ್ಲಿ ಕೆಲವು ನಿಯಮಗಳನ್ನು ತಿದ್ದುಪಡಿ ಮಾಡಿ ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿಗೆ ಸಭೆಯ ನಡಾವಳಿ ಮತ್ತು ನೂತನ ಪದಾಧಿಕಾರಿಗಳ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂದರು.

ನೂತನ ಪದಾಧಿಕಾರಿಗಳ ಪಟ್ಟಿಯ ಪ್ರಕಾರ ಸಂಘದ ಈ ಹಿಂದಿನ ಗೌರವ ಅಧ್ಯಕ್ಷರಾಗಿದ್ದ ನಾರಾಯಣ ಅವರ ಅವಧಿ ಮುಕ್ತಾಯವಾದ ಕಾರಣ ಅವರ ಬದಲು ಎಂ.ವಡಿವೇಲು ಅವರನ್ನು ನೂತನ ಗೌರವಾಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ಆದರೆ, ನಾರಾಯಣ್ ಅವರು ಸೇಡಿನಿಂದ ಮತ್ತೊಂದು ಗುಂಪು ಕಟ್ಟಿಕೊಂಡು ಜು.30ರಂದು ಸರ್ವ ಸದಸ್ಯರ ಸಭೆ ಕರೆದಿದ್ದಾರೆ. ಅವರು ಸಂಘದ ಪದಾಧಿಕಾರಿಯಾಗದ ಕಾರಣ ಅವರಿಗೆ ಸಭೆ ಕರೆಯಲು ಯಾವುದೇ ಅಧಿಕಾರವಿಲ್ಲ. ನಿಗಮ ಮಂಡಳಿಯಲ್ಲಿ ಸ್ಥಾನ ಗಳಿಸಲು ಮತ್ತು ಎಂಎಲ್‌ಸಿ ಆಗಲು ಈ ಸಭೆಯನ್ನು ನಡೆಸುತ್ತಿದ್ದು, ಯಾವುದೇ ಪೌರ ಕಾರ್ಮಿಕರು ಈ ಸಭೆಯಲ್ಲಿ ಭಾಗವಹಿಸಬೇಡಿ ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಗೌರವಾಧ್ಯಕ್ಷ ಎಂ.ವಡಿವೇಲು, ಸಮಿತಿ ಕಾರ್ಯದರ್ಶಿ ಶ್ರೀನಿವಾಸ್, ಗೌರವ ಕಾರ್ಯದರ್ಶಿ ಎಂ.ವಿ.ವೆಂಕಟೇಶ್, ಅಧ್ಯಕ್ಷ ಆರ್.ನರಸಿಂಹ, ಪ್ರಧಾನ ಕಾರ್ಯದರ್ಶಿ ಜಿ.ಮಂಜುನಾಥ್ ಮತ್ತು ಕಾರ್ಯಾಧ್ಯಕ್ಷ ಮಂಚಯ್ಯ ಉಪಸ್ಥಿತರಿದ್ದರು.

ರೈತರು ಬೆಳೆ ಹಾನಿಗೆ ಪರಿಹಾರ ಪಡೆಯಲು ಸಮೀಕ್ಷೆ ಕಡ್ಡಾಯ

- ಆ್ಯಪ್ ಡೌನ್‌ಲೋಡ್ ಮಾಡಬೇಕು
- ಬೆಳೆ ಮಾಹಿತಿ ನಮೂದಿಸಬೇಕು
- ಖಾಸಗಿ ಸಮೀಕ್ಷೆಗಾರರ ನೆರವು ಪಡೆಯಬಹುದು
- ಸಹಾಯವಾಣಿ 8448447715 ಸಂಪರ್ಕಿಸಬಹುದು

ಮೈಸೂರು, ಜು.29(ಬಿಎಲ್‌ಯು)- ಬೆಳೆಗೆ ಸರ್ಕಾರ ನೀಡುವ ಕನಿಷ್ಠ ಬೆಂಬಲ ಬೆಲೆ, ಬೆಳೆ ಮೇಲೆ ಸಾಲ, ಬೆಳೆ ವಿಮೆ ಸೇರಿದಂತೆ ಹಲವು ಸೌಲಭ್ಯ ಪಡೆಯಲು ರೈತರು ಕಡ್ಡಾಯವಾಗಿ ಬೆಳೆ ಸಮೀಕ್ಷೆ ಮಾಡಿಸಬೇಕಿದೆ.

ಬೆಳೆ ಸಮೀಕ್ಷೆ ಮಾಡಿಸದಿದ್ದರೆ ಸರ್ಕಾರದಿಂದ ರೈತರು ಯಾವುದೇ ಪರಿಹಾರ ಪಡೆಯಲು ಸಾಧ್ಯವೇ ಇಲ್ಲ. ಈ ನಿಟ್ಟಿನಲ್ಲಿ ರೈತರು ಕಡ್ಡಾಯವಾಗಿ ಬೆಳೆ ಸಮೀಕ್ಷೆ ಮಾಡಿಸಬೇಕು ಎಂದು ಮೈಸೂರು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕ ಚಂದ್ರಶೇಖರ್ ತಿಳಿಸಿದ್ದಾರೆ.

ರೈತರು ಮೊದಲು ಮೊಬೈಲ್‌ನ ಗೂಗಲ್ ಪ್ಲೇ ಸ್ಟೋರ್‌ನಲ್ಲಿ "Kharif Farmers Crop Survey 2023-24 ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ತರುವಾಯ E-KYC ಮೂಲಕ ಆಧಾರ್ ದೃಢೀಕರಿಸಿ ಎಂದು ಕ್ಲಿಕ್ ಮಾಡಿ ನಂತರ ರೈತರು ತಮ್ಮ ಆಧಾರ್ ನಂಬರ್ ಅನ್ನು ನಮೂದಿಸಬೇಕು. ತಮ್ಮ ಆಧಾರ್ ಮಾಹಿತಿಯನ್ನು ಸರ್ಕಾರದ ವಿವಿಧ ಇಲಾಖೆಗಳ ಕಲ್ಯಾಣ ಯೋಜನೆಗಳಲ್ಲಿ ಬಳಸಲು ನನ್ನ ಸಹಮತ ಇದೆ ಎಂಬುದನ್ನು ದೃಢೀಕರಿಸಿ ನಂತರ ಓಟಿಪಿ ಬಟನ್ ಕ್ಲಿಕ್ ಮಾಡಬೇಕು. ತರುವಾಯ ಓಟಿಪಿ ನಮೂದಿಸಿ ಮುಂದುವರೆಯಬೇಕು.

ನಂತರ ಜಮೀನಿನ ಸರ್ವೆ ನಂಬರ್, ವಿಸ್ತೀರ್ಣ ಹಾಗೂ ಬೆಳೆಗೆ ಸಂಬಂಧಿಸಿದ ಮಾಹಿತಿಯನ್ನು ಬೆಳೆಯ ಫೋಟೋ ಸಹಿತ ಅಪ್‌ಲೋಡ್ ಮಾಡಬೇಕು. ಈ ವಿವರವನ್ನು ಕೃಷಿ ಇಲಾಖೆಯ ಅಧಿಕಾರಿಗಳು ಪರಿಶೀಲನೆ ಮಾಡಿ ಅನುಮೋದಿಸುತ್ತಾರೆ. ಬೆಳೆಗೆ ಸಂಬಂಧಿಸಿದ ಎಲ್ಲಾ ವಿವರಗಳು ಆರ್‌ಟಿಸಿಯಲ್ಲಿ ದಾಖಲಾಗಿರುತ್ತದೆ.

ಕನಿಷ್ಠ ಬೆಂಬಲ ಬೆಲೆ, ಬೆಳೆ ವಿಮೆ, ಪ್ರವಾಹ ಹಾಗೂ ಬರಗಾಲದ ಸಂದರ್ಭದಲ್ಲಿ ಆಗುವ ಬೆಳೆ ನಷ್ಟದ ಪರಿಹಾರ, ಜಮೀನಿನಲ್ಲಿ ಬೆಳೆದಿರುವ ಮರಗಳನ್ನು ಕಡಿಯಲು ಪರ್ಮಿಟ್ ಪಡೆಯಲು, ಬೆಳೆ ಸಾಲ ಸೇರಿದಂತೆ ಸರ್ಕಾರದ ಯಾವುದೇ ಸವಲತ್ತು ಪಡೆಯಲು ಕಡ್ಡಾಯವಾಗಿ ರೈತರು ಬೆಳೆ ಸಮೀಕ್ಷೆ ಮಾಡಿಸಬೇಕು.

ಒಂದು ವೇಳೆ ರೈತನ ಬಳಿ ಮೊಬೈಲ್ ಇಲ್ಲದಿದ್ದರೆ ಅಥವಾ ಬೆಳೆ ಸಮೀಕ್ಷೆ ದಾಖಲಿಸಲು ಅವರಿಗೆ ಸಾಧ್ಯವಾಗದೇ ಇದ್ದರೆ ಗ್ರಾಮ ಲೆಕ್ಕಿಗರ ಜೊತೆ ಕೆಲಸ ಮಾಡುವ ಖಾಸಗಿ ಸಮೀಕ್ಷೆಗಾರರಿಂದ ಈ ಕಾರ್ಯ ಮಾಡಿಸಬಹುದು. ಖಾಸಗಿ ಸಮೀಕ್ಷೆಗಾರರಿಗೆ ಒಂದು ಬೆಳೆಗೆ 10 ರಿಂದ 20 ರೂಪಾಯಿ ನಿಗದಿ ಮಾಡಿದ್ದು, ಹಣ ಕೊಟ್ಟು ಅವರಿಂದ ಬೆಳೆ ಸಮೀಕ್ಷೆ ಮಾಡಿಸಬಹುದು.

ರೈತರಿಗೆ ಇನ್ನೂ ಹೆಚ್ಚಿನ ಮಾಹಿತಿಯ ಲಭ್ಯವಿದ್ದರೆ ಸಹಾಯವಾಣಿ ಸಂಖ್ಯೆ-844 844 7715ಗೆ ಕರೆ ಮಾಡಿ ಮಾಹಿತಿ ಪಡೆಯಬಹುದು. ಇದು ಸಾಧ್ಯವಾಗದಿದ್ದರೆ ಹತ್ತಿರದ ರೈತ ಸಂಪರ್ಕ ಕೇಂದ್ರ, ಕೃಷಿ, ಕಂದಾಯ, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಬಹುದು. ಮೈಸೂರು ಜಿಲ್ಲೆಯಲ್ಲಿ ಸುಮಾರು 9,80,602 ಜಮೀನುಗಳಲ್ಲಿ ಬೆಳೆ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಲಾಗುವುದು. ಒಟ್ಟಾರೆ ರೈತರು ಸರ್ಕಾರದ ಸವಲತ್ತುಗಳನ್ನು ಪಡೆಯಲು ಬೆಳೆ ಸಮೀಕ್ಷೆಯನ್ನು ಕಡ್ಡಾಯವಾಗಿ ಮಾಡಬೇಕಿದೆ.

ಇಂದಿನಿಂದ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಸಮ್ಮೇಳನ



ಮೈಸೂರು, ಜು.29(ಜಿಎ)- ಹುಬ್ಬಳ್ಳಿಯ ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಜು.30ರಿಂದ ಮೈಸೂರಿನಲ್ಲಿ ವಲಯ ಮಟ್ಟದ ಪ್ರಥಮ ಸಮ್ಮೇಳನ ಏರ್ಪಡಿಸಲಾಗಿದೆ ಎಂದು ರಾಜ್ಯ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಬ್ಬಳ್ಳಿಯ ಚುಟುಕು ಸಾಹಿತ್ಯ ಪರಿಷತಿನ ಕೇಂದ್ರ ಸಮಿತಿ, ಮೈಸೂರು ಅಭಿರುಚಿ ಬಳಗ, ಎನ್.ವಿ.ರಮೇಶ್ ಕಲಾ ಬಳಗ ಮತ್ತು ಆಸಕ್ತಿ ಪ್ರಕಾಶನದ ಸಹಯೋಗದೊಂದಿಗೆ ಮೈಸೂರಿನಲ್ಲಿ ಜು.30, 31ರಂದು ವಲಯ ಮಟ್ಟದ ಪ್ರಥಮ ಸಮ್ಮೇಳನ ಆಯೋಜಿಸಲಾಗಿದ್ದು, ಆಕಾಶವಾಣಿ ನಿವೃತ್ತ ಕಾರ್ಯಕ್ರಮಾಧಿಕಾರಿ ಎನ್.ವಿ.ರಮೇಶ್ ಅವರ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದಾರೆ ಎಂದರು.

ಜು.30ರಂದು ಬೆಳಗ್ಗೆ 10 ಗಂಟೆಗೆ ನಗರದ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾ ಮಂಟಪದಲ್ಲಿ ಸಮ್ಮೇಳನ ಆಯೋಜಿಸಿದ್ದು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕವಿ ಡಾ.ಜಯಪ್ಪ ಹೊನ್ನಾಳಿ ಮತ್ತು ಡಾ.ಶ್ರೀಕೃಷ್ಣ ಮಾಯ್ಲೆಂಗಿ ಭಾಗವಹಿಸಲಿದ್ದು, ಅಧ್ಯಕ್ಷತೆಯನ್ನು ತ್ರಿಭಾಷಾ ಸಾಹಿತಿ ಡಾ.ಲೀಲಾ ಪ್ರಕಾಶ್ ವಹಿಸಲಿದ್ದಾರೆ. ಉಷಾ ಮತ್ತು ನರಸಿಂಹ ಅವರ ಉಪನ್ಯಾಸವಿದೆ. ನಂತರ ಮಧ್ಯಾಹ್ನ 2.30ಕ್ಕೆ ವಿಚಾರ ಗೋಷ್ಠಿಗಳು ನಡೆಯಲಿವೆ ಎಂದರು.

ಜು.31ರಂದು ಬೆಳಗ್ಗೆ 10ಕ್ಕೆ ನಗರದ ರಾಜೇಂದ್ರ ಸಭಾಂಗಣದಲ್ಲಿ ಸುತ್ತೂರು ಸಂಸ್ಥಾನ ಮಠದ ಸಂಯುಕ್ತಾಶ್ರಯದಲ್ಲಿ 'ಬಸವ ತತ್ವ ಸಂದೇಶ ಇಂದು ಪ್ರಸ್ತುತ' ಎಂಬ ರಾಜ್ಯಮಟ್ಟದ ವಿಚಾರಗೋಷ್ಠಿ ನಡೆಯಲಿದೆ. ನಂತರ 10.30ಕ್ಕೆ ಚುಟುಕು ವಾಚನ ಗೋಷ್ಠಿ ಇದ್ದು, ಕೆ.ವಿ.ಶ್ರೀಕಾಂತ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವೀರನಗೌಡ ಮರಿಗೌಡರು ಆಗಮಿಸಲಿದ್ದಾರೆ. ಸುತ್ತೂರು ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ಗೋಷ್ಠಿಯನ್ನು ಮಾಜಿ ಸಚಿವ ಎಸ್.ಎಸ್.ಪಾಟೀಲ್ ಉದ್ಘಾಟಿಸಲಿದ್ದಾರೆ. ಚನ್ನಬಸಪ್ಪ ಧಾರವಾಡ ಶೆಟ್ರು, ವಿದ್ವಾನ್ ರಘುಪತಿ ಭಟ್, ದೇವಣ್ಣ ಹೊಸಕೋಟೆ ಮತ್ತು ಡಾ.ವಿರೂಪಾಕ್ಷ ಲಮಾಣಿ ಉಪಸ್ಥಿತರಿರಲಿದ್ದಾರೆ.

ಅಂದು ಮಧ್ಯಾಹ್ನ 12 ಗಂಟೆಗೆ ವಿಚಾರಗೋಷ್ಠಿ ಸಮಾರೋಪ ನಡೆಯಲಿದ್ದು, ಎನ್.ವಿ.ರಮೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಸದಾನಂದಯ್ಯ ಕುಲಂಬಿ ವಿಚಾರ ಮಂಡಿಸಲಿದ್ದಾರೆ. ಸಂಜೆ 4 ಗಂಟೆಗೆ ಸರಸ್ವತಿಪುರಂನ ಕೃಷ್ಣಧಾಮದಲ್ಲಿ ಪುಸ್ತಕ ವಿತರಣಾ ಸಮಾರಂಭ ಆಯೋಜಿಸಿದ್ದು, ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ದಿವ್ಯ ಉಪಸ್ಥಿತಿ ವಹಿಸಲಿದ್ದಾರೆ. ವಿದ್ವಾನ್ ಶ್ರೀಕಾಂತ ವಿ.ಕಳಸಾಪುರ ಅವರು ಅಧಿಕ ಮಾಸ ಕುರಿತು ಉಪನ್ಯಾಸ ನೀಡಲಿದ್ದು, ಡಾ.ಪ್ರೊ.ಸರ್ಬೇಶ್ವರ್ ಕರ್ ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ವಿಭಾಗದ ಅಧ್ಯಕ್ಷ ಎನ್.ವಿ.ರಮೇಶ್, ಉಮಾ ರಮೇಶ್, ಶೇಖರಗೌಡ ಪಾಟೀಲ್, ಡಾ.ಗಂಗಯ್ಯ ಕುಲಕರ್ಣಿ ಮತ್ತು ವಿರೂಪಾಕ್ಷ ಲಮಾಣಿ ಉಪಸ್ಥಿತರಿದ್ದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿ ದೇಶದ ಎಲ್ಲಾ ಭಾಷೆಗಳನ್ನು ಗೌರವಿಸುತ್ತದೆ: ಪ್ರಧಾನಿ ಮೋದಿ



ನವದೆಹಲಿ, ಜು.29- ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ದೇಶದ ಪ್ರತಿಯೊಂದು ಭಾಷೆಗೆ ಗೌರವ ಮತ್ತು ಮನ್ನಣೆ ನೀಡುತ್ತದೆ ಎಂದು ಶನಿವಾರ ಹೇಳಿರುವ ಪ್ರಧಾನಿ ನರೇಂದ್ರ ಮೋದಿ, ತಮ್ಮ ಸ್ವಾರ್ಥಕ್ಕಾಗಿ ಭಾಷೆಯನ್ನು ರಾಜಕೀಯಗೊಳಿಸಲು ಪ್ರಯತ್ನಿಸುವವರು ತಮ್ಮ ಅಂಗಡಿಗಳನ್ನು ಮುಚ್ಚಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಎನ್‌ಇಪಿ ಮೂರನೇ ವಾರ್ಷಿಕೋತ್ಸವ ಅಂಗವಾಗಿ 'ಅಖಿಲ ಭಾರತೀಯ ಶಿಕ್ಷಾ ಸಮಾಗಮ್' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪ್ರಧಾನಿ ಮೋದಿ, ವಿದ್ಯಾರ್ಥಿಗಳ ಸಾಮರ್ಥ್ಯದ ಬದಲಿಗೆ ಅವರ ಭಾಷೆಯ ಆಧಾರದ ಮೇಲೆ ಅವರನ್ನು ನಿರ್ಣಯಿಸುವುದೇ ದೊಡ್ಡ ಅನ್ಯಾಯ ಎಂದು ಹೇಳಿದರು. "ಮಾತೃಭಾಷೆಯಲ್ಲಿನ ಶಿಕ್ಷಣವು ದೇಶದಲ್ಲಿನ ಎಲ್ಲಾ ವಿದ್ಯಾರ್ಥಿಗಳಿಗೆ ನ್ಯಾಯದ ಹೊಸ ರೂಪವಾಗಿದೆ. ಇದು ಸಾಮಾಜಿಕ ನ್ಯಾಯದ ಕಡೆಗೆ ಮಹತ್ವದ ಹೆಜ್ಜೆಯಾಗಿದೆ ಎಂದರು.

ಹಲವಾರು ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಸ್ಥಳೀಯ ಭಾಷೆಗಳಿಗೆ ಆದ್ಯತೆ ನೀಡಿದ್ದು, ಭಾರತದಲ್ಲಿ ಹಲವು ಭಾಷೆಗಳಿದ್ದರೂ ಇಂಗ್ಲಿಷ್ ಮಾತನಾಡಲು ಸಾಧ್ಯವಾಗದವರನ್ನು ನಿರ್ಲಕ್ಷಿಸಲಾಗಿದೆ ಮತ್ತು ಅವರ ಪ್ರತಿಭೆಯನ್ನು ಗುರುತಿಸಲಾಗಿಲ್ಲ ಪರಿಣಾಮವಾಗಿ ಗ್ರಾಮೀಣ ಪ್ರದೇಶದ ಮಕ್ಕಳು ಹೆಚ್ಚು ಹಿಂದುಳಿಯುವಂತಾಗಿದೆ. ಈಗ ದೇಶದಲ್ಲಿ ಎನ್‌ಇಪಿ ಜಾರಿಯಿಂದ ಇದನ್ನು ಹೋಗಲಾಡಿಸಲು ಸಾಧ್ಯವಾಗುತ್ತದೆ. ದೂರವಿಡಲು ಪ್ರಾರಂಭಿಸಿದೆ. ವಿಶ್ವಸಂಸ್ಥೆಯಲ್ಲಿಯೂ ಸಹ ನಾನು ಭಾರತೀಯ ಭಾಷೆಯಲ್ಲಿ ಮಾತನಾಡುತ್ತೇನೆ ಎಂದರು.

ಸಮಾಜ ವಿಜ್ಞಾನದಿಂದ ಇಂಜಿನಿಯರಿಂಗ್ ವರೆಗಿನ ವಿಷಯಗಳನ್ನು ಈಗ ಭಾರತೀಯ ಭಾಷೆಗಳಲ್ಲಿ ಕಲಿಸಲಾಗುವುದು, ವಿದ್ಯಾರ್ಥಿಗಳು ಭಾಷೆಯ ಮೇಲೆ ವಿಶ್ವಾಸವಿಟ್ಟಾಗ ಅವರಲ್ಲಿರುವ ಕೌಶಲ್ಯ ಮತ್ತು ಪ್ರತಿಭೆ ಯಾವುದೇ ನಿರ್ಬಂಧಗಳಿಲ್ಲದೆ ಹೊರಹೊಮ್ಮುತ್ತದೆ ಎಂದರು. ಹೊಸ ಸಾಧ್ಯತೆಗಳ ತಾಣವಾಗಿ ಜಗತ್ತು ಭಾರತವನ್ನು ನೋಡುತ್ತಿದೆ ಮತ್ತು ಅಲ್ಲಿ ಐಐಟಿ ಕ್ಯಾಂಪಸ್‌ಗಳನ್ನು ಸ್ಥಾಪಿಸಲು ಹಲವಾರು ದೇಶಗಳು ಸರ್ಕಾರವನ್ನು ಸಂಪರ್ಕಿಸುತ್ತಿವೆ ಎಂದು ಪ್ರಧಾನಿ ಹೇಳಿದರು. ತಾಂಜಾನಿಯಾದಲ್ಲಿ ಒಂದು ಮತ್ತು ಅಬುಧಾಬಿಯಲ್ಲಿ ಈಗಾಗಲೇ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ. ವಿವಿಧ ಜಾಗತಿಕ ವಿಶ್ವವಿದ್ಯಾನಿಲಯಗಳು ಸಹ ನಮ್ಮನ್ನು ತಲುಪುತ್ತಿವೆ, ಭಾರತದಲ್ಲಿ ಕ್ಯಾಂಪಸ್‌ಗಳನ್ನು ಸ್ಥಾಪಿಸಲು ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸುತ್ತಿವೆ. ಭಾರತವನ್ನು ಸಂಶೋಧನೆ ಮತ್ತು ನಾವೀನ್ಯತೆಗಳ ಕೇಂದ್ರವನ್ನಾಗಿ ಮಾಡುವ ಗುರಿಯನ್ನು ಎನ್‌ಇಪಿ ಹೊಂದಿದೆ ಮತ್ತು ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆಗಳು ಮತ್ತು ಭವಿಷ್ಯದ ತಂತ್ರಜ್ಞಾನಕ್ಕೆ ಸಮಾನ ಪ್ರಾಮುಖ್ಯತೆಯನ್ನು ನೀಡಿದೆ ಎಂದು ಮೋದಿ ಹೇಳಿದರು.

ನಾಳೆ ಮೊಹಮ್ಮದ್ ರಫಿ 43ನೇ ಪುಣ್ಯಸ್ಮರಣೆ; ಗಾಯನ ಕಾರ್ಯಕ್ರಮ



ಮೈಸೂರು, ಜು.29(ಜಿಎ)-ಮೈಸೂರು ನಗರ ಮತ್ತು ಜಿಲ್ಲಾ ಸಾಂಸ್ಕೃತಿಕ ವೃತ್ತಿ ಕಲಾವಿದ ಸಮಿತಿ ವತಿಯಿಂದ ಜು.31 ರಂದು ಮೊಹಮ್ಮದ್ ರಫಿ ಅವರ 43ನೇ ಪುಣ್ಯಸ್ಮರಣೆ ಅಂಗವಾಗಿ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಬಿ.ಎನ್.ಜಯರಾಮರಾಜು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5.30ಕ್ಕೆ ನಗರದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಮೊಹಮ್ಮದ್ ರಫಿ ಅವರ ಸುಮಧುರ ಗೀತೆಗಳ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಮಾಜಿ ಮೇಯರ್ ಅಯೂಬ್‌ಖಾನ್ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಹಿಂದಿ ಚಿತ್ರಗೀತೆಗಳ ಗಾಯಕರಾದ ಆಲ್ಫಿ ಮತ್ತು ಎ.ಎಸ್.ಖಾನ್ ಅವರು ಮುಖ್ಯ ಗಾಯಕರಾಗಿ ಕಾಣಿಸಿಕೊಳ್ಳಲಿದ್ದಾರೆ. ಅವರೊಟ್ಟಿಗೆ ಸರ್ವಮಂಗಳ, ಪ್ರೀತಿ, ಸಹನಾ ದನಿಗೂಡಿಸಲಿದ್ದು, ದೀಪಕ್ ಜಯಶೀಲನ್ ಕೀಬೋರ್ಡ್, ಅಪ್ಪಾಜಿ ಟೋನಿ ಗಿಟಾರ್, ಮಥೀಯಾಸ್ ಮತ್ತು ವಿನ್ಸೆಂಟ್ ಕ್ರಿಸ್ಟಿ ರಿದಂ ಪ್ಯಾಡ್, ಮಹದೇವ್ ಮತ್ತು ಜಗದೀಶ್ ತಬಲಾ, ಡೋಲಾಕ್ ರವಿಕುಮಾರ್ ಮತ್ತು ಡ್ರಮ್ಸ್ ವಿಲಿಯಂ ಸಾಥ್ ನೀಡಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿ ಉಪಾಧ್ಯಕ್ಷ ಬಿ.ಎನ್.ಜನಾರ್ಧನ್, ಪದಾಧಿಕಾರಿಗಳಾದ ಆರ್.ಶ್ರೀನಿವಾಸ್, ಆರ್.ಶಿವಕುಮಾರ್ ಹಾಗೂ ಎಡೆಯೂರು ಸಮೀಉಲ್ಲಾ ಉಪಸ್ಥಿತರಿದ್ದರು.

ವಿಧಾನಸೌಧ ಆವರಣದಲ್ಲಿ ಡ್ರೋನ್ ಹಾರಿಸಿದರೆ ಪೊಲೀಸ್ ಕೇಸ್ ಎಚ್ಚರ

ಬೆಂಗಳೂರು, ಜು.29- ವಿಧಾನಸೌಧ ಆವರಣದಲ್ಲಿ ಅನುಮತಿ ಇಲ್ಲದೆ ಡ್ರೋನ್ ಕ್ಯಾಮರಾ ಹಾರಾಟ ನಡೆಸುತ್ತಿದ್ದ ಇಬ್ಬರು ಯುವಕರನ್ನು ಪೊಲೀಸರು ಬಂಧಿಸಿದ್ದಾರೆ.

ಇವೆಂಟ್ ಮ್ಯಾನೆಜ್ಮೆಂಟ್‌ನ ಅರುಣ್ ಮತ್ತು ವಿನೋದ್ ಬಾಬು ಬಂಧಿತರು. ಖಾಸಗಿ ಕಂಪನಿಗೆ 15 ವರ್ಷ ತುಂಬಿದ ಕಾರಣಕ್ಕೆ ಅದರ ಕಾರ್ಯಕ್ರಮ ಆಯೋಜನೆಗೆ ಯುವಕರು ಗುತ್ತಿಗೆ ಪಡೆದಿದ್ದರು.

ಈ ಹಿನ್ನೆಲೆಯಲ್ಲಿ ವಿಡಿಯೋ ಚಿತ್ರೀಕರಿಸಲು ಅರುಣ್ ಮತ್ತು ವಿನೋದ್ ಶುಕ್ರವಾರ ಬೆಳಗ್ಗೆ 6.15ರಲ್ಲಿ ಡ್ರೋನ್ ನೊಂದಿಗೆ ವಿಧಾನಸೌಧ ಪೂರ್ವ ಗೇಟ್ ಬಳಿ ಬಂದು ಹಾರಾಟ ನಡೆಸುತ್ತಿದ್ದರು. ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮೇಲೆ ಡ್ರೋನ್ ಹಾರಾಟ ನಡೆಸುತ್ತಿದ್ದನ್ನು ಗಮನಿಸಿದ ಪೊಲೀಸರು, ತಕ್ಷಣ ಯುವಕರನ್ನು ಮತ್ತು ಡ್ರೋನ್ ವಶಕ್ಕೆ ಪಡೆದು ವಿಧಾನಸೌಧ ಠಾಣೆಗೆ ಒಪ್ಪಿಸಿದರು. ಕೇಂದ್ರ ವಾಣಿಜ್ಯ ಪ್ರದೇಶದಲ್ಲಿ ಡ್ರೋನ್ ಹಾರಾಟಕ್ಕೆ ನಿರ್ಬಂಧ ಇರುವ ವಿಚಾರ ತಿಳಿಯದೆ ಹಾರಾಟ ನಡೆಸಿರುವುದಾಗಿ ಯುವಕರು ತಪ್ಪೊಪ್ಪಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅತಿಕ್ರಮ ಪ್ರವೇಶ ಮತ್ತು ನಿರ್ಲಕ್ಷ್ಯ ಆರೋಪದ ಮೇಲೆ ಕೇಸ್ ದಾಖಲಿಸಿ ಮುಂದೆ ತಪ್ಪು ಮಾಡದಂತೆ ಎಚ್ಚರಿಕೆ ಕೊಟ್ಟು ಠಾಣಾ ಜಾಮೀನಿನ ಮೇಲೆ ಯುವಕರನ್ನು ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ವಿಭಾಗ ಡಿಸಿಪಿ ಶ್ರೀನಿವಾಸ್‌ಗೌಡ ತಿಳಿಸಿದ್ದಾರೆ.

ವೈದ್ಯ ವೃತ್ತಿ ಅತ್ಯಂತ ಪವಿತ್ರ; ಶಾಸಕ ಟಿ.ಎಸ್.ಶ್ರೀವತ್ಸ

ವಿಶ್ವ ವೈದ್ಯರ ದಿನಾಚರಣೆ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರು,ಜು.29(ಪಿಎಂ)- ವೈದ್ಯ ವೃತ್ತಿ ಅತ್ಯಂತ ಪವಿತ್ರ. ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡುವ ಜೊತೆಗೆ ವೃತ್ತಿ ಪಾವಿತ್ರ್ಯತೆ ಉಳಿಸಿ, ಬೆಳೆಸುವ ಜವಾಬ್ದಾರಿ ಎಲ್ಲ ವೈದ್ಯರ ಮೇಲಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ಮೈಸೂರಿನ ಚಾಮುಂಡಿಪುರಂನಲ್ಲಿರುವ ಬಾಲ ಬೋಧಿನಿ ಶಾಲೆ ಆವರಣದಲ್ಲಿ ಅಪೂರ್ವ ಸ್ನೇಹ ಬಳಗ ಹಾಗೂ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಜಂಟಿ ಆಶ್ರಯದಲ್ಲಿ ವಿಶ್ವ ವೈದ್ಯರ ದಿನಾಚರಣೆ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಜನರು ವೈದ್ಯರನ್ನು ದೇವರಂತೆ ಕಾಣುತ್ತಾರೆ. ಆದರೆ ವೈದ್ಯ ವೃತ್ತಿಯಲ್ಲಿ ರೋಗಿಗಳೇ ದೇವರು. ವೈದ್ಯರು ಅರ್ಚಕರಾದರೆ, ಆಸ್ಪತ್ರೆಯೇ ದೇವಾಲಯ. ರೋಗಿಗಳಿಗೆ ಆರೋಗ್ಯ ಸೇವೆ ಒದಗಿಸಲು ಪಾರದರ್ಶಕ ಹಾಗೂ ಪ್ರಾಮಾಣಿಕವಾಗಿ ಶ್ರಮಿಸಬೇಕು. ಕೆಲವು ವೈದ್ಯರ ವರ್ತನೆಯಿಂದ ಶ್ರೀಸಾಮಾನ್ಯರಲ್ಲಿ ವ್ಯತಿರಿಕ್ತ ಮನೋಭಾವ ಬೆಳೆದಿರುವುದು ಕಳವಳಕಾರಿ. ಇಡೀ ವೈದ್ಯಕೀಯ ಕ್ಷೇತ್ರದಲ್ಲಿ ಸೇವಾ ಗುಣಗಳನ್ನು ಅಳವಡಿಸಿಕೊಂಡು ಸೇವೆಗೆ ಆದ್ಯತೆ ನೀಡಿದಾಗಲೇ ಸಾರ್ಥಕವಾಗುತ್ತದೆ ಎಂದು ಪ್ರತಿಪಾದಿಸಿದರು.

ಆಶೀರ್ವಚನ ನೀಡಿದ ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಜನರ ಆರೋಗ್ಯ ಜಾಗೃತಿಗೆ ಉಚಿತ ಆರೋಗ್ಯ ಶಿಬಿರಗಳು ಸಹಕಾರಿ. ಬಡ ಜನತೆ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ತೋರದೆ ಉಚಿತ ಆರೋಗ್ಯ ಶಿಬಿರದ ಪ್ರಯೋಜನ ಪಡೆಯಬೇಕು. ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ನಾರಾಯಣ ಹೃದಯಾಲಯದ ವೈದ್ಯಕೀಯ ನಿರ್ದೇಶಕ ಡಾ.ಎಂ.ಎನ್.ರವಿ ಮಾತನಾಡಿ, ರೋಗಿಗಳೊಂದಿಗೆ ವೈದ್ಯರು ಹೆಚ್ಚು ಮಾತನಾಡಿದಷ್ಟು ಅವರಲ್ಲಿ ಆತ್ಮವಿಶ್ವಾಸ ಬೆಳೆಯುತ್ತದೆ. ಜೊತೆಗೆ ಕಾಯಿಲೆ ಬಗ್ಗೆ ವೈದ್ಯರಿಗೂ ಸ್ಪಷ್ಟತೆ ಸಿಗುತ್ತದೆ. ಇದರಿಂದ ಸೂಕ್ತ ಚಿಕಿತ್ಸೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ನೀಡಲು ಸಹಾಯವಾಗುತ್ತದೆ. ಹೀಗಾಗಿ, ವೈದ್ಯರು ಸಾಧ್ಯವಾದಷ್ಟು ವಿವರವಾಗಿ ರೋಗಿಗಳೊಂದಿಗೆ ಸಂವಹನ ನಡೆಸಬೇಕು ಎಂದರು.

ಇದೇ ಸಂದರ್ಭದಲ್ಲಿ ನಾರಾಯಣ ಹೃದಯಾಲಯದ ವೈದ್ಯರು 120 ರೋಗಿಗಳಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಿದರು. ಶಿಬಿರದಲ್ಲಿ ಮಧುಮೇಹ, ರಕ್ತದೊತ್ತಡ, ಇಸಿಜಿ ಮತ್ತು ಇಕೋ ಸೇರಿದಂತೆ ಸಾಮಾನ್ಯ ಆರೋಗ್ಯ ತಪಾಸಣೆಗಳನ್ನು ಮಾಡಲಾಯಿತು.

ವಿಶ್ರಾಂತ ಕುಲಪತಿ ಪ್ರೊ.ಪದ್ಮಶೇಖರ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ನಗರ ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ ಬಸಪ್ಪ, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಉದ್ಯಮಿ ಜಯರಾಮ್, ಮುಖಂಡರಾದ ಅಜಯ್‌ಶಾಸ್ತ್ರಿ, ಕೇಬಲ್ ಮಹೇಶ್, ದೂರ ರಾಜಣ್ಣ, ಸುಚೇಂದ್ರ, ಚಕ್ರಪಾಣಿ, ಕನಕಮೂರ್ತಿ, ಜಗದೀಶ್ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ ಭಾನುವಾರ 30 ಜುಲೈ 2023

ಮಾದಕ ವ್ಯಸನದಿಂದ ಯುವ ಪೀಳಿಗೆ ರಕ್ಷಿಸಿ

ವಿದ್ಯಾರ್ಥಿಗಳಿಗೆ ಶಾಸಕ ಡಾ. ಮಂಥರ್ ಗೌಡ ಮನವಿ



ಮಡಿಕೇರಿ,ಜು.29– ಶಿಕ್ಷಣದ ಮೂಲಕ ಸಮಾಜಕ್ಕೆ ಉತ್ತಮ ಕೊಡುಗೆಗಳನ್ನು ನೀಡಬೇಕೆಂದು ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಕರೆ ನೀಡಿದರು.

ಜಿಲ್ಲಾ ಪಂಚಾಯಿತಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಕರ್ನಾಟಕ ರಾಜ್ಯ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘ ಹಾಗೂ ಮಡಿಕೇರಿ ತಾಲೂಕು ಮುಖ್ಯ ಶಿಕ್ಷಕರ ಸಂಘದ ಆಶ್ರಯದಲ್ಲಿ ನಡೆದ 2022–23ನೇ ಸಾಲಿನಲ್ಲಿ ಹತ್ತನೇ ತರಗತಿಯಲ್ಲಿ ಶೇ.100 ಫಲಿತಾಂಶ ನೀಡಿದ ಶಿಕ್ಷಕರಿಗೆ ಹಾಗೂ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಅನುತ್ತೀರ್ಣರಾಗುವ ಸಂದರ್ಭ ದಾರಿ ತಪ್ಪಿ ತೆಗೆದುಕೊಳ್ಳುವ ನಿರ್ಧಾರಗಳ ಬಗ್ಗೆ ಎಲ್ಲರಿಗೂ ತಿಳಿದಿರುತ್ತದೆ. ಈ ಬಗ್ಗೆ ಶಿಕ್ಷಕರು ಹಾಗೂ ಪೋಷಕರು ಗಮನ ಹರಿಸಬೇಕು. ಇತ್ತೀಚೆಗೆ ಯುವ ಪೀಳಿಗೆ ಮಾದಕ ವ್ಯಸನದತ್ತ ವಾಲುತ್ತಿದ್ದು, ಈ ಬಗ್ಗೆ ಶಿಕ್ಷಣದ ಮೂಲಕ ಮಾರ್ಗದರ್ಶನ ನೀಡಬೇಕು, ಶಿಕ್ಷಣದ ಮೂಲಕ ಸಮಾಜದಲ್ಲಿ ಬದಲಾವಣೆ ತರಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್. ಪೊನ್ನಣ್ಣ, ಶಾಲೆಯ ಯಶಸ್ಸು ಶೇ.100 ಅಂಕದಲ್ಲಿ ಮಾತ್ರ ಇಲ್ಲ, ಶೇ.100 ಅಂಕ ಪಡೆದ ವಿದ್ಯಾರ್ಥಿ ಭವಿಷ್ಯದಲ್ಲಿ ಏನು ಸಾಧನೆ ಮಾಡಿದ್ದಾನೆ, ಆ ವಿದ್ಯಾರ್ಥಿಗಳಿಗೆ ಬೇಕಾದ ಮಾರ್ಗದರ್ಶನ, ಸವಲತ್ತನ್ನು ನೀಡಿದ್ದೇವೆಯೇ ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯವೆಂದು ಹೇಳಿದರು.

ಮಕ್ಕಳ ವಿಚಾರದಲ್ಲಿ ಶಿಕ್ಷಕರು ಹಾಗೂ ಪೋಷಕರು ಸೂಕ್ಷ್ಮವಾಗಿರಬೇಕು, ಮುಕ್ತ ವಾತಾವರಣ ಕಲ್ಪಿಸಬೇಕು, ಶಿಸ್ತು ಬದ್ಧ ಜೀವನ ನಡೆಸಲು ಜೀವನದ ಮೌಲ್ಯಗಳನ್ನು ಕಲಿಸಬೇಕು ಎಂದರು.

ವಿಧಾನಪರಿಷತ್ ಸದಸ್ಯ ಎಸ್.ಎಲ್.ಭೋಜೆಗೌಡ ಮಾತನಾಡಿ, ಶಿಕ್ಷಕರ ಸಮಸ್ಯೆಗಳನ್ನು ಅರಿತಿದ್ದು, ಅವುಗಳ ಬೇಡಿಕೆ ಈಡೇರಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಸದಸ್ಯ ರಾಜೇಶ್ ಯಲ್ಲಪ್ಪ ಸರಕಾರಿ ನೌಕರರ ಸಂಘದ ಅಧ್ಯಕ್ಷ ಪೊನ್ನಚ್ಚನ ಶ್ರೀನಿವಾಸ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಂಗಧಾಮಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿ ದೊಡ್ಡೇಗೌಡರು, ಮುಖ್ಯ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಗುರುರಾಜ್, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಪಿ.ಎಸ್.ರವಿಕೃಷ್ಣ, ಕಾರ್ಯದರ್ಶಿ ಐ.ಜೆ. ಜಾನೆಟ್ ಇತರರು ಹಾಜರಿದ್ದರು.

ಆನೆ ದಾಳಿಯಿಂದ ಸಂಪೂರ್ಣ ಅಂಗವಿಕಲನಾದ ಕೂಲಿ ಕಾರ್ಮಿಕ

ಸರ್ಕಾರ, ಅರಣ್ಯ ಇಲಾಖೆಯಿಂದ ಪರಿಹಾರಕ್ಕೆ ಆಗ್ರಹ



ಗೋಣಿಕೊಪ್ಪಲು, ಜು.29– ಹೊಸೂರು ಗ್ರಾ.ಪಂ. ವ್ಯಾಪ್ತಿಯ ಕಾರೆಕಾಡುವಿನ ಲೈನ್ ಮನೆಗೆ ತೆರಳುತ್ತಿರುವ ಸಂದರ್ಭದಲ್ಲಿ ಕಾಡಾನೆ ದಾಳಿಗೆ ಸಿಲುಕಿ ಗಾಯಗೊಂಡಿರುವ ತೋಟದ ಕಾರ್ಮಿಕ ಮಾದು(45) ಅಂಗವೈಕಲ್ಯಕ್ಕೆ ತುತ್ತಾಗಿದ್ದು, ಭವಿಷ್ಯದ ದಿನಗಳನ್ನು ಮಲಗಿದಲ್ಲಿಯೇ ಕಳೆಯುವಂತಹ ಸನ್ನಿವೇಶ ಸೃಷ್ಟಿಯಾಗಿದೆ.

ಮಾದು ತನ್ನ ಪತ್ನಿ ಮೀನಾರೊಂದಿಗೆ ಮೇ 14ರಂದು ರಾತ್ರಿ ಮನೆಗೆ ಹಿಂತಿರುಗುತ್ತಿದ್ದ ಸಂದರ್ಭ ಆನೆಯೊಂದು ದಾಳಿ ಮಾಡಿ ಸೊಂಟ, ಎದೆ, ಕೈ ಕಾಲುಗಳಿಗೆ ತೀವ್ರವಾಗಿ ಗಾಯಗೊಳಿಸಿತ್ತು. ಗಾಯಾಳುವನ್ನು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಿ ಅರಣ್ಯ ಇಲಾಖೆ ಮೂಲಕ 9 ದಿನ ಚಿಕಿತ್ಸೆ ಕೊಡಿಸಿದ್ದರೂ ಅಂಗ ವೈಕಲ್ಯತೆಯಿಂದ ಪಾರುಮಾಡಲು ಸಾಧ್ಯವಾಗಿಲ್ಲ.

ಸಂತ್ರಸ್ತರಿಗೆ ನೆರವು: ದಲಿತ ಸಂಘರ್ಷ ಸಮಿತಿ ರಾಜ್ಯ ಸದಸ್ಯ ಟಿ.ಎನ್.ಗೋವಿಂದಪ್ಪ ಹಾಗೂ ಡಿಎಸ್ಎಸ್ ಜಿಲ್ಲಾ ಸಂಚಾಲಕ ಪರಶುರಾಮ ಅವರಿಂದ ವಿಷಯ ತಿಳಿದ ಸಮಾಜ ಸೇವಕ ಪುಳಿಂಜನ ಪೂವಯ್ಯ ಅವರು ಸಂತ್ರಸ್ತ ಕುಟುಂಬಕ್ಕೆ ತಿಂಗಳಿಗಾಗುವಷ್ಟು ಅಕ್ಕಿ, ಸಕ್ಕರೆ, ಎಣ್ಣೆ, ಅಡುಗೆ ಪದಾರ್ಥಗಳು, ಬೇಳೆಕಾಳು ಇತ್ಯಾದಿಗಳನ್ನು ಮುಗುಟ ಗೇರಿ ನಿವಾಸಕ್ಕೆ ತೆರಳಿ ವಿತರಿಸಿದರು. ಮಾತ್ರವಲ್ಲದೇ, 1 ವರ್ಷದವರೆಗೆ ಪ್ರತೀ ತಿಂಗಳು ದಿನಸಿ ವಿತರಣೆ ಮಾಡುವುದಾಗಿ ತಿಳಿಸಿದ್ದಾರೆ.

ಪರಿಹಾರ ನೀಡಲು ಆಗ್ರಹ: ಗಾಯಾಳುವಿಗೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ 3,77,080 ರೂ. ವೆಚ್ಚ ತಗುಲಿದ್ದು, ಇದನ್ನು ಅರಣ್ಯ ಇಲಾಖೆಯೇ ಭರಿಸಿದೆ. ಆದರೆ ಅರಣ್ಯ ಇಲಾಖೆ ಅಧಿಕಾರಿಗಳೂ ಮಾದು ಕ್ಷೇಮ ಸಮಾಚಾರ ವಿಚಾರಿಸಲು ಬರಲಿಲ್ಲವೆನ್ನಲಾಗಿದೆ. ಕೂಲಿ ಮಾಡಿ ಬದುಕುತ್ತಿದ್ದ ಮಾದುವಿಗೆ ಶೇ.100 ಅಂಗ ಊನಗೊಂಡಿರುವುದರಿಂದ ಅರಣ್ಯ ಇಲಾಖೆ 15 ಲಕ್ಷ ರೂ. ಪರಿಹಾರ ನೀಡುವಂತೆ ಹಾಗೂ ಮುಖ್ಯಮಂತ್ರಿ ಪರಿಹಾರ ನಿಧಿಯಿಂದಲೂ ಸಂತ್ರಸ್ತ ಕುಟುಂಬಕ್ಕೆ ಪರಿಹಾರ ಒದಗಿಸಲು ದಲಿತ ಸಂಘರ್ಷ ಸಮಿತಿ ಮುಖಂಡರು ಒತ್ತಾಯಿಸಿದ್ದಾರೆ.

ಮಾದು ದಂಪತಿಗೆ ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿ ಇದ್ದು ಮಾಸಿಕ ಔಷಧಿ ವೆಚ್ಚ ಹಾಗೂ ಮೈಸೂರಿಗೆ ಹೋಗಿ ಬರುವ ಆರೋಗ್ಯ ತಪಾಸಣಾ ವೆಚ್ಚಕ್ಕೂ ತೊಂದರೆಯಾಗಿದೆ ಎಂದು ಪುತ್ರ ಅಭಿಷೇಕ್ ಅಳಲು ತೋಡಿಕೊಂಡಿದ್ದಾರೆ. ಗಾಯಾಳು ಮಾದು ಮನೆಗೆ ಸಂಘಟನೆಯ ಹೆಚ್.ಬಿ.ಮುರುಗ, ತಾಲೂಕು ಸಂಘಟನಾ ಸಂಚಾಲಕ ನಾಗೇಂದ್ರ ಭೇಟಿ ನೀಡಿ, ಸಾಂತ್ವನ ಹೇಳಿದರು.

ಸೋಮವಾರಪೇಟೆಯಲ್ಲಿ ಮಳೆಯಿಂದ ಕಾಳುಮೆಣಸು ಬೆಳೆಗೆ ಅಪಾರ ಹಾನಿ



ಮಡಿಕೇರಿ,ಜು.29– ಸೋಮವಾರಪೇಟೆ ತಾಲೂಕಿನಾದ್ಯಂತ ಸುರಿದ ಧಾರಾಕಾರ ಮಳೆಗೆ ಕಾಫಿ, ಕಾಳುಮೆಣಸು ಬೆಳೆಗೆ ದೊಡ್ಡಮಟ್ಟದ ಹಾನಿಯಾಗಿದ್ದು, ಕೂಡಲೆ ಅಧಿಕಾರಿಗಳು ಮಳೆಹಾನಿ ಸಮೀಕ್ಷೆ ನಡೆಸಬೇಕೆಂದು ರಾಜ್ಯ ರೈತ ಸಂಘ ಆಗ್ರಹಿಸಿದೆ.

ಸೋಮವಾರಪೇಟೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರೈತ ಸಂಘದ ತಾಲೂಕು ಘಟಕದ ಅಧ್ಯಕ್ಷ ಕೆ.ಎಂ. ದಿನೇಶ್, ಮಳೆ ನಿಂತು ಬಿಸಿಲು ಪ್ರಾರಂಭವಾದ ಮೇಲೆ ಸಮೀಕ್ಷೆ ಮಾಡಿದರೆ ಪ್ರಯೋಜನವಿಲ್ಲ. ಸೂಕ್ತ ಮಳೆಹಾನಿ ಪರಿಹಾರ ರೈತರಿಗೆ ಸಿಗುವಂತಾಗಬೇಕು. ಕಂದಾಯ, ಕೃಷಿ, ತೋಟಗಾರಿಕಾ, ಕಾಫಿ ಮಂಡಳಿ ಜಂಟಿ ಸರ್ವೇ ಪ್ರಾರಂಭಿಸಲು ಸರ್ಕಾರ ಆದೇಶ ನೀಡಬೇಕು ಎಂದು ಒತ್ತಾಯಿಸಿದರು.

ರೈತ ಸಂಘದ ಉಪಾಧ್ಯಕ್ಷ ಜಿ.ಎಂ. ಹೂವಯ್ಯ ಮಾತನಾಡಿ, ಕಾಫಿಯನ್ನು ಕೃಷಿ ಬೆಳೆಯಾಗಿ ಪರಿವರ್ತನೆಯಾದಾಗ ಮಾತ್ರ ಕಾಫಿ ಬೆಳೆಯುವ ರೈತರು ಸಂಕಷ್ಟದಿಂದ ಪಾರಾಗಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಂಘದ ಸಂಚಾಲಕ ಲಕ್ಷ್ಮಣ್ ಮಾತನಾಡಿ, ಕಾಜೂರು ಅರಣ್ಯ ವ್ಯಾಪ್ತಿಯಲ್ಲಿ ಎಲಿಫೆಂಟ್ ಕಾರಿಡಾರ್ ಮುಚ್ಚಿ ರೈಲ್ವೆ ಬ್ಯಾರಿಕೇಡ್ ಅಳವಡಿಸಿರುವುದರಿಂದ ಕಾಡಾನೆಗಳು ಗ್ರಾಮಗಳಿಗೆ ಲಗ್ಗೆ ಇಟ್ಟು ಕೃಷಿ ಫಸಲುಗಳನ್ನು ನಾಶಪಡಿಸುತ್ತಿವೆ. 3 ವರ್ಷವಾದರೂ ಕೂಡ ಕಾಮಗಾರಿ ಪೂರ್ಣಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಎ.ಆರ್.ಕುಶಾಲಪ್ಪ, ಮಚ್ಚಂಡ ಅಶೋಕ್ ಉಪಸ್ಥಿತರಿದ್ದರು.

ಹಾರಂಗಿ ವಿವರ

ಹಾರಂಗಿ ಜಲಾಶಯ 2859 ಗರಿಷ್ಠ ನೀರಿನ ಸಂಗ್ರಹ ಮಟ್ಟ ಹೊಂದಿದ್ದು, ಈ ಪೈಕಿ ಜಲಾಶಯದಲ್ಲಿ 2856.81 ಅಡಿಗಳಷ್ಟು ನೀರಿನ ಸಂಗ್ರಹವಿದೆ. ಜಲಾಶಯಕ್ಕೆ 7360 ಕ್ಯುಸೆಕ್ ನೀರಿನ ಒಳಹರಿವಿದ್ದು, 3,600 ಕ್ಯುಸೆಕ್ ನೀರನ್ನು ನದಿಗೆ ಹರಿಯ ಬಿಡಲಾಗುತ್ತಿದೆ.

ನಾಳೆ ವಿರಾಜಪೇಟೆ ಪಟ್ಟಣ ಸಹಕಾರ ಬ್ಯಾಂಕ್ ನಿರ್ದೇಶಕ ಸ್ಥಾನಕ್ಕೆ ಚುನಾವಣೆ

ತಮ್ಮ ತಂಡ ಬೆಂಬಲಿಸಿ ಎಂದ ಪಟ್ಟಡ ರಂಜಿ ಪೂಣಚ್ಚ



ವಿರಾಜಪೇಟೆ, ಜು.29– ಕಳೆದ 20 ವರ್ಷಗಳ ಅವಧಿಯಲ್ಲಿ ಪ್ರಥಮ ಬಾರಿಗೆ ಜು.31 ರಂದು ವಿರಾಜಪೇಟೆ ಪಟ್ಟಣ ಸಹಕಾರ ಬ್ಯಾಂಕಿನ ನಿರ್ದೇಶಕ ಸ್ಥಾನಕ್ಕೆ ಚುನಾವಣೆ ನಡೆಯಲಿದ್ದು, ನೂತನ ಆಡಳಿತ ಮಂಡಳಿಗೆ ಅರ್ಹ ಮತದಾರರು (ಬ್ಯಾಂಕ್ ಸದಸ್ಯರು) ಮತ ನೀಡುವ ಮೂಲಕ ಪಟ್ಟಣ ಸಹಕಾರ ಬ್ಯಾಂಕ್ ಅಭಿವೃದ್ಧಿಗೆ ಸಹಕಾರ ನೀಡುವಂತೆ ಸಾಮಾನ್ಯ ವರ್ಗದಿಂದ ಸ್ಪರ್ಧಿಸಿರುವ ಪಟ್ಟಡ ರಂಜಿ ಪೂಣಚ್ಚ ಮನವಿ ಮಾಡಿದ್ದಾರೆ.

ವಿರಾಜಪೇಟೆ ಪಟ್ಟಣ ಸಹಕಾರ ಬ್ಯಾಂಕ್ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಿರುವ ಸದಸ್ಯರುಗಳು ಕರೆದಿದ್ದ ಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣ ಸಹಕಾರ ಬ್ಯಾಂಕ್ 3,813 ಸದಸ್ಯರುಗಳನ್ನು ಹೊಂದಿದ್ದು ಆಡಳಿತ ಮಂಡಳಿಯ 13 ನಿರ್ದೇಶಕರ ಸ್ಥಾನಗಳ ಆಯ್ಕೆಗೆ ಈ ಚುನಾವಣೆ ನಡೆಯಲಿದೆ ಎಂದರು.

ಕಳೆದ 20 ವರ್ಷಗಳಿಂದ ಯಾವುದೇ ಚುನಾವಣೆ ನಡೆಯದೆ ಅವಿರೋಧವಾಗಿ ಆಯ್ಕೆ ನಡೆಯುತ್ತಿತ್ತು. ಈ ಬಾರಿ ನಮ್ಮ ತಂಡದಿಂದ 12 ಸದಸ್ಯರುಗಳು ಸ್ಪರ್ಧಿಸಿದ್ದು ಪಟ್ಟಣ ಸಹಕಾರ ಬ್ಯಾಂಕ್ ಅಭಿವೃದ್ಧಿ ಹೊಂದಲು ನೂತನ ಆಡಳಿತ ಮಂಡಳಿಯ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಚುನಾವಣೆಯಲ್ಲಿ ಬೆಂಬಲ ನೀಡುವಂತೆ ಅವರು ತಿಳಿಸಿದರು.

ಮುತ್ತಣ್ಣ ಪಿ.ನೆಲ್ಲಮಕ್ಕಡ ಇವರು ಮಾತನಾಡಿ, ಜು.31 ರಂದು ಪಟ್ಟಣ ಸಹಕಾರ ಬ್ಯಾಂಕ್ ಚುನಾವಣೆಗೆ ಇಲ್ಲಿನ ಮಹಿಳಾ ಸಮಾಜದ ಸಭಾಂಗಣದಲ್ಲಿ ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದೆ. ಬ್ಯಾಂಕ್ ಸದಸ್ಯರು ಚುನಾವಣೆಯಲ್ಲಿ ಭಾಗವಹಿಸಿ ನೂತನ ನಿರ್ದೇಶಕರ ನಮ್ಮ ತಂಡಕ್ಕೆ ಬೆಂಬಲ ನೀಡುವುದರೊಂದಿಗೆ ಬ್ಯಾಂಕ್ ಅಭಿವೃದ್ಧಿಗೆ ಸಹಕಾರ ನೀಡುವಂತೆ ಕೋರಿದರು.

ಸಾಮಾನ್ಯ ವರ್ಗದಿಂದ ಸ್ಪರ್ಧಿಸಿರುವ ರಾಜೇಶ್ ಪದ್ಮನಾಭ ಮಾತನಾಡಿ, ಬ್ಯಾಂಕ್‌ನ ಎಲ್ಲಾ ಸದಸ್ಯರನ್ನು ಭೇಟಿ ಮಾಡಲು ಸಾಧ್ಯವಾಗಿಲ್ಲ. ಆದ್ದರಿಂದ ಈ ಮೂಲಕ ಮನವಿ ಮಾಡಲಾಗಿದೆ. ಮತದಾರರು ನಮಗೆ ಬೆಂಬಲ ನೀಡುವಂತೆ ಕೋರಿದರು.

ಗೋಷ್ಠಿಯಲ್ಲಿ ಭೀಮಯ್ಯ ಎಂ.ನೆಲ್ಲಚಂಡ, ಪಿ.ಸಂತೋಷ್ ಕುಮಾರ್, ಸಿ.ಕೆ. ಪೃಥ್ವಿನಾಥ್, ಮರ್ವಿನ್ ಲೋಭೊ, ಮಹಿಳಾ ವರ್ಗದಿಂದ ದೇಚಮ್ಮ ಕಾಳಪ್ಪ ಮೆನಯಪಂಡ ಮತ್ತು ಲಾಲಿ (ಮೇರಿ) ಸತೀಶ್ ಕುಮಾರ್, ಪರಿಶಿಷ್ಟ ಜಾತಿ ಮೀಸಲು ಸ್ಥಾನದ ಅಭ್ಯರ್ಥಿ ಮಹದೇವ ಹೆಚ್.ಎಂ, ಹಿಂದುಳಿದ ವರ್ಗ(ಎ) ಸ್ಥಾನಕ್ಕೆ ರಫೀಕ್ ಕೋಳುವಂಡ, ಹಿಂದುಳಿದ ವರ್ಗ(ಬಿ) ಸ್ಥಾನಕ್ಕೆ ಜೋಕಿಂ ರೋಡ್ರಿಗಸ್ ಉಪಸ್ಥಿತರಿದ್ದರು.

ಗುಡ್ಡೆಹೊಸೂರಲ್ಲಿ ವಿದ್ಯುತ್ ತಂತಿ ತುಳಿದು ಹಸು ಸಾವು

ಕುಶಾಲನಗರ, ಜು.29– ವಿದ್ಯುತ್ ಕಂಬದಿಂದ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಹಸುವೊಂದು ಸಾವಿಗೀಡಾಗಿರುವ ಘಟನೆ ಗುಡ್ಡೆಹೊಸೂರು ಗ್ರಾಮದಲ್ಲಿ ಶನಿವಾರ ಸಂಭವಿಸಿದೆ.

ಗ್ರಾಮದ ರೈತ ಪುರುಷೋತ್ತಮ ಅವರ ಹಸು ಮೃತಪಟ್ಟಿದ್ದು, ಇದರಿಂದ ತುಂಬ ನಷ್ಟ ಉಂಟಾಗಿದೆ.

ಇತ್ತೀಚೆಗೆ ರೈತ ಪುರುಷೋತ್ತಮ ಅವರು ಸಾವಿರಾರು ರೂ. ಕೊಟ್ಟು ಖರೀದಿಸಿ ತಂದಿದ್ದರು. ಎಂದಿನಂತೆ ಜಮೀನಿಗೆ ಮೇಯಲು ಬಿಟ್ಟ ಸಂದರ್ಭ ಜಮೀನಿನ ಮಧ್ಯದಲ್ಲಿ ಬಿದ್ದಿದ್ದ ವಿದ್ಯುತ್ ತಂತಿ ತುಳಿ ಈ ಅನಾಹುತ ಸಂಭವಿಸಿದೆ. ರೈತನ ಕುಟುಂಬಕ್ಕೆ ನಷ್ಟವುಂಟಾಗಿದ್ದು, ಚೆಸ್ಕಾಂ ವತಿಯಿಂದ ಸೂಕ್ತ ಪರಿಹಾರವನ್ನು ನೀಡಬೇಕೆಂದು ಗುಡ್ಡೆ ಹೊಸೂರು ಗ್ರಾಪಂ ಮಾಜಿ ಅಧ್ಯಕ್ಷ ಬಿ.ಟಿ. ಪ್ರಸನ್ನ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.



ಪತ್ರಕರ್ತರು ಮೌಲ್ಯಯುತ ಸುದ್ದಿಗಳಿಗೆ ಆದ್ಯತೆ ನೀಡಿ

ಪತ್ರಿಕಾ ದಿನಾಚರಣೆಯಲ್ಲಿ ಶಾಸಕ ಎ.ಆರ್. ಕೃಷ್ಣಮೂರ್ತಿ ಸಲಹೆ



ಚಾಮರಾಜನಗರ, ಜು.29– ಪತ್ರಕರ್ತರು ಮೌಲ್ಯಯುತ ಸುದ್ದಿಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಸಲಹೆ ನೀಡಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಬೆಳ್ಳಿ ಮಹೋತ್ಸವದ ಅಂಗವಾಗಿ ನಗರದ ವರ್ತಕರ ಭವನದಲ್ಲಿ ಶನಿವಾರ ನಡೆದ ಪತ್ರಿಕಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಎಷ್ಟು ಮುಖ್ಯವೋ ಅದೇ ರೀತಿ ಪತ್ರಿಕಾ ರಂಗವೂ ಅಷ್ಟೇ ಮುಖ್ಯ. ಈ 4 ಅಂಗಗಳು ಒಟ್ಟಾಗಿ ಇಂದಿನ ಕಲುಷಿತ ವಾತಾವರಣ ಹೋಗಲಾಡಿಸುವ ನಿಟ್ಟಿನಲ್ಲಿ ಮುಂದಾಗಬೇಕು. ದೇಶವನ್ನು ಉತ್ತಮವಾಗಿ ಮುನ್ನಡೆಸಿ, ಅಭಿವೃದ್ಧಿ ಪಥದತ್ತ ಸಾಗುವಂತೆ ಮಾಡಬೇಕು ಎಂದು ತಿಳಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಪತ್ರಕರ್ತರು ಶ್ರದ್ಧೆ, ಆಸಕ್ತಿ ವಹಿಸಿ ಬದ್ಧತೆಯಿಂದ ಕೆಲಸ ಮಾಡಬೇಕು. ಅಲ್ಲದೇ ಸಮಾಜದ ಬಗ್ಗೆ ಕಳಕಳಿ ಇರಬೇಕು ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಅನೇಕರು ದಂಧೆ ಮಾಡಲು ಪತ್ರಿಕಾ ರಂಗಕ್ಕೆ ಬರುತ್ತಿದ್ದಾರೆ. ಇಂತಹ ಬ್ಲಾಕ್‌ಮೇಲ್ ಮಾಡುವ ಪತ್ರಕರ್ತರನ್ನು ಮುಲಾಜಿಲ್ಲದೇ ಆಚೆ ಹಾಕುವ ಕೆಲಸ ಮಾಡಬೇಕು. ಸಮಾಜದ ಕಟ್ಟಕಡೆ ವ್ಯಕ್ತಿ ವಿಶ್ವಾಸ ಗಳಿಸಲು ಮುಂದಾಗಬೇಕು ಎಂದರು.

ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್ ಮಾತನಾಡಿ, ಪತ್ರಕರ್ತರಿಗೆ ಯಾವುದೇ ಮಾಹಿತಿಯಾದರೂ ಬಹು ಬೇಗ ದೊರೆಯುತ್ತದೆ. ಪತ್ರಕರ್ತರು ಹಲವು ಸವಾಲುಗಳ ನಡುವೆ ಕೆಲಸ ಮಾಡಬೇಕಿದೆ. ಹೀಗಾಗಿ ಪತ್ರಕರ್ತರ ಕ್ಷೇಮಾಭಿವೃದ್ಧಿಗೆ ಧನ ಸಹಾಯ ಮಾಡುತ್ತೇನೆ. ಅಲ್ಲದೇ ಪತ್ರಕರ್ತರಿಗೆ ಆಗಬೇಕಾದ ಕೆಲಸವನ್ನು ಸರ್ಕಾರದ ಮಟ್ಟದಲ್ಲಿ ಮಾಡಲು ಯತ್ನಿಸುತ್ತೇನೆ ಎಂದು ತಿಳಿಸಿದರು.

ಬಹುಮಾನ ವಿತರಿಸಿ ಮಾತನಾಡಿದ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ಇತ್ತೀಚಿನ ದಿನಗಳಲ್ಲಿ ಸೋಷಿಯಲ್ ಮೀಡಿಯಾಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಪತ್ರಕರ್ತರು ಈ ದೇಶದ ಬೆನ್ನೆಲುಬಾಗಿದ್ದು, ಎಲ್ಲಾ ಆಗುಹೋಗುಗಳನ್ನು ತಿಳಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, ಪತ್ರಕರ್ತರು ಸಮಾಜವನ್ನು ಸರಿದಾರಿಗೆ ತೆಗೆದುಕೊಂಡು ಹೋಗುವಂತವರು. ಪತ್ರಿಕಾ ರಂಗ ಇನ್ನು ವಿಶ್ವಾಸ ಉಳಿಸಿಕೊಂಡು ಹೋಗುತ್ತಿದೆ. ಪತ್ರಿಕೆಗಳಲ್ಲಿ ಬಹಳಷ್ಟು ನೈಜ ವರದಿಗಳು ವರದಿಯಾಗುತ್ತದೆ. ಜನರ ಸಂಕಷ್ಟಗಳಿಗೆ ಸ್ಪಂದಿಸುವ ಗುಣವನ್ನು ಪತ್ರಿಕಾ ಮಾಧ್ಯಮ ಹೊಂದಿದೆ ಎಂದರು.

ಇದೇ ವೇಳೆ 10 ಮಂದಿ ಸಾಧಕ ಪತ್ರಕರ್ತಕರಿಗೆ ಫಲ ತಾಂಬೂಲ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು. ಬೆಳ್ಳಿ ಮಹೋತ್ಸವ ಅಂಗವಾಗಿ ಸಂಘದ ಹಿಂದಿನ ಅಧ್ಯಕ್ಷ ಅಬ್ರಹಾಂ ಡಿ.ಸಿಲ್ವ, ಎಸ್.ಎಂ. ನಂದೀಶ್, ಎಂ.ಇ. ಮಂಜುನಾಥ್ ಅವರನ್ನು ಗೌರವಿಸಲಾಯಿತು.

ಬಳಿಕ, ವಿವಿಧ ಕ್ರೀಡಾಕೂಟದಲ್ಲಿ ಪಾಲ್ಗೊಂಡು ಜಯ ಗಳಿಸಿದ ಪತ್ರಕರ್ತರು ಹಾಗೂ ಅವರ ಕುಟುಂಬದ ಸದಸ್ಯರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ವರ್ತಕರ ಸಂಘದ ಜಿಲ್ಲಾಧ್ಯಕ್ಷ ರಾಜಶೇಖರ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜು ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಗೌಡಹಳ್ಳಿ ಮಹೇಶ್ ಇತರರಿದ್ದರು.

ಕಬ್ಬು ಬೆಳೆಗಾರರ ಸಂಘದಿಂದ ಹಕ್ಕೊತ್ತಾಯ ಸಲ್ಲಿಕೆ



ಚಾಮರಾಜನಗರ, ಜು.29– ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಎ.ಆರ್.ಕೃಷ್ಣಮೂರ್ತಿ, ಹೆಚ್.ಎಸ್.ಗಣೇಶ್‌ಪ್ರಸಾದ್ ಹಾಗೂ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಅವರಿಗೆ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಹಕ್ಕೊತ್ತಾಯ ಸಲ್ಲಿಸಲಾಯಿತು.

ನಗರದ ವರ್ತಕರ ಭವನದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ನೇತೃತ್ವದಲ್ಲಿ ಸಮಾವೇಶಗೊಂಡ ರೈತರು ಒತ್ತಾಯ ಪತ್ರ ಸಲ್ಲಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ 39 ದಿನಗಳ ಕಾಲ ನಡೆಸಿದ ನಿರಂತರ ಹೋರಾಟ ಫಲವಾಗಿ ಕಳೆದ ಸರ್ಕಾರ ಪ್ರತಿ ಟನ್ ಕಬ್ಬಿಗೆ 150ರೂ. ಹೆಚ್ಚುವರಿ ದರ ನಿಗದಿ ಮಾಡಿ ಕಾರ್ಖಾನೆಗಳು ಪಾವತಿ ಮಾಡಬೇಕೆಂದು ಆದೇಶ ಮಾಡಿತ್ತು. ಸರ್ಕಾರದ ಆದೇಶ ಉಲ್ಲಂಘನೆ ಮಾಡಿ ಕಾರ್ಖಾನೆ ಪ್ರಾರಂಭ ಮಾಡಲು ಹೊರಟಿರುವ ಕುಂತೂರು ಬಣ್ಣಾರಿ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿ ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿದರು.

ನ್ಯಾಯಾಲಯದಲ್ಲಿ ದಾವೆ ಇದೆ ಎಂದು ಕಾರ್ಖಾನೆಗಳು ರೈತರಿಗೆ ಹಣ ಪಾವತಿ ಮಾಡುವಲ್ಲಿ ವಿಳಂಬ, ಮೋಸ ಮಾಡುವ ಹುನ್ನಾರ ನಡೆಸುತ್ತಿದೆ. ಆದರಿಂದ ಜಿಲ್ಲೆಯ ಶಾಸಕರು, ಜಿಲ್ಲಾಧಿಕಾರಿಗಳು ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚಿಸಿ ನ್ಯಾಯಾಲಯದಲ್ಲಿರುವ ದಾವೆಯನ್ನು ಪಡೆದು ಸಕ್ಕರೆ ಕಾರ್ಖಾನೆಗಳಿಗೆ 150ರೂ. ಬಾಕಿಯನ್ನು ಕೊಡಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಕಟಾವು ಸಾಗಾಣಿಕೆ ಕೂಲಿ ವೆಚ್ಚ ರಾಜ್ಯ ಕಬ್ಬು ಸಲಹಾ ಮಂಡಳಿ ಆದೇಶದಂತೆ ನಿಗದಿಯಾಗಬೇಕು. ಇಳುವರಿಯಲ್ಲಿ ಮೋಸ ಮಾಡುತ್ತಿರುವ ಸಕ್ಕರೆ ಕಾರ್ಖಾನೆಗಳ ಇಳುವರಿಯನ್ನು ಪರೀಕ್ಷಿಸಲು ರೈತರು ಮತ್ತು ತಜ್ಞರ ಸಮಿತಿ ರಚಿಸಬೇಕು. 12 ತಿಂಗಳಿಗೆ ಕಬ್ಬನ್ನು ಕಟಾವು ಮಾಡಬೇಕು. ಇಲ್ಲದಿದ್ದರೆ ಬ್ಯಾಂಕ್ ಹೆಚ್ಚುವರಿ ಬಡ್ಡಿ ರೈತರಿಗೆ ಹೊರೆಯಾಗದಂತೆ ಸಕ್ಕರೆ ಕಾರ್ಖಾನೆಗಳು ಜವಾಬ್ದಾರಿ ವಹಿಸಬೇಕು. ಜಿಲ್ಲಾ ಉಸ್ತುವಾರಿ ಸಚಿವರ ಜೊತೆಯಲ್ಲಿ ಚರ್ಚಿಸಿ ತಕ್ಷಣ ಜಿಲ್ಲಾಡಳಿತ ಕಬ್ಬು ಬೆಳೆಗಾರರ ಸಭೆ ಕರೆದು ರೈತರ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದಿದ್ದರೆ ಹೋರಾಟ ಮಾಡುವುದಾಗಿ ಭಾಗ್ಯರಾಜ್ ಎಚ್ಚರಿಸಿದರು.

ಈ ವೇಳೆ ಕಬ್ಬು ಬೆಳೆಗಾರರ ಸಂಘ ತಾಲೂಕು ಅಧ್ಯಕ್ಷ ಹಾಲಿನ ನಾಗರಾಜು, ಪ್ರಧಾನ ಕಾರ್ಯದರ್ಶಿ ಹರ್ಷ, ರವಿ, ಮಂಜುನಾಥ್, ಗ್ರಾಮ ಘಟಕ ಅಧ್ಯಕ್ಷ ಮಹದೇವಸ್ವಾಮಿ ಸತೀಶ್, ಮಹೇಂದ್ರ, ಮಂಜು, ಪ್ರಶಾಂತ್ ಸೇರಿದಂತೆ ಇತರರಿದ್ದರು.

ನಂಜೆದೇವನಪುರ ಗ್ರಾಪಂ ಕಾಂಗ್ರೆಸ್ ತೆಕ್ಕೆಗೆ

ಅಧ್ಯಕ್ಷರಾಗಿ ಪಿ.ಶೇಖರಪ್ಪ, ಉಪಾಧ್ಯಕ್ಷರಾಗಿ ಬಿ.ಗುರುಮಲ್ಲಪ್ಪ ಆಯ್ಕೆ



ಚಾಮರಾಜನಗರ, ಜು.29– ತಾಲೂಕಿನ ನಂಜೆದೇವನಪುರ ಗ್ರಾಮ ಪಂಚಾಯಿತಿಯನ್ನು ಕಾಂಗ್ರೆಸ್ ವಶಪಡಿಸಿಕೊಂಡಿದ್ದು, ಅಧ್ಯಕ್ಷರಾಗಿ ಪಿ.ಶೇಖರಪ್ಪ ಉಪಾಧ್ಯಕ್ಷರಾಗಿ ಬಿ.ಗುರುಮಲ್ಲಪ್ಪ ಆಯ್ಕೆಯಾಗಿದ್ದಾರೆ.

ಗ್ರಾಪಂ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ, ಉಪಾಧ್ಯಕ್ಷ ಸ್ಥಾನ ಪ್ರವರ್ಗ 'ಬಿ' ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಸದಸ್ಯ ಪಿ.ಶೇಖರಪ್ಪ, ಬಿಜೆಪಿ ಬೆಂಬಲಿತ ಸದಸ್ಯ ಟಿ.ಎಸ್.ಬಸವಣ್ಣ ಉಪಾಧ್ಯಕ್ಷ ಸ್ಥಾನಕ್ಕೆ ಬಿ.ಗುರುಮಲ್ಲಪ್ಪ, ಗುರುರಾಜು ನಾಮಪತ್ರ ಸಲ್ಲಿಸಿದರು. ನಂತರ ನಡೆದ ಚುನಾವಣೆಯಲ್ಲಿ ತಲಾ 11 ಮತ ಪಡೆದ ಪಿ.ಶೇಖರಪ್ಪ ಅಧ್ಯಕ್ಷರಾಗಿ ಆಯ್ಕೆಯಾದರೇ, ಬಿ.ಗುರುಮಲ್ಲಪ್ಪ ಉಪಾಧ್ಯಕ್ಷರಾಗಿ ಆಯ್ಕೆಯಾದರು. ತಲಾ 10 ಮತಗಳನ್ನು ಪಡೆದ ಟಿ.ಎಸ್. ಬಸವಣ್ಣ, ಗುರುರಾಜು ಪರಾಭವಗೊಂಡರು. ಇವರಿಬ್ಬರ ಆಯ್ಕೆಯನ್ನು ಚುನಾವಣಾಧಿಕಾರಿ ಬಿ.ಮಾದೇಶ್ ಘೋಷಿಸಿದರು.

ನೂತನ ಅಧ್ಯಕ್ಷ ಶೇಖರಪ್ಪ, ಉಪಾಧ್ಯಕ್ಷ ಬಿ.ಗುರುಮಲ್ಲಪ್ಪ ಮಾತನಾಡಿ, ನಮ್ಮನ್ನು ಬೆಂಬಲಿಸಿ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಆಯ್ಕೆ ಮಾಡಿದ ಎಲ್ಲಾ ಸದಸ್ಯರಿಗೂ ಚಿರಋಣಿಯಾಗಿದ್ದೇವೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಮಾರ್ಗದರ್ಶನ ಪಡೆದು ಸರ್ವ ಸದಸ್ಯರ ಸಹಕಾರದೊಂದಿಗೆ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ಸಭೆಯಲ್ಲಿ ಮಾಜಿ ಅಧ್ಯಕ್ಷೆ ಮೇಘಶ್ರೀ, ಉಪಾಧ್ಯಕ್ಷೆ ನಾಗಮ್ಮ, ಸದಸ್ಯರಾದ ಭಾಗ್ಯಮ್ಮ, ಮಂಜುಳ, ಶಶಿಕಲಾ, ಮಹದೇವಸ್ವಾಮಿ, ಅಮೃತಮ್ಮ, ಮಹದೇವಮ್ಮ, ರಾಮಶೆಟ್ಟಿ, ಭಾಗ್ಯ, ನಾಗರತ್ನಮ್ಮ, ಪಾರ್ವತಿ, ಬಸವಶೆಟ್ಟಿ, ಆರ್.ಸಿದ್ದರಾಜನಾಯಕ, ಜಯಮ್ಮ, ಆರ್. ಮಂಜುಳ ಪಿಡಿಓ ವೀಣಾ, ಕಾರ್ಯದರ್ಶಿ ಮಹದೇವಪ್ಪ, ಸಿಬ್ಬಂದಿ ಭಾಗವಹಿಸಿದ್ದರು.

ನೂತನ ಅಧ್ಯಕ್ಷ ಪಿ.ಶೇಖರಪ್ಪ, ಉಪಾಧ್ಯಕ್ಷ ಬಿ.ಗುರುಮಲ್ಲಪ್ಪ ಅವರನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಸನ್ಮಾನಿಸಿದರು. ಈ ವೇಳೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು, ಎಪಿಎಂಸಿ ಮಾಜಿ ಅಧ್ಯಕ್ಷ ಶಿವಸ್ವಾಮಿ, ಮುಖಂಡ ರಾಜಣ್ಣ, ವೀರಭದ್ರ, ನಾಗಯ್ಯ, ಸ್ವಾಮಿ, ಕುಮಾರ್, ಪುರುಷೋತ್ತಮ್, ಬೆಳ್ಳಿ ಮಾದಪ್ಪ, ಮಹೇಶ್, ರಾಜೇಶ್, ಎಸ್.ಮಾದಪ್ಪ, ಸಿದ್ದಪ್ಪ ಇತರರಿದ್ದರು.



ಚಾಮರಾಜನಗರದ ವರ್ತಕರ ಭವನದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಹಮ್ಮಿಕೊಂಡಿದ್ದ ಸಂಘದ ಬೆಳ್ಳಿ ಮಹೋತ್ಸವ, ಪತ್ರಿಕಾ ದಿನಾಚರಣೆ, ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಂಘದ ಮಾಜಿ ಅಧ್ಯಕ್ಷರಾದ ಅಬ್ರಾಹಂ ಡಿಸಿಲ್ವಾ, ಎಸ್.ಎಂ.ನಂದೀಶ್ ಮತ್ತು ಎಂ.ಈ.ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು.

ಕೆಲಸೂರು ಗ್ರಾಪಂ ನೂತನ ಅಧ್ಯಕ್ಷೆ, ಉಪಾಧ್ಯಕ್ಷೆಗೆ ಸನ್ಮಾನ



ಚಾಮರಾಜನಗರ, ಜು.29– ಗುಂಡ್ಲುಪೇಟೆ ತಾಲೂಕಿನ ಕೆಲಸೂರು ಗ್ರಾಪಂ ನೂತನ ಅಧ್ಯಕ್ಷೆ ಚನ್ನಂಜಮ್ಮ, ಉಪಾಧ್ಯಕ್ಷೆ ಲಕ್ಷ್ಮಮ್ಮ ಹಾಗೂ ಸದಸ್ಯ ಶಿವಮಲ್ಲಪ್ಪ ಅವರನ್ನು ಮಲ್ಲಮ್ಮನಹುಂಡಿ ಗ್ರಾಮಸ್ಥರು ಸನ್ಮಾನಿಸಿದರು.

ಡಾ.ಬಾಬು ಜಗಜೀವನ್‌ರಾಂ ಕ್ಷೇಮಾಭಿವೃದ್ಧಿ ಟ್ರಸ್ಟ್ ಗೌರವಾಧ್ಯಕ್ಷ ಸಿ.ಚನ್ನಬಸವಯ್ಯ ಮಾತನಾಡಿ, ನೂತನ ಅಧ್ಯಕ್ಷರು, ಉಪಾಧ್ಯಕ್ಷರು ಸರ್ವ ಸದಸ್ಯರ ಸಹಕಾರದೊಂದಿಗೆ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಬೇಕು ಎಂದರು.

ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಚಿಕ್ಕಮಾದಶೆಟ್ಟಿ, ಸಿದ್ದಯ್ಯ, ಪಿ.ಗುರುಸ್ವಾಮಿ, ಸಿದ್ದರಾಜು, ಆರ್.ಸಿದ್ದರಾಜು, ಎಂ.ಆರ್. ಸಿದ್ದರಾಜು, ಸಿದ್ದಯ್ಯ, ಶಿವಯ್ಯ, ಮಹದೇವ ಪ್ರಸಾದ್, ಸುಧೀರ್, ಪುಟ್ಟಯ್ಯ, ಬಿ.ಸಿದ್ದರಾಜು, ಆರ್.ಸ್ವಾಮಿ, ಗ್ರಾಮದ ಮುಖಂಡರಾದ ಮಾದಪ್ಪ, ಮಾಜಿ ಉಪಾಧ್ಯಕ್ಷ ಇಂದುಧರ, ಸುದೀಪ್, ರಾಚಯ್ಯ, ಜವರಯ್ಯ, ಪಿಡಿಓ ಸೇರಿದಂತೆ ಇನ್ನಿತರರಿದ್ದರು.

ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಚಾಮರಾಜನಗರ, ಜು.29– ಮೀನುಗಾರಿಕೆ ಇಲಾಖೆಯಿಂದ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ವಿವಿಧ ಉಪಯೋಜನೆ ಹಾಗೂ ಮೀನುಗಾರಿಕೆ ಇಲಾಖೆ ಯೋಜನೆಗಳಡಿ ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

2023–24ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆ ಕೇಂದ್ರ ವಲಯ, ರಾಜ್ಯವಲಯ, ಜಿಲ್ಲಾವಲಯ ವಿವಿಧ ಯೋಜನೆಗಳಲ್ಲಿ ಮೀನುಗಾರಿಕೆ ಸಲಕರಣೆ ಕಿಟ್ಟುಗಳ ಖರೀದಿ, ಮೀನುಮರಿ ಖರೀದಿ ಹಾಗೂ ಇತ್ಯಾದಿ ಯೋಜನೆಗಳಿಗೆ ಸಹಾಯಧನ ಪಡೆಯಲು ಆಸಕ್ತ ಒಳನಾಡು ಮೀನುಗಾರರು ಸೂಕ್ತ ದಾಖಲೆಗಳೊಂದಿಗೆ ಸಂಬಂಧಪಟ್ಟ ತಾಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಿ ಆ.16ರೊಳಗೆ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗೆ ಚಾಮರಾಜನಗರ ಮೀನುಗಾರಿಕೆ ಉಪ ನಿರ್ದೇಶಕರು ಮೊ.9535373793, ಮೀನುಗಾರಿಕೆ ಸಹಾಯಕ ನಿರ್ದೇಶಕರು ಮೊ. 8123747334, ಗುಂಡ್ಲುಪೇಟೆ ಮೀನುಗಾರಿಕೆ ಸಹಾಯಕ ನಿರ್ದೇಶಕರು ಮೊ. 9742441898, ಕೊಳ್ಳೇಗಾಲ ಮೀನುಗಾರಿಕೆ ಸಹಾಯಕ ನಿರ್ದೇಶಕರು ಮೊ.8123747334, ಯಳಂದೂರು ಮೀನುಗಾರಿಕೆ ಸಹಾಯಕ ನಿರ್ದೇಶಕರು ಮೊ.9742441898 ಸಂಪರ್ಕಿಸುವಂತೆ ಮೀನುಗಾರಿಕೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಭಾನುವಾರ 30 ಜುಲೈ 2023

ಅಪರಾಧ ಕೃತ್ಯ ಹತ್ತಿಕ್ಕಲು ಪೊಲೀಸರ ವಿಶೇಷ ಗಸ್ತು



ಮೈಸೂರು, ಜು.29(ಎಂಕೆ)– ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಲು ಮುಂದಾಗಿರುವ ಮೈಸೂರು ಜಿಲ್ಲಾ ಪೊಲೀಸರು, ಬೆಳಗ್ಗೆ ಮತ್ತು ಸಂಜೆ ಆಯಾ ಠಾಣೆ ವ್ಯಾಪ್ತಿಯ ಪ್ರಮುಖ ಬೀದಿ, ಶಾಲಾ–ಕಾಲೇಜುಗಳ ಆವರಣ, ಆಸ್ಪತ್ರೆ, ಬಸ್ ನಿಲ್ದಾಣ ಸೇರಿದಂತೆ ಪ್ರಮುಖ ಸ್ಥಳಗಳಿಗೆ ಕಾಲ್ನಡಿಗೆಯಲ್ಲಿ ಭೇಟಿ ನೀಡಿ, ಸಾರ್ವಜನಿಕರ ಕುಂದು–ಕೊರತೆ ಆಲಿಸಲು ಮುಂದಾಗಿದ್ದಾರೆ. ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳ ಸೂಚನೆ ಮೇರೆಗೆ ಮೈಸೂರು ಜಿಲ್ಲಾ ಪೊಲೀಸ್ ಅಧಿಕಾರಿ, ಸಿಬ್ಬಂದಿ ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಲು ಹಾಗೂ ಸಾರ್ವಜನಿಕರಲ್ಲಿ ಸುರಕ್ಷಾ ಭಾವನೆ ಉಂಟು ಮಾಡಲು ನಿಟ್ಟಿನಲ್ಲಿ ಕಾಲ್ನಡಿಗೆ ಗಸ್ತು, ಗ್ರಾಮಗಳಿಗೆ ಭೇಟಿ ನೀಡಿ ಕುಂದು–ಕೊರತೆಗಳನ್ನು ಆಲಿಸಿ, ಸೂಕ್ತ ಕ್ರಮಕೈಗೊಳ್ಳಲು ಮುಂದಾಗಿದ್ದಾರೆ.

ಒಂದನೇ ಪುಟದಿಂದ

ಹೆಚ್ಚುವರಿ ಕಾಮಗಾರಿ

ಹಾಗೂ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಎಲ್ಲಾ ರೀತಿಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ ಎಂದರು.

ಎಕ್ಸ್‌ಪ್ರೆಸ್ ವೇನಲ್ಲಿ ಆರಂಭದ ದಿನಗಳಲ್ಲಿ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿತ್ತು. ಆದರೆ ಈಗ ಅಪಘಾತಗಳ ಸಂಖ್ಯೆ ಕಡಿಮೆಯಾಗಿದೆ. ಜೂನ್‌ನಲ್ಲಿ 20 ಅಪಘಾತಗಳು ಸಂಭವಿಸಿದ್ದರೆ, ಜುಲೈನಲ್ಲಿ ಕೇವಲ 5 ಅಪಘಾತಗಳು ಮಾತ್ರ ಸಂಭವಿಸಿವೆ ಎಂದು ಅವರು ಅಪಘಾತಗಳನ್ನು ತಡೆಯುವ ನಿಟ್ಟಿನಲ್ಲಿ ಎಕ್ಸ್‌ಪ್ರೆಸ್ ವೇನಲ್ಲಿ ಸ್ಪೀಡ್ ಡಿಟೆಕ್ಟರ್‌ಗಳನ್ನು ಅಳವಡಿಸಲಾಗಿದೆ. ಈ ಡಿಟೆಕ್ಟರ್‌ಗಳು ವಾಹನಗಳ ಸ್ಪೀಡ್ ಮಾತ್ರವಲ್ಲದೇ ವಾಹನಗಳ ಚಲನೆಗಳ ಬಗ್ಗೆಯೂ ಕೂಡ ಕಣ್ಣಿಟ್ಟಿರುತ್ತದೆ ಎಂದರು. ಈ ರಸ್ತೆಯಲ್ಲಿ 10 ಕಿಮೀಗೆ ಒಂದರಂತೆ ಸ್ಪೀಡ್ ಡಿಟೆಕ್ಟರ್ ಅಳವಡಿಸಿದರೆ, ಮತ್ತಷ್ಟು ಅಪಘಾತಗಳನ್ನು ತಡೆಯಬಹುದು ಎಂದು ಅಭಿಪ್ರಾಯಪಟ್ಟರು.

ಟೋಲ್ ಸಂಗ್ರಹದ ಬಗ್ಗೆ ಮಾತನಾಡಿದ ಅವರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಟೋಲ್ ಸಂಗ್ರಹಿಸುತ್ತದೆಯೋ ಹೊರತು ರಾಜ್ಯ ಸರ್ಕಾರ ಸಂಗ್ರಹಿಸುವುದಿಲ್ಲ. ಎಕ್ಸ್‌ಪ್ರೆಸ್ ವೇ ಕಾಮಗಾರಿ ಸಂಪೂರ್ಣವಾಗಿ ಮುಗಿಯದಿದ್ದರೂ, ಟೋಲ್ ಸಂಗ್ರಹಿಸುವ ಬಗ್ಗೆ ಹಾಗೂ ಎಕ್ಸ್‌ಪ್ರೆಸ್ ವೇನ 158.81 ಕೋಟಿ ಮತ್ತು ಸರ್ವಿಸ್ ರಸ್ತೆಯ 151 ಕೋಟಿ ವೆಚ್ಚದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ತಾವು ದೆಹಲಿಗೆ ತೆರಳಿದಾಗ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.

ಇದಕ್ಕೂ ಮುನ್ನ ಇಂದು ಮಧ್ಯಾಹ್ನ 12.15ಕ್ಕೆ ಮಂಡ್ಯ ಹೊರವಲಯದ ಉಮ್ಮಡಹಳ್ಳಿ ಗೇಟ್‌ಗೆ ಆಗಮಿಸಿದ ಮುಖ್ಯಮಂತ್ರಿಗಳು ಅಲ್ಲಿ ಅಳವಡಿಸಲಾಗಿದ್ದ ಸ್ಪೀಡ್ ಡಿಟೆಕ್ಟರ್‌ಗೆ ಚಾಲನೆ ನೀಡಿ ಡಿಟೆಕ್ಟರ್ ಕಾರ್ಯ ನಿರ್ವಹಣೆಯನ್ನು ವೀಕ್ಷಿಸಿದರು. ನಂತರ ಅಲ್ಲಿಂದ ಹೊರಟು ಶ್ರೀರಂಗಪಟ್ಟಣ ತಾಲೂಕು ಗಣಂಗೂರು ಟೋಲ್ ಪ್ಲಾಜಾ ಬಳಿ ಇರುವ ಹೆದ್ದಾರಿ ಪ್ರಾಧಿಕಾರದ ಕಂಟ್ರೋಲ್ ರೂಂಗೆ ಆಗಮಿಸಿದ ಮುಖ್ಯಮಂತ್ರಿಗಳು ಎಕ್ಸ್‌ಪ್ರೆಸ್ ವೇಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಅಧಿಕಾರಿಗಳಿಂದ ಪಡೆದರು. ಹೆದ್ದಾರಿ ಪ್ರಾಧಿಕಾರದ ಪ್ರಾಜೆಕ್ಟ್ ಮ್ಯಾನೇಜರ್ ಅರ್ಚನಾ ಅವರು ಮುಖ್ಯಮಂತ್ರಿಗಳಿಗೆ ಎಕ್ಸ್‌ಪ್ರೆಸ್ ವೇನಲ್ಲಿ ವಾಹನ ಸವಾರರ ಸುರಕ್ಷತೆಗಾಗಿ ಕೈಗೊಂಡಿರುವ ಕ್ರಮಗಳು, ಈ ರಸ್ತೆಯಲ್ಲಿ ನಡೆದಿರುವ ಅಪಘಾತಗಳ ವಿವರ ನೀಡಿದ್ದಲ್ಲದೇ ಸ್ಪೀಡ್ ಡಿಟೆಕ್ಟರ್ ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದರ ಬಗ್ಗೆ ವಿವರಿಸಿದರು. ಈ ವೇಳೆ ಸ್ಪೀಡ್ ಡಿಟೆಕ್ಟರ್ ವಾಹನಗಳ ವೇಗವನ್ನು ಹೇಗೆ ಗುರುತಿಸಿ ಸರ್ವರ್‌ಗೆ ಕಳುಹಿಸುತ್ತದೆ ಎಂಬುದನ್ನು ಮುಖ್ಯಮಂತ್ರಿಗಳು ವೀಕ್ಷಿಸಿ ಅರ್ಚನಾ ಅವರಿಂದ ಕೆಲವು ವಿವರಣೆಗಳನ್ನು ಪಡೆದರು. ನಂತರ ಇಲ್ಲಿನ ಟೋಲ್ ಪ್ಲಾಜಾ ಬಳಿ ಮಾವಿನ ಗಿಡ ನೆಟ್ಟರು. ಈ ವೇಳೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ಗಣಿಗ ರವಿಕುಮಾರ್, ರಮೇಶ್‌ಬಾಬು ಬಂಡಿಸಿದ್ದೇಗೌಡ, ಪಿ.ಎಂ.ನರೇಂದ್ರಸ್ವಾಮಿ, ಜಿಲ್ಲಾಧಿಕಾರಿ ಡಾ.ಕುಮಾರ್, ಎಡಿಜಿಪಿ ಅಲೋಕ್ ಕುಮಾರ್, ಮಂಡ್ಯ ಜಿಲ್ಲಾ ಎಸ್ಪಿ ಎನ್.ಯತೀಶ್ ಹಾಗೂ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಉಪಸ್ಥಿತರಿದ್ದು, ಮುಖ್ಯಮಂತ್ರಿಗಳಿಗೆ ಕೆಲ ವಿಷಯಗಳಲ್ಲಿ ವಿವರಣೆ ನೀಡಿದರು.

ಉದಯೋನ್ಮುಖ ನಟ ಸಾವು

ಗ್ರಾಮಾಂತರ ಠಾಣೆ ಪೊಲೀಸರಿಗೆ ಸಾರ್ವಜನಿಕರಿಂದ ಮಾಹಿತಿ ಬಂದಿತ್ತು. ತಕ್ಷಣವೇ ಪೊಲೀಸರು ಸ್ಥಳಕ್ಕೆ ತೆರಳಿ ನೋಡಿದಾಗ ಬೈಕ್ ಮುಂಭಾಗ ಸಂಪೂರ್ಣವಾಗಿ ಜಖಂಗೊಂಡಿದ್ದು, ಕಲಾವಿದ ಲೋಕೇಶ್ ಕೈ, ಕಾಲು ಮುರಿದು ಮುಖ ಜಜ್ಜಿ ಹೋಗಿ ಸಾವನ್ನಪ್ಪಿರುವುದು ಕಂಡು ಬಂದಿದೆ. ಘಟನಾ ಸ್ಥಳದಲ್ಲಿ ವಾಹನವೊಂದರ ನಂಬರ್ ಪ್ಲೇಟ್ ದೊರೆತಿದ್ದು, ಯಾವುದೋ ಕಾರಿನ ನಂಬರ್ ಇರಬಹುದು ಎಂದು ಶಂಕಿಸಿರುವ ಪೊಲೀಸರು ಸದರಿ ವಾಹನ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ. ನಿಂತಿದ್ದ ಕಾರಿಗೆ ವೇಗವಾಗಿ ಬಂದ ಲೋಕೇಶ್ ಅವರ ಬೈಕ್ ಡಿಕ್ಕಿ ಹೊಡೆದಿರಬಹುದು ಎಂದು ಪೊಲೀಸರು ಅಭಿಪ್ರಾಯಪಟ್ಟಿದ್ದಾರೆ. ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆ ಪೊಲೀಸರು ಸ್ವಯಂ ದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಕಲಾವಿದನಾಗಬೇಕೆಂಬ ಮಹಾತ್ವಾಕಾಂಕ್ಷೆ ಇಟ್ಟುಕೊಂಡಿದ್ದ ಲೋಕೇಶ್, ರೀಲ್ಸ್ ಮೂಲಕ ಗಮನ ಸೆಳೆದಿದ್ದರು. 'ಅಮೂಲ್ಯರತ್ನ' ಎಂಬ ಕಿರುಚಿತ್ರ ಹಾಗೂ 'ಫ್ಯಾಮಿಲಿ ಪ್ಯಾಕ್' ಎಂಬ ಚಲನಚಿತ್ರದಲ್ಲಿ ನಟಿಸಿರುವ ಇವರು ಇತ್ತೀಚೆಗೆ ಬೈಕ್ ಖರೀದಿಸಿದ್ದ ಸಂತಸವನ್ನು ರೀಲ್ಸ್ ಮೂಲಕ ವ್ಯಕ್ತಪಡಿಸಿದ್ದರು. ಇವರು ಪತ್ನಿ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

ಮಹಿಳೆಯರು ಜಲಸಮಾಧಿ

ಈ ದುರ್ಘಟನೆಯಲ್ಲಿ ನಾಲ್ವರು ಮಹಿಳೆಯರು ಸಾವನ್ನಪ್ಪಿದ್ದು, ಕಾರು ಚಾಲನೆ ಮಾಡುತ್ತಿದ್ದ ಮನೋಜ್ ಬದುಕುಳಿದಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಅಪಘಾತದಿಂದ ಪಾರಾಗಿರುವ ಮನೋಜ್‌ನನ್ನು ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ತಿ.ನರಸೀಪುರ ಮತ್ತು ಅರಕೆರೆ ಠಾಣೆ ಪೊಲೀಸರು ನುರಿತ ಈಜುಗಾರರ ಸಹಾಯ ದಿಂದ ಮೃತದೇಹಗಳನ್ನು ಹೊರ ತೆಗೆದು ತಿ.ನರಸೀಪುರದ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿದರು. ಸಣ್ಣ ರಸ್ತೆಯಲ್ಲಿ ಕತ್ತಲಲ್ಲಿ ಕಾರನ್ನು ವೇಗವಾಗಿ ಚಾಲಿಸುತ್ತಿದ್ದ ಮನೋಜ್ ಸರಿಯಾಗಿ ರಸ್ತೆ ಕಾಣದೆ ಎಡಗಡೆಗೆ ತಿರುಗಿಸಿದ್ದೇ ದುರಂತಕ್ಕೆ ಕಾರಣವೆಂದು ಒಂದು ಮೂಲದಿಂದ ತಿಳಿದು ಬಂದರೆ, ಮತ್ತೊಂದು ಮಾಹಿತಿ ಪ್ರಕಾರ ಎದುರುಗಡೆಯಿಂದ ಬರುತ್ತಿದ್ದ ವಾಹನದ ಹೆಡ್‌ಲೈಟ್‌ನಿಂದಾಗಿ ಸರಿಯಾಗಿ ರಸ್ತೆ ಕಾಣಿಸದೇ ಕಾರನ್ನು ಎಡಕ್ಕೆ ತಿರುಗಿಸಿದಾಗ ಈ ಅಪಘಾತ ಸಂಭವಿಸಿದೆ ಎನ್ನಲಾಗಿದೆ. ಈ ಸಂಬಂಧ ಅರಕೆರೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅದ್ಧೂರಿ ಊಟ ಹಾಕಿದರಾಯಿತು...!

ಈಗ ಕೋವಿಡ್ ಮುಕ್ತವಾಗಿದ್ದು, ಮಳೆ–ಬೆಳೆಯಾಗಿ ಸುಭಿಕ್ಷೆಯ ವಾತಾವರಣವಿದೆ. ಈ ಕಾರಣದಿಂದ ಮೈಸೂರಿನ ಕಲೆ, ಸಂಸ್ಕೃತಿ ಹಾಗೂ ಮಹಾರಾಜರ ಪರಂಪರೆಯನ್ನು ಉಳಿಸಲು ಅದ್ಧೂರಿ ದಸರಾ ಮಾಡಲಾಗುವುದು ಎಂದು ತಿಳಿಸಿದರು.

ದಸರಾ ಆಚರಣೆಗೆ ವಿಶೇಷ ಅನುದಾನ ಕೇಳುವ ಬಗ್ಗೆ ಇನ್ನು ಚರ್ಚೆ ನಡೆದಿಲ್ಲ. ಈಗಾಗಲೇ ಚಾಮುಂಡಿಬೆಟ್ಟದ ಅಭಿವೃದ್ಧಿ ಪ್ರಾಧಿಕಾರ ರಚನೆಯನ್ನು ಘೋಷಣೆ ಮಾಡಲಾಗಿದೆ. ಆದರೆ ದಸರಾ ಪ್ರಾಧಿಕಾರ ರಚನೆ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿಲ್ಲ. ದಸರಾ ಪ್ರಾಧಿಕಾರಕ್ಕೆ ಹಲವು ವರ್ಷಗಳಿಂದ ಬೇಡಿಕೆಯಂತೂ ಇದೆ. ಆದರೂ ದಸರಾ ಸುಗಮವಾಗಿ ನಡೆಯುತ್ತಿದೆಯಲ್ಲ. ಅದ್ಧೂರಿ ದಸರಾ ಸೇರಿದಂತೆ ಹಲವು ವಿಚಾರಗಳನ್ನು ದಸರಾ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ತೀರ್ಮಾನ ಮಾಡಲಾಗುವುದು ಎಂದು ಡಾ.ಮಹದೇವಪ್ಪ ಹೇಳಿದರು.

ಶಿಸ್ತು ಪಾಲನೆ ಮಾಡದಿದ್ದರೆ ಎದ್ದೋಗಿ: ಮಾಧ್ಯಮಗೋಷ್ಠಿಯಲ್ಲಿ ಡಾ.ಮಹದೇವಪ್ಪ ಮಾತನಾಡುವಾಗ ಕಾಂಗ್ರೆಸ್ ಕಾರ್ಯಕರ್ತರು ಗದ್ದಲ ಉಂಟು ಮಾಡಿದರು. ಇದರಿಂದ ಸಿಟ್ಟಾದ ಡಾ.ಮಹದೇವಪ್ಪ, ಎಲ್ಲರೂ ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿ. ಯಾವುದೇ ಕಾರಣಕ್ಕೂ ಶಬ್ಧ ಕೇಳಿಸಕೂಡದು. ಶಿಸ್ತು ಪಾಲನೆ ಮಾಡದಿದ್ದರೆ ಇಲ್ಲಿಂದ ಎದ್ದು ಹೋಗಿ ಎಂದು ಕಾಂಗ್ರೆಸ್ ಕಾರ್ಯಕರ್ತರಿಗೆ ತಾಕೀತು ಮಾಡಿದರು.

ಮೈಸೂರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ

● ಸ್ವಾಗತಿಸಲು ಮುಗಿಬಿದ್ದ ಅಭಿಮಾನಿಗಳು ● ಟೋಲ್‌ಗೇಟ್ ಬಳಿ ಅದ್ದೂರಿ ಸ್ವಾಗತ ● ಝೀರೋ ಟ್ರಾಫಿಕ್ ಇಲ್ಲದೇ ಸಿಎಂ ಪ್ರಯಾಣ



ಮೈಸೂರು,ಜು.29(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಶನಿವಾರ ಮೈಸೂರಿಗೆ ಆಗಮಿಸಿದ್ದು, ಮೈಸೂರು–ಬೆಂಗಳೂರು ಮುಖ್ಯರಸ್ತೆಯ ಟೋಲ್‌ಗೇಟ್ ಬಳಿ ಮುಖ್ಯಮಂತ್ರಿ ಸ್ವಾಗತಕ್ಕೆ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಮುಗಿಬಿದ್ದರು.



ಸಿಎಂ ಸಿದ್ದರಾಮಯ್ಯ ಅವರ ಪುತ್ರ ರಾಕೇಶ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬೆಂಗಳೂರಿಂದ ರಸ್ತೆ ಮಾರ್ಗದಲ್ಲಿ ಮೈಸೂರಿಗೆ ಆಗಮಿಸಿದ ಸಿದ್ದರಾಮಯ್ಯ ಅವರಿಗೆ ಟೋಲ್‌ಗೇಟ್ ಬಳಿ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಅದ್ಧೂರಿ ಸ್ವಾಗತ ಕೋರಿದರು. ಟೋಲ್‌ಗೇಟ್ ಬಳಿ ರಸ್ತೆ ಪಕ್ಕ ನಿಂತಿದ್ದ ನೂರಾರು ಕಾರ್ಯಕರ್ತರು ಸಿಎಂ ಸಿದ್ದರಾಮಯ್ಯ ಅವರ ಬೆಂಗಾವಲಿನ ವಾಹನ ಕಾಣುತ್ತಿದ್ದಂತೆಯೇ ಸ್ವಾಗತಿಸಲು ಮುಗಿಬಿದ್ದರು. ಸಿದ್ದರಾಮಯ್ಯ ಅವರ ಕಾರು ನಿಲ್ಲಿಸುವ ಮೊದಲೇ ಕಾರ್ಯಕರ್ತರು ರಸ್ತೆಗಿಳಿದರು. ಇದರಿಂದ ಪೊಲೀಸರು ವಿಚಲಿತರಾದರು.

ಅಭಿಮಾನಿಗಳು ಹಾಗೂ ಕಾರ್ಯಕರ್ತರನ್ನು ಕಂಡ ಸಿಎಂ ಸಿದ್ದರಾಮಯ್ಯ ಕಾರು ನಿಲ್ಲಿಸುವಂತೆ ಚಾಲಕರಿಗೆ ಸೂಚನೆ ನೀಡಿದರು. ಕಾರ್ಯಕರ್ತರು ಸಿದ್ದರಾಮಯ್ಯ ಅವರ ಕೈ ಕುಲುಕಲು ಮುಗಿಬಿದ್ದರು. ಕೆಲವರು ಶಾಲು ಹಾಕಿ ಸ್ವಾಗತಿಸಿದರು. ಸಿಎಂ ಕಾರು ಬಳಿ ಮುತ್ತಿಕೊಂಡಿದ್ದ ಅಭಿಮಾನಿಗಳನ್ನು ಹಿಂದೆ ಸರಿಸಲು ಪೊಲೀಸರು ಪರದಾಡುವಂತಾಯಿತು. ಸುಮಾರು 4–5 ನಿಮಿಷ ಕಾರ್ಯಕರ್ತರನ್ನು ಕಂಡ ಸಿಎಂ ಸಿದ್ದರಾಮಯ್ಯ ಕೈ ಬೀಸುತ್ತಾ ಪ್ರಯಾಣ ಮುಂದುವರೆಸಿದರು.

ಈ ಸಂದರ್ಭದಲ್ಲಿ ಶಾಸಕ ಕೆ.ಹರೀಶ್‌ಗೌಡ, ಜಿ.ಪಂ. ಮಾಜಿ ಅಧ್ಯಕ್ಷ ಕೆ.ಮರೀಗೌಡ, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಮುಖಂಡರಾದ ನಂದೀಶ್ ಪ್ರೀತಮ್, ಅಶೋಕ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಪುತ್ರನ ಪುಣ್ಯಸ್ಮರಣೆಯಲ್ಲಿ ಭಾಗಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಮೈಸೂರು ತಾಲೂಕಿನ ಟಿ.ಕಾಟೂರು ಗ್ರಾಮದ ತೋಟದ ಮನೆಯಲ್ಲಿ ಕುಟುಂಬದ ಸದಸ್ಯರೊಂದಿಗೆ ಪುತ್ರ ರಾಕೇಶ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಭಾಗಿಯಾದರು. 2016ರಲ್ಲಿ ಸಿದ್ದರಾಮಯ್ಯ ಅವರ ಹಿರಿಯ ಪುತ್ರ ರಾಕೇಶ್ ಅಕಾಲಿಕ ನಿಧನರಾಗಿದ್ದರು. ರಾಕೇಶ್ ಅವರ ಇಷ್ಟದ ಟಿ.ಕಾಟೂರಿನ ತೋಟದಲ್ಲಿ ಅಂತ್ಯಸಂಸ್ಕಾರ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಪ್ರತಿವರ್ಷವೂ ಜು.29ರಂದು ತೋಟದ ಮನೆಯಲ್ಲಿ ರಾಕೇಶ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಸಲಾಗುತ್ತದೆ.



ಸಿಎಂ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಮ್ಮ, ಎರಡನೇ ಪುತ್ರ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಸೊಸೆ ಸ್ಮಿತಾ ರಾಕೇಶ್, ಮೊಮ್ಮಗ ಧವನ್ ರಾಕೇಶ್, ಮೊಮ್ಮಗಳು ತನ್ಮಯಿ ರಾಕೇಶ್, ಸಹೋದರ ಸಿದ್ದೇಗೌಡ ಹಾಗೂ ಕುಟುಂಬದ ಸದಸ್ಯರು ಪಾಲ್ಗೊಂಡು ರಾಕೇಶ್ ಸಮಾಧಿಗೆ ವಿಧಿವಿಧಾನದಂತೆ ಪೂಜೆ ಸಲ್ಲಿಸಿದರು. ಈ ವೇಳೆ ಸಿದ್ದರಾಮಯ್ಯ ಅವರು ಪುತ್ರ ರಾಕೇಶ್ ನೆನೆದು ಭಾವುಕರಾದರೆ, ತಾಯಿ ಪಾರ್ವತಮ್ಮ, ಪತ್ನಿ ಸ್ಮಿತಾ ಹಾಗೂ ಮಕ್ಕಳು ಕಂಬನಿ ಮಿಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ ಎಂ.ರಾಮಯ್ಯ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕೆ.ಆರ್.ನಗರ ಶಾಸಕ ಡಿ. ರವಿಶಂಕರ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಜಿ.ಪಂ ಮಾಜಿ ಅಧ್ಯಕ್ಷ ಕೆ. ಮರೀಗೌಡ, ಮುಡಾ ಮಾಜಿ ಅಧ್ಯಕ್ಷ ಸಿ. ಬಸವೇಗೌಡ, ಡಾ. ಶುಶ್ರುತ್, ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ಸುಧಾ ಮಹದೇವಯ್ಯ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು, ಸಿಂಡಿಕೇಟ್ ಮಾಜಿ ಸದಸ್ಯ ಮಾರ್ಬಳ್ಳಿ ಕುಮಾರ್, ಉದ್ಬೂರು ಕೃಷ್ಣ, ನಾಡನಹಳ್ಳಿ ರವಿ, ಸಿದ್ದರಾಮನಹುಂಡಿ ಬಸವರಾಜು, ಸಿ.ಎಂ.ಸಿದ್ದರಾಮೇಗೌಡ, ಕೆಂಚಪ್ಪ, ಜೆ.ಜೆ.ಆನಂದ್, ಬಿ.ಗುರುಸ್ವಾಮಿ, ಹರೀಶ್ ಮೊಗಣ್ಣ, ಛಾಯಾ, ಕಮಲ, ಗಡ್ಡಬಸಪ್ಪ ಹಾಗೂ ಕುಟುಂಬಸ್ಥರು, ಅಭಿಮಾನಿಗಳು ಹಾಜರಿದ್ದರು.

ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಜಿ.ಪಂ. ಸಿಇಒ ಕೆ.ಎಂ.ಗಾಯತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ನಗರ ಪೊಲೀಸ್ ಆಯುಕ್ತ ಹಾಗೂ ಅಧಿಕಾರಿಗಳೊಂದಿಗೆ ಮೈಸೂರಿನ ಪ್ರಗತಿ ಬಗ್ಗೆ ಮಾಹಿತಿ ಪಡೆದರು.

ಪುಣ್ಯಸ್ಮರಣೆ ಕಾರ್ಯಕ್ರಮದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ರಸ್ತೆ ಮಾರ್ಗವಾಗಿ ಬೆಂಗಳೂರಿಗೆ ತೆರಳಿದರು. ಬೆಂಗಳೂರಿಂದ ಬರುವಾಗ ಹಾಗೂ ವಾಪಸ್ ಹೋಗುವಾಗ ಝೀರೋ ಟ್ರಾಫಿಕ್ ವ್ಯವಸ್ಥೆ ಇಲ್ಲದೇ ಪ್ರಯಾಣಿಸಿದ್ದು ವಿಶೇಷವಾಗಿತ್ತು.

ಹುಲಿ ದಿನ ಅಂಗವಾಗಿ ಹುಲಿ ಸಂರಕ್ಷಣೆ ಮಾಹಿತಿ



ಮೈಸೂರು,ಜು.29(ಎಂಟಿವೈ)– ವಿಶ್ವ ಹುಲಿ ದಿನದ ಅಂಗವಾಗಿ ಹೆಚ್.ಡಿ. ಕೋಟೆ ತಾಲೂಕಿನ ಎನ್.ಬೆಳತ್ತೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಭಾಗಿಯಾಗಿ ಹುಲಿ ಸಂರಕ್ಷಣೆಯ ಮಹತ್ವ ಅರಿತರು.

ವೈಲ್ಡ್‌ಲೈಫ್ ಕನ್ಸರ್ವೇಷನ್ ಫೌಂಡೇಷನ್ (ಡಬ್ಲ್ಯೂಸಿಎಫ್) ಹಾಗೂ ಟಿವಿಎಸ್ ಮೋಟಾರ್ ಕಂಪನಿ ಮತ್ತು ಸುಂದರಂ–ಕ್ಲೇಟನ್ ಸಾಮಾಜಿಕ ಅಂಗಸಂಸ್ಥೆಯಾದ ಶ್ರೀನಿವಾಸನ್ ಸರ್ವೀಸಸ್ ಟ್ರಸ್ಟ್ (ಎಸ್‌ಎಸ್‌ಟಿ) ಸಹಯೋಗದಲ್ಲಿ ಆಯೋಜಿಸಿದ್ದ ಹುಲಿ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳು ಹುಲಿ ಮುಖವಾಡ ಧರಿಸಿ, ಹುಲಿಗಳ ಜೀವನ ಕ್ರಮ, ಜೀವತಾವಧಿ, ಹುಲಿಗಳ ಸಂರಕ್ಷಣೆಯಿಂದ ಆಗುವ ಉಪಯೋಗಗಳ ಬಗ್ಗೆ ಮಾಹಿತಿ ಪಡೆದರು.

ಡಬ್ಲ್ಯೂಸಿಎಫ್ ಸಂಸ್ಥೆಯ ಸಂಸ್ಥಾಪಕ ರಾಜ್‌ಕುಮಾರ್ ದೇವರಾಜೇ ಅರಸ್ ಮಾತನಾಡಿ, ಹುಲಿಗಳ ಪ್ರಾಮುಖ್ಯತೆ ಬಗ್ಗೆ ಎಲ್ಲರಲ್ಲೂ ಮನವರಿಕೆ ಮಾಡಿಕೊಡಬೇಕಾಗಿದೆ. ಅರಣ್ಯ ಪ್ರದೇಶದಲ್ಲಿ ಹುಲಿಗಳ ಸಂಖ್ಯೆ ಹೆಚ್ಚಾದರೆ, ಅಲ್ಲಿನ ಕಾಡು ಸಮೃದ್ಧಿಯಾಗುತ್ತದೆ. ಇದರಿಂದ ಪರಿಸರ ಸಮತೋಲನ ಕಾಪಾಡಿಕೊಳ್ಳಲು ಹುಲಿಗಳು ಮಹತ್ವದ ಪಾತ್ರವಹಿಸುತ್ತವೆ ಎಂದರು.

ಒಂದು ಹುಲಿಯನ್ನು ಸಂರಕ್ಷಿಸಿದರೆ, ಹತ್ತಾರು ಪ್ರಯೋಜನ ಜನರಿಗೆ ದೊರೆಯುತ್ತದೆ. ಈ ಹಿನ್ನೆಲೆಯಲ್ಲಿ ಕಾಡಂಚಿನ ಗ್ರಾಮಗಳು ಮಾತ್ರವಲ್ಲದೇ, ನಾಡಿನ ಜನರಲ್ಲೂ ಹುಲಿಗಳ ಮಹತ್ವ ತಿಳಿಸಬೇಕಾಗಿದೆ. ಶಾಲಾ ಮಕ್ಕಳಿಗೆ ಪರಿಸರ ಪ್ರಜ್ಞೆ ಮೂಡಿಸಿದರೆ, ಮುಂದಿನ ದಿನಗಳಲ್ಲಿ ಅರಣ್ಯ ಸಂರಕ್ಷಣೆ ಪರಿಣಾಮಕಾರಿಯಾಗಿ ಮಾಡಬಹುದಾಗಿದೆ. ಹುಲಿ ಗಣತಿ ನಡೆಸುವ ಉದ್ದೇಶ, ಗಣತಿ ಮಾಡುವ ವಿಧಾನ ಕುರಿತು ಮಕ್ಕಳಿಗೆ ಮಾಹಿತಿ ನೀಡಿದರು.

ಎಸ್‌ಎಸ್‌ಟಿಯ ಕ್ಷೇತ್ರ ನಿರ್ದೇಶಕ ಡಾ.ಎಸ್.ಸುಬ್ರಹ್ಮಣ್ಯಂ ಮಾತನಾಡಿ, ಹುಲಿಗಳ ನೈಸರ್ಗಿಕ ಆವಾಸ ಸ್ಥಾನಗಳನ್ನು ಸಂರಕ್ಷಿಸಲು ಹುಲಿ ಸಂರಕ್ಷಣೆಗೆ ಸಾರ್ವಜನಿಕರಿಂದ ಬೆಂಬಲ ನೀಡಬೇಕು. ಹುಲಿಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಹೆಚ್ಚಿನ ಸಂಖ್ಯೆಯಲ್ಲಿ ಆಯೋಜಿಸುವ ಅಗತ್ಯವಿದೆ. ಈ ಶಾಲೆಯಲ್ಲಿ 96 ವಿದ್ಯಾರ್ಥಿಗಳು ವಿವಿಧ ವನ್ಯಜೀವಿಗಳ ಮುಖವಾಡ ತಯಾರಿಸಿ ಅದರ ಮೂಲಕ ಹುಲಿ, ಚಿರತೆ ಹಾಗೂ ಇತರೆ ಪ್ರಾಣಿಗಳ ಬಗ್ಗೆ ಆಡಿ–ಕಲಿ ವಿಧಾನದಿಂದ ತಿಳಿದುಕೊಂಡಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಡಬ್ಲ್ಯೂಸಿಎಫ್ ಸಂಸ್ಥೆಯ ಡ್ಯಾನಿಯಲ್ ಸುಕುಮಾರ್, ಜಗದೀಶ್, ರಾಮಚಂದ್ರ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಈ ವೇಳೆ ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕರು, ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರು, ಮೇಲ್ವಿಚಾರಕ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಶ್ವಾನಗಳಿಗೆ ಉಚಿತ ರೇಬೀಸ್ ವಿರೋಧಿ ಲಸಿಕಾ ಶಿಬಿರ



ಮೈಸೂರು,ಜು.29(ಪಿಎಂ)– ಡಾಗ್ಸ್ ಪ್ರೊಟೆಕ್ಷನ್ ಟ್ರಸ್ಟ್ (ಡಿಪಿಟಿ) ಮತ್ತು ಶ್ರೀ ಪೆಟ್ ಕ್ಲಿನಿಕ್ ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಉಚಿತ ರೇಬೀಸ್ ವಿರೋಧಿ ಲಸಿಕಾ ಶಿಬಿರದಲ್ಲಿ 120ಕ್ಕೂ ಹೆಚ್ಚು ಶ್ವಾನಗಳಿಗೆ ಲಸಿಕೆ ನೀಡಲಾಯಿತು.

ಮೈಸೂರಿನ ವಿಜಯನಗರ ಎರಡನೇ ಹಂತದ ರೈತ ಸಂತೆ ಮಾರುಕಟ್ಟೆ ಆವರಣದಲ್ಲಿ ಏರ್ಪಡಿಸಿದ್ದ ಶಿಬಿರಕ್ಕೆ ವಕೀಲರೂ ಆದ ಮೈಸೂರು ಮಹಾನಗರ ಪಾಲಿಕೆ ಸದಸ್ಯ ಎಂ.ಯು.ಸುಬ್ಬಯ್ಯ (ವಾರ್ಡ್ 20) ಚಾಲನೆ ನೀಡಿದರು.

ಶ್ರೀ ಪೆಟ್ ಕ್ಲಿನಿಕ್‌ನ ಪಶುವೈದ್ಯ ಡಾ.ದೀಪಕ್ ಶ್ವಾನಗಳಿಗೆ ಲಸಿಕೆ ನೀಡಿದರು. ಐದಾರು ಬೆಕ್ಕುಗಳಿಗೂ ಶಿಬಿರದಲ್ಲಿ ಲಸಿಕೆ ನೀಡಲಾಯಿತು. ಎರಡು ತಿಂಗಳು ಮೇಲ್ಪಟ್ಟ ಶ್ವಾನಗಳು ಹಾಗೂ ಕೊನೆಯ ಲಸಿಕೆ ಹಾಕಿಸಿ 10 ತಿಂಗಳು ಪೂರೈಸಿದ ಶ್ವಾನಗಳಿಗೆ ಲಸಿಕೆ ನೀಡಲಾಯಿತು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಡಿಪಿಟಿ ಟ್ರಸ್ಟಿ ಆಶಿಕಾ ಅಪ್ಪಯ್ಯ, ಸಾಕು ಮತ್ತು ಬೀದಿನಾಯಿ ಎರಡಕ್ಕೂ ಲಸಿಕೆ ಹಾಕಲು ಅವಕಾಶ ಕಲ್ಪಿಸಲಾಗಿತ್ತು. ಮುಂಗಡವಾಗಿ ನೋಂದಣಿ ಮಾಡಿಕೊಳ್ಳಲು ಹಾಗೂ ಸ್ಥಳದಲ್ಲೇ ನೋಂದಾಯಿಸಲೂ ಅವಕಾಶವಿತ್ತು. ಮುಖ್ಯವಾಗಿ ಶ್ವಾನಗಳನ್ನು ಕೇಂದ್ರೀಕರಿಸಿ ಲಸಿಕೆ ನೀಡಲಾಯಿತಾದರೂ ಬೆಕ್ಕುಗಳಿಗೂ ಲಸಿಕೆ ನೀಡಲಾಗಿದೆ ಎಂದು ಹೇಳಿದರು.

ನಾಯಿಗಳಿಂದಲೇ ದೇಶದಲ್ಲಿ ಗರಿಷ್ಠ ಪ್ರಮಾಣದಲ್ಲಿ ರೇಬೀಸ್ ಹರಡುತ್ತಿರುವ ಹಿನ್ನೆಲೆಯಲ್ಲಿ ಶ್ವಾನಗಳಿಗೆ ಲಸಿಕೆ ನೀಡಲಾಗಿದೆ. ರೇಬೀಸ್ ಮಾರಣಾಂತಿಕ ವೈರಲ್ ಕಾಯಿಲೆ. ಪ್ರಾಣಿ ಮತ್ತು ಮನುಷ್ಯರು ಇಬ್ಬರಿಗೂ ಈ ವೈರಲ್ ಅತ್ಯಂತ ಅಪಾಯಕಾರಿ. ಸೋಂಕಿತ ಪ್ರಾಣಿಗಳ ಕಚ್ಚುವಿಕೆಯಿಂದ ಮನುಷ್ಯರು ಈ ಕಾಯಿಲೆಗೆ ತುತ್ತಾಗಬೇಕಾಗುತ್ತದೆ ಎಂದು ತಿಳಿಸಿದರು.

'ಡಿಪಿಟಿ' ಪ್ರಾಣಿಗಳ ಆರೋಗ್ಯ ಮತ್ತು ಯೋಗಕ್ಷೇಮ ಉತ್ತೇಜಿಸಲು ಮೀಸಲಾಗಿರುವ ಪ್ರಾಣಿ ಕಲ್ಯಾಣ ಸಂಸ್ಥೆಯಾಗಿದೆ. ಕಳೆದ ಎರಡು ವರ್ಷಗಳ ಹಿಂದೆ ಟ್ರಸ್ಟ್ ಪ್ರಾರಂಭವಾಯಿತು. ನಮ್ಮ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿರುವ 5ನೇ ರೇಬೀಸ್ ವಿರೋಧಿ ಲಸಿಕಾ ಶಿಬಿರ ಇದಾಗಿದೆ. ಶನಿವಾರ 250 ಲಸಿಕೆ ನೀಡಲು ಉದ್ದೇಶಿಸಲಾಗಿತ್ತು. ಪ್ರತಿ ಎರಡು ತಿಂಗಳಿಗೊಮ್ಮೆ ಈ ಶಿಬಿರ ಆಯೋಜಿಸಲು ಯೋಜನೆ ರೂಪಿಸಲಾಗುತ್ತಿದೆ ಎಂದು ತಿಳಿಸಿದರು.

ಡಿಪಿಟಿ ಟ್ರಸ್ಟಿಗಳಾದ ಅಶ್ವಿನಿ ಹುಲ್ಲತ್ತಿ, ವಿದುಷಿ, ವೆಂಕಟೇಶಸ್ವಾಮಿ ಸೇರಿದಂತೆ ಟ್ರಸ್ಟಿನ ಸ್ವಯಂ ಸೇವಕರು ಹಾಜರಿದ್ದರು.

ಆ.4ಕ್ಕೆ ಸ್ಟೆಮ್ ಫಿಟ್ ಸಹ ಸಂಸ್ಥಾಪಕ ಡಾ.ಜಿಮ್ ಲೀ ಮೈಸೂರಿಗೆ ಆಗಮನ

ಮೈಸೂರು, ಜು.29(ಜಿಎ)–ಭಾರತದಲ್ಲಿ ಸ್ಟೆಮ್ (ಕಾಂಡಕೋಶ) ಶಿಕ್ಷಣವನ್ನು ಉತ್ತೇಜಿಸುವ ಸಲುವಾಗಿ ಸ್ಟೆಮ್ ಫಿಟ್ ಸಹ ಸಂಸ್ಥಾಪಕರಾದ ಡಾ.ಜಿಮ್ ಲೀ ಅವರು ಭಾರತಕ್ಕೆ ಆಗಮಿಸುತ್ತಿದ್ದು, ಮೈಸೂರಿಗೆ ಆ.4ರಂದು ಭೇಟಿ ನೀಡಲಿದ್ದಾರೆ ಎಂದು ಐಕ್ಯೂರಿ ಸಂಸ್ಥೆಯ ಹಿರಿಯ ಸಹಾಯಕಿ ಪುಷ್ಪ ರಿಚರ್ಡ್ ತಿಳಿಸಿದರು.



ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಜಿಮ್ ಲೀ ಅವರು ಹೆಸರಾಂತ ವಿಜ್ಞಾನಿಯಾಗಿದ್ದು, ಅಂತಾರಾಷ್ಟ್ರೀಯ ಸಲಹಾ ಸಂಸ್ಥೆಯಾದ ಐಕ್ಯೂರಿ ಸಹಯೋಗದೊಂದಿಗೆ ಜುಲೈನಿಂದ ಆಗಸ್ಟ್‌ವರೆಗೂ ಭಾರತದ ಅನೇಕ ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದು, ಆ.4 ರಂದು ಮೈಸೂರಿಗೆ ಆಗಮಿಸಲಿದ್ದಾರೆ ಎಂದರು.

ನಗರದ ಸ್ಪೋರ್ಟ್ಸ್ ಪೆವಿಲಿಯನ್ ಆವರಣದಲ್ಲಿ ಅಂದು ಬೆಳಗ್ಗೆ 6 ಗಂಟೆಗೆ ಕಾರ್ಯಕ್ರಮವನ್ನು ಆಯೋಜಿಸಿದ್ದು, ರಾಜವಂಶಸ್ಥರಾದ ಕಾಮಾಕ್ಷಿದೇವಿ ಒಡೆಯರ್ ಉದ್ಘಾಟಿಸಲಿದ್ದಾರೆ. 5 ಕಿ.ಮೀ ಮ್ಯಾರಥಾನ್‌ಗೆ ನಗರದ ಮೊದಲ ಐರನ್ ಮಹಿಳೆ ಡಾ.ಉಷಾ ಹೆಗಡೆ ಹಸಿರು ನಿಶಾನೆ ತೋರಲಿದ್ದಾರೆ. ನಂತರ 7 ಗಂಟೆಗೆ ಮ್ಯಾರಥಾನ್ ವಿಜೇತರಿಗೆ ಬಹುಮಾನ ವಿತರಣೆ ನಡೆಯಲಿದೆ. 8.30 ರಿಂದ 12.15ರವರೆಗೆ ಶಾಲಾ ಮಕ್ಕಳು, ಪೋಷಕರು ಮತ್ತು ಶಿಕ್ಷಕರೊಂದಿಗೆ ಡಾ.ಜಿಮ್ ಲೀ ಸಂವಾದ ನಡೆಸಲಿದ್ದಾರೆ ಎಂದರು.

ಹೆಚ್ಚಿನ ಮಾಹಿತಿಗಾಗಿ ಮತ್ತು ನೋಂದಣಿಗಾಗಿ 9886596157 ಸಂಪರ್ಕಿಸಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನೈಪುಣ್ಯ ಶಾಲೆಯ ಶಿಕ್ಷಕಿ ದೇಜಮ್ಮ, ಮಹಾಭೋದಿ ಶಾಲೆ ಶಿಕ್ಷಕಿ ಪದ್ಮಿನಿ ಉಪಸ್ಥಿತರಿದ್ದರು.

ನಮಗೆ ಬೇಕಿರುವುದು ಕಮಿಟ್‌ಮೆಂಟ್ ಸರ್ಕಾರ: ಮುಖ್ಯಮಂತ್ರಿ ಚಂದ್ರು

ಮೈಸೂರು, ಜು.29(ಜಿಎ)– ಈ ಹಿಂದೆ ಭ್ರಷ್ಟಾಚಾರದ ಸರ್ಕಾರ ಇತ್ತು, ಈಗ ಇರುವುದು ಕಂಡಿಷನ್ ಸರ್ಕಾರ. ಆದರೆ, ನಮಗೆ ಬೇಕಿರುವುದು ಕಮಿಟ್‌ಮೆಂಟ್ ಸರ್ಕಾರ ಎಂದು ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಅಭಿಪ್ರಾಯಪಟ್ಟಿದ್ದಾರೆ.



ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷವು ಹೊಸ ಜವಾಬ್ದಾರಿ ನೀಡಿದೆ. ಪಕ್ಷದ ಸಿದ್ಧಾಂತವನ್ನು ಒಪ್ಪಿ ಹೆಚ್.ಡಿ.ಕೋಟೆಯ 11 ಮಂದಿ ಪಕ್ಷ ಸೇರ್ಪಡೆಯಾಗಿದ್ದಾರೆ. ಜಿಲ್ಲೆಯಲ್ಲಿ ಪಕ್ಷವನ್ನು ಸುಭದ್ರಗೊಳಿಸಬಹುದು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಎಲ್ಲಾ ಭ್ರಷ್ಟಾಚಾರ ಮತ್ತು ಆಡಳಿತ ವೈಫಲ್ಯ ಮತ್ತು ಆಮ್ ಆದ್ಮಿ ಪಕ್ಷದ ಸಾಧನೆಗಳನ್ನು ಜನರಿಗೆ ತಿಳಿಸಲು ಮುಂದಿನ ದಿನಗಳಲ್ಲಿ ಜನಜಾಗೃತಿ ಯಾತ್ರೆ ಮಾಡುತ್ತೇವೆ ಎಂದರು.

ಆಮ್ ಆದ್ಮಿ ಪಕ್ಷವು ಹತ್ತು ವರ್ಷ ಪೂರೈಸಿ ರಾಷ್ಟ್ರೀಯ ಪಕ್ಷವಾಗಿ ಹೊರ ಹೊಮ್ಮಿದೆ. ನಮ್ಮ ಮುಂದೆ ತಾಲೂಕು, ಜಿಲ್ಲಾ ಪಂಚಾಯತ್, ಪಾಲಿಕೆ ಮತ್ತು ಲೋಕಸಭಾ ಚುನಾವಣೆ ಸವಾಲುಗಳಿವೆ. ತಾಲೂಕು, ಜಿಲ್ಲಾ ಪಂಚಾಯತ್ ಮತ್ತು ಪಾಲಿಕೆ ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುತ್ತೇವೆ. ಆದರೆ, ಮೋದಿ ಆಡಳಿತದ ಸರ್ಕಾರವನ್ನು ತಡೆಗಟ್ಟಲು ದೇಶದಲ್ಲಿ 26 ಪಕ್ಷಗಳಿಂದ ಮಹಾಘಟ್‌ಬಂಧನ್ ನಡೆಯುತ್ತಿರುವುದರಿಂದ ಲೋಕಸಭೆಯಲ್ಲಿ ಸ್ಪರ್ಧಿಸುವ ಬಗ್ಗೆ ಚಿಂತನೆ ನಡೆಸಲಾಗುತ್ತದೆ ಎಂದರು.

ಹಣ, ಜಾತಿ ಮತ್ತು ತೋಳ್ಬಲದ ನಡುವೆ ನಮ್ಮ ಪಕ್ಷ ಕಾಣಿಸಲಿಲ್ಲ. ಜನರಿಗೆ ಬಿಜೆಪಿ ಮೇಲೆ ಸಿಟ್ಟು ಮತ್ತು ಜೆಡಿಎಸ್ ಪಕ್ಷಕ್ಕೆ ಮೈತ್ರಿ ಸರ್ಕಾರ ನೀಡಬಾರದು ಎಂಬ ಉದ್ದೇಶದಿಂದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬಹುಮತ ನೀಡಿದ್ದಾರೆ. ಆದರೆ, ಈ ಸರ್ಕಾರ ದೆಹಲಿಯಲ್ಲಿ ನಮ್ಮ ಪಕ್ಷ ಅನುಷ್ಠಾನಗೊಳಿಸಿರುವ ಯೋಜನೆಯನ್ನು ಕದ್ದು ಇಲ್ಲಿ ಅಳವಡಿಸಿಕೊಂಡಿದ್ದಾರೆ. ಅದನ್ನು ಸೂಕ್ತವಾಗಿ ಅನುಷ್ಠಾನ ಮಾಡುತ್ತಿಲ್ಲ ಎಂದು ಆರೋಪಿಸಿದರು.

ಕಾಂಗ್ರೆಸ್ ಸರ್ಕಾರ ನೀಡಿರುವ ಯೋಜನೆಗಳು ಜನರಿಗೆ ಸಲೀಸಾಗಿ ದೊರೆಯುತ್ತಿಲ್ಲ. ಮತ್ತೊಂದೆಡೆ ಬಿಜೆಪಿಯನ್ನು 40 ಪರ್ಸೆಂಟ್ ಭ್ರಷ್ಟಾಚಾರ ಎಂದು ಆರೋಪಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರದಲ್ಲಿ ಎರಡೇ ತಿಂಗಳಿನಲ್ಲಿ ಭ್ರಷ್ಟಾಚಾರ ಆರಂಭವಾಗಿದೆ. ಶಾಸಕರ ಒತ್ತಡದಿಂದ ತಹಸೀಲ್ದಾರರನ್ನು ವರ್ಗಾವಣೆ ಮಾಡಿರುವುದೇ ಸಾಕ್ಷಿಯಾಗಿದೆ ಎಂದರು.

ಸರ್ಕಾರದಲ್ಲಿ ಅನುದಾನಕ್ಕೆ ನೀಡಲು ಹಣವಿಲ್ಲ. ಎಲ್ಲಾ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಹೊಂದಿಸಬೇಕಿದೆ ಎಂದು ಉಪಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಇದನ್ನು ನೋಡುತ್ತಿದ್ದರೆ ಕಾಂಗ್ರೆಸ್ ಸರ್ಕಾರ ಆರೇ ತಿಂಗಳಿನಲ್ಲಿ ಅಲುಗಾಡುವ ಪರಿಸ್ಥಿತಿ ನಿರ್ಮಾಣವಾಗಲಿದೆ. ಭ್ರಷ್ಟಾಚಾರವನ್ನು ನಿಲ್ಲಿಸಿದರೆ, ಎಲ್ಲಾ ಯೋಜನೆಗಳನ್ನು ಯಾವುದೇ ಸಮಸ್ಯೆ ಇಲ್ಲದೆ ಅನುಷ್ಠಾನ ಮಾಡಬಹುದು ಎಂದು ಸಲಹೆ ನೀಡಿದರು.

ಮಣಿಪುರ ಘಟನೆ ಇಡೀ ದೇಶವೇ ತಲೆ ತಗ್ಗಿಸುವ ವಿಚಾರವಾಗಿದೆ. ಈ ಬಗ್ಗೆ ದೇಶದ ಪ್ರಧಾನಿ ಮೋದಿ ಮೌನ ವಹಿಸಿರುವುದು ಖಂಡನೀಯ ಎಂದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ಬಿ.ಟಿ ನಾಗಣ್ಣ, ರಾಜ್ಯ ಮಹಿಳಾ ಅಧ್ಯಕ್ಷೆ ಕುಶಲಾ ಸ್ವಾಮಿ, ರಾಜ್ಯ ಉಪಾಧ್ಯಕ್ಷ ಸುರೇಶ್ ರಾಥೋಡ್, ರಾಜ್ಯ ಜಂಟಿ ಕಾರ್ಯದರ್ಶಿ ಮಾಳವಿಕಾ ಗುಬ್ಬಿವಾಣಿ, ಜಿಲ್ಲಾಧ್ಯಕ್ಷ ಎಲ್.ರಂಗಯ್ಯ, ಜಿಲ್ಲಾ ಮಾಧ್ಯಮ ಉಸ್ತುವಾರಿ ಜಿ.ಆರ್.ವಿದ್ಯಾರಣ್ಯ, ಸೋಸಲೆ ಸಿದ್ದರಾಜು, ಧರ್ಮಶ್ರೀ, ಉಷಾ ಸಂಪತ್ ಕುಮಾರ್ ಉಪಸ್ಥಿತರಿದ್ದರು.

ಪುಸ್ತಕ ಪರಿಚಯ

'ರಾಜರ್ಷಿ'

–ಜಯಚಾಮರಾಜ ಒಡೆಯರ್ ಕುರಿತ ಒಂದು ಸಮಗ್ರ ಕೃತಿ

ಇತ್ತೀಚೆಗಷ್ಟೇ ಜುಲೈ 18ರಂದು ಮಹಾರಾಜ ಶ್ರೀ ಜಯಚಾಮರಾಜ ಒಡೆಯರ 107ನೇ ಜನ್ಮ ಶತಾಬ್ದಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕಳೆದ ವರ್ಷ ಅಕ್ಟೋಬರ್ 15ರಂದು ಬೆಂಗಳೂರಿನ ಅರಮನೆ ಮೈದಾನದ 'ತ್ರಿಪುರವಾಸಿನಿ' ಸಭಾ ಮಂಟಪದಲ್ಲಿ ಬಿಡುಗಡೆಯಾದ ಡಾ.ಸುಧಾಮಣಿ ಅವರ 'ರಾಜರ್ಷಿ' ಶ್ರೀಮನ್ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ –ಜೀವನ ಮತ್ತು ಸಾಧನೆಗಳು (1919–1974) ಕೃತಿಯ ಬಗ್ಗೆ ಪ್ರಸ್ತಾಪಿಸುವುದು ಸಮಯೋಚಿತವಾಗಬಹುದು. ಆ ಸಮಾರಂಭದಲ್ಲಿ ಪಾಲ್ಗೊಂಡ ಮಹಾರಾಜ ಜಯಚಾಮರಾಜ ಒಡೆಯರ ಪುತ್ರಿಯರಾದ ಮಹಾರಾಜಕುಮಾರಿ ಶ್ರೀಮತಿ ಕಾಮಾಕ್ಷಿದೇವಿ ಮತ್ತು ಮಹಾರಾಜಕುಮಾರಿ ಶ್ರೀಮತಿ ಇಂದ್ರಾಕ್ಷಿದೇವಿ ಅವರು ಈ ಗ್ರಂಥದ ಎರಡು ಸಂಪುಟಗಳನ್ನು ಲೋಕಾರ್ಪಣೆ ಮಾಡಿದ್ದು ವಿಶೇಷ. ಶ್ರೀಮತಿ ಇಂದ್ರಾಕ್ಷಿದೇವಿ ಅವರ ಪತಿ ರಾಜಾಚಂದ್ರ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ಜಯಚಾಮರಾಜ ಒಡೆಯರನ್ನು ಕುರಿತಂತೆ ಔಚಿತ್ಯ ಭಾಷಣ ಮಾಡಿದುದು ಮತ್ತಷ್ಟು ಮೆರಗು ನೀಡಿತ್ತು.





"ಡಾ.ಸುಧಾಮಣಿ ಅವರು ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ಸಂಶೋಧನೆ ನಡೆಸಿ ಒಟ್ಟು 1,230 ಪುಟಗಳ ಸಮಗ್ರ ಕೃತಿಯನ್ನು ಎರಡು ಸಂಪುಟಗಳಲ್ಲಿ ಕಳೆದ ವರ್ಷ ಹೊರತಂದು ಈವರೆಗೆ ಇದ್ದ ಈ ಕೊರತೆಯನ್ನು ತುಂಬಿದ್ದಾರೆ. "ರಾಜರ್ಷಿ ಶ್ರೀಮನ್ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ –ಜೀವನ ಮತ್ತು ಸಾಧನೆಗಳು (1919–1974)" ಕೃತಿ ಸಮಗ್ರ ಅಧ್ಯಯನ ಕೃತಿಯಾಗಿ ಹೊರಬಂದಿದೆ. ಮಹಾರಾಣಿ ಕಾಲೇಜಿನಲ್ಲಿ ಇತಿಹಾಸದ ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಡಾ.ಸುಧಾಮಣಿ ಅವರು ಸಮರ್ಥ ವಿಶ್ಲೇಷಣೆಯ ಮೂಲಕ ದೀರ್ಘ ಮಾಹಿತಿ ನೀಡಿದ್ದಾರೆ.

ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ.87627 8868
91108 92842



ಜಯಚಾಮರಾಜ ಒಡೆಯರು ಯದುವಂಶದ 25ನೇ ಹಾಗೂ ಕೊನೆಯ ಮಹಾರಾಜರಾಗಿ ಕೇವಲ ಹತ್ತು ವರ್ಷಗಳ ಕಾಲ ಆಳ್ವಿಕೆ ಮಾಡಿದರೂ, ಮಹಾರಾಜರಾಗಿ ನೇರ ಆಳ್ವಿಕೆ ನಡೆಸಿದ್ದು ಏಳು ವರ್ಷಗಳು ಮಾತ್ರ. ಆದರೂ ಅವರ ಆಳ್ವಿಕೆಯ ಅವಧಿಯಲ್ಲಿ ಮೈಸೂರು ಗಣನೀಯ ಅಭಿವೃದ್ಧಿ ಸಾಧಿಸಿತು. ತಮ್ಮ ಅವಧಿಯಲ್ಲಿ ಅವರು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಒಂದಲ್ಲ ಒಂದು ರಾಜಕೀಯ ತುಮುಲ, ಸಂಘರ್ಷ. ಪ್ರತಿಕೂಲ ವಾತಾವರಣ. ಇಕ್ಕಟ್ಟಿನ ಸನ್ನಿವೇಶಗಳೇ. ಮೈಸೂರಿನಲ್ಲಿ ಪ್ರಜಾಪ್ರಭುತ್ವದ ಆಳ್ವಿಕೆಗೆ ಮುನ್ನಡೆಯಿಟ್ಟಿದ್ದ ಚಾಮರಾಜ ಒಡೆಯರ ಮೊಮ್ಮಗನೇ ಪ್ರಜಾಪ್ರಭುತ್ವದ ಹೋರಾಟದ ಕಹಿ ಉಣಬೇಕಾಗಿ ಬಂದದ್ದು ವಿಪರ್ಯಾಸ. ಇಷ್ಟಾದರೂ ತಮ್ಮ ಸಮಚಿತ್ತ ಕಳೆದುಕೊಳ್ಳದೆ ಆಡಳಿತದ ಅಲ್ಪಾವಧಿಯಲ್ಲೇ ಗಣನೀಯ ಸಾಧನೆ ಮಾಡಿ, ಸಾಂಸ್ಕೃತಿಕ ಕ್ಷೇತ್ರದಲ್ಲಿ ತಮ್ಮದೇ ಛಾಪು ಬಿಟ್ಟುಹೋದ ಜಯಚಾಮರಾಜ ಒಡೆಯರನ್ನು ನಾವು ಮರೆಯುವಂತಿಲ್ಲ. ಸಂಗೀತ ಕ್ಷೇತ್ರಕ್ಕೆ ಅವರ ಕೊಡುಗೆಯನ್ನು ಅಲಕ್ಷಿಸುವಂತಿಲ್ಲ. ಬದಲಿಗೆ ಹೆಮ್ಮೆ ಪಡುವಂತಹದು, ಅಸಾಮಾನ್ಯವಾದುದು. ಅಂತೆಯೇ ಸಂಸ್ಕೃತದ ವೈದಿಕ ಮತ್ತು ಪೌರಾಣಿಕ ಕೃತಿಗಳನ್ನು ಕನ್ನಡಕ್ಕೆ ತಂದು, ಅವು ಸಾಮಾನ್ಯರಿಗೆ ಅರ್ಥವಾಗುವಂತೆ, ಎಟುಕುವಂತೆ ಮಾಡಿ ಕನ್ನಡ ಸಾಹಿತ್ಯವನ್ನು ಮತ್ತಷ್ಟು ಶ್ರೀಮಂತಗೊಳಿಸಿದ್ದು ಅವರ ಮತ್ತೊಂದು ವಿಶಿಷ್ಟ ಸಾಧನೆ.

ಏಳು ವರ್ಷಗಳ ಅವಧಿಯ ಆಡಳಿತದಲ್ಲಿ ಅವರು ಹಲವಾರು ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಿದರು. ಜನಹಿತ ಕಾರ್ಯಗಳನ್ನು ಕೈಗೊಂಡರು. ಆಡಳಿತದಲ್ಲಿ ಸುಧಾರಣೆಗಳನ್ನು ತಂದರು. ಜನಪರ ಕಾಳಜಿ ವಹಿಸಿ ಹಲವು ಕಾಯಿದೆಗಳನ್ನು ಜಾರಿಗೆ ತಂದರು. ಆಹಾರದ ಕೊರತೆಯನ್ನು ನಿವಾರಿಸಲು **ಪಡಿತರ ಪದ್ಧತಿ** ಜಾರಿಗೆ ತಂದರು. ಆಹಾರ ಉತ್ಪಾದನೆ ಹೆಚ್ಚಿಸಲು ಕ್ರಮಗಳನ್ನು ತೆಗೆದುಕೊಂಡರು. ಕೆರೆ, ಕಾಲುವೆಗಳನ್ನು ನಿರ್ಮಿಸಿದರು. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಆಸ್ಪತ್ರೆಗಳು ಪ್ರಾರಂಭಗೊಂಡವು. ರೈಲು ಮಾರ್ಗಗಳ ನಿರ್ಮಾಣವಾಯಿತು. ಹೊಸ ಕೈಗಾರಿಕೆಗಳು ಪ್ರಾರಂಭಗೊಂಡವು. ಹೀಗೆ ಹಲವಾರು ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿ ಅವರ ಅವಧಿಯಲ್ಲಿ ಸಾಧ್ಯವಾಯಿತು.

ಹಲವಾರು ಸಮಸ್ಯೆ, ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸಬೇಕಾಗಿ ಬಂದರೂ ಜಯಚಾಮರಾಜರು ಸ್ವಾತಂತ್ರ್ಯದ ಪರವಾಗಿದ್ದರು. ತಮ್ಮ ರಾಜ್ಯ ಭಾರತದ ಒಕ್ಕೂಟದೊಂದಿಗೆ ಸೇರಲು ಸಮ್ಮತಿ ನೀಡಿದ ರಾಜರುಗಳಲ್ಲಿ ಅವರು ಮುಂಚೂಣಿಯಲ್ಲಿದ್ದರು. ಅಧಿಕಾರವನ್ನು ಹಿಂಜರಿಯದೆ ಬಿಟ್ಟುಕೊಟ್ಟರು. ವಿವಿಧ ಸಂದರ್ಭಗಳಲ್ಲಿ ಅವರು ಮಾಡಿದ ಭಾಷಣಗಳು ಪ್ರಜಾಪ್ರಭುತ್ವದ ಬಗ್ಗೆ ಅವರಿಗಿದ್ದ ವಿಶಾಲ ಮನೋಭಾವಕ್ಕೆ ದ್ಯೋತಕ. ಅವರ ಈ ಉದಾರ ನೀತಿಯ ನಿಲುವು ಹಲವಾರು ರಾಷ್ಟ್ರ ನಾಯಕರ ಪ್ರಶಂಸೆ ಗಳಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಅವರ ಸ್ವಾತಂತ್ರ್ಯದ ಪರವಾದ ಈ ನಿಲುವು ಹೆಚ್ಚು ಪ್ರಕಾಶಕ್ಕೆ ಬರಬೇಕಾಗಿದೆ. ಟೀಕೆಗಳಿಗೆ, ಅಪವಾದಗಳಿಗೆ ಉತ್ತರ ಹೇಳಬೇಕಾಗಿದೆ.

ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಜಯಚಾಮರಾಜರ ಕೊಡುಗೆಯನ್ನು ಕುರಿತಂತೆ ಕೆಲವರು ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿ ಗಳಿಸಿದ್ದಾರೆ. ಇನ್ನು ಕೆಲವರು ಅವರು ಸಂಗೀತ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ವಿವರಿಸಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಆದರೆ ಅವರ ಆಡಳಿತ, ಸಾಧನೆಗಳು, ವ್ಯಕ್ತಿತ್ವ ಇತ್ಯಾದಿ ವಿವರಗಳ ಬಗ್ಗೆ ಒಂದು ಸಮಗ್ರ ಕೃತಿ ಈವರೆಗೆ ಹೊರಬಂದಿಲ್ಲ. ಈ ಹಿಂದೆ ಕನ್ನಡ ಚಳವಳಿಯ ನಾ.ನಾಗಲಿಂಗಸ್ವಾಮಿ ಅವರು ಜಯಚಾಮರಾಜರ ಬಗ್ಗೆ ಒಂದು ಸಣ್ಣ ಪುಸ್ತಕವನ್ನು ಸ್ಮರಣ ಸಂಚಿಕೆಯನ್ನಾಗಿ ಪ್ರಕಟಿಸಿದ್ದರು. ಈಚೆಗೆ ಡಾ. ಎನ್. ಚಿನ್ನಸ್ವಾಮಿ ಸೋಸಲೆಯವರು 'ಜಯಚಾಮರಾಜೇಂದ್ರ ಒಡೆಯರ್ ಕಾಲದ ಮೈಸೂರು ಸಂಸ್ಥಾನ' ಗ್ರಂಥವನ್ನು ಸಂಪಾದಿಸಿ ಹೊರತಂದಿದ್ದರು. ಅವರ ನಂತರ ಈಚೆಗೆ ಡಾ.ದೀಪ್ತಿ ನವರತ್ನ ಅವರು ಇಂಗ್ಲಿಷ್‌ನಲ್ಲಿ 'ಮಾರ್ವಿಕ್ ಮಹಾರಾಜ' ಕೃತಿಯೊಂದನ್ನು ಹೊರತಂದಿದ್ದಾರೆ. ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಪ್ರತಿಷ್ಠಾನದ ಟ್ರಸ್ಟ್ ಸಂಸ್ಥಾಪಕಿ ಮತ್ತು ಜಯಚಾಮರಾಜ ಒಡೆಯರ ಪುತ್ರಿ ಮಹಾರಾಜಕುಮಾರಿ ಶ್ರೀಮತಿ ಕಾಮಾಕ್ಷಿದೇವಿ ಅವರು ಪ್ರಾರಂಭದಲ್ಲಿನ ಅಧ್ಯಕ್ಷರ ನುಡಿಯಲ್ಲಿ ಹೇಳಿರುವಂತೆ, ಜಯಚಾಮರಾಜ ಒಡೆಯರವರ ಕೊಡುಗೆಗಳು ಅಪಾರವಾಗಿದ್ದರೂ, ಅವರ ಪೂರ್ವಜರ ಆಳ್ವಿಕೆ ಮತ್ತು ನಂತರದ ರಾಜಕೀಯ ಬೆಳವಣಿಗೆಗಳ ಕರಿ ಛಾಯೆಯಿಂದ ಅವುಗಳು ಪ್ರಚಲಿತವಾಗಿಲ್ಲ. ಆಡಳಿತ, ಆಧ್ಯಾತ್ಮಿಕತೆ, ತತ್ವಶಾಸ್ತ್ರ ಲೋಕೋಪಕಾರ, ಪರಿಸರ ಸಂರಕ್ಷಣೆ, ಸಾಹಿತ್ಯ, ಕಲೆ ಮತ್ತು ಮುಖ್ಯವಾಗಿ ಸಂಗೀತ – ಹೀಗೆ ವಿವಿಧ ಕ್ಷೇತ್ರಗಳಲ್ಲಿ ಮಹಾರಾಜ ಜಯಚಾಮರಾಜ ಒಡೆಯರ್‌ರವರ ಕೊಡುಗೆಗೆ ಸರಿಸಾಟಿಯಿಲ್ಲ ಮತ್ತು ಅವರು ಚಿಕ್ಕ ವಯಸ್ಸಿನಲ್ಲೇ ಇವೆಲ್ಲವನ್ನೂ ಸಾಧಿಸಿರುವುದು ಅಸಾಮಾನ್ಯವಾದುದು ಎಂದಿದ್ದಾರೆ.

ಡಾ.ಸುಧಾಮಣಿ ಅವರು ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ಸಂಶೋಧನೆ ನಡೆಸಿ ಒಟ್ಟು 1,230 ಪುಟಗಳ ಸಮಗ್ರ ಕೃತಿಯನ್ನು ಎರಡು ಸಂಪುಟಗಳಲ್ಲಿ ಕಳೆದ ವರ್ಷ ಹೊರತಂದು ಈವರೆಗೆ ಇದ್ದ ಈ ಕೊರತೆಯನ್ನು ತುಂಬಿದ್ದಾರೆ. "ರಾಜರ್ಷಿ ಶ್ರೀಮನ್ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ –ಜೀವನ ಮತ್ತು ಸಾಧನೆಗಳು (1919–1974)" ಕೃತಿ ಸಮಗ್ರ ಅಧ್ಯಯನ ಕೃತಿಯಾಗಿ ಹೊರಬಂದಿದೆ. ಮಹಾರಾಣಿ ಕಾಲೇಜಿನಲ್ಲಿ ಇತಿಹಾಸದ ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಡಾ.ಸುಧಾಮಣಿ ಅವರು ಸಮರ್ಥ ವಿಶ್ಲೇಷಣೆಯ ಮೂಲಕ ದೀರ್ಘ ಮಾಹಿತಿ ನೀಡಿದ್ದಾರೆ. ಆ ಮೂಲಕ ಶ್ಲಾಘನೀಯ ಕಾರ್ಯ ಮಾಡಿದ್ದಾರೆ.

ಕೃತಿಕಾರರು 'ಪ್ರಸ್ತಾವನೆ'ಯಲ್ಲಿ ಹೇಳುವಂತೆ 'ಅವರ (ಮಹಾರಾಜರ) ಆಡಳಿತದ ವೈವಿಧ್ಯಗಳು ಹಾಗೂ ಸಾಂಸ್ಕೃತಿಕವಾಗಿ ಮಾಡಿರುವ ಅಪೂರ್ವವಾದ ಸಾಧನೆಗಳನ್ನು ಕುರಿತು ಮಹಾರಾಜರ ಕಾಲಕ್ಕೇ ಸಂಬಂಧಿಸಿದಂತೆ ಸಂಶೋಧನೆಗಳು ಹೆಚ್ಚಾಗಿ ನಡೆದಿಲ್ಲವೆಂದೇ ಹೇಳಬೇಕಾಗುತ್ತದೆ. ಅವರ ಏಳು ವರ್ಷಗಳ ರಾಜಕೀಯ ಇತಿಹಾಸದ ಬಗ್ಗೆ ಸ್ವಲ್ಪ ಮಟ್ಟಿನ ವಿವರಣೆಗಳಿದ್ದರೂ ಮಹಾರಾಜರ ಆಡಳಿತ ಸಾಧನೆಗಳ ಬಗ್ಗೆ ಪೂರ್ಣ ವಿವರಣೆಗಳು ಲಭ್ಯವಾಗುವುದಿಲ್ಲ. ಈ ಅವಧಿಯ ಆಡಳಿತ ಸಾಧನೆಗಳನ್ನು ಕುರಿತ ಪಿಎಚ್.ಡಿ. ಪ್ರಬಂಧಗಳೂ ರಚನೆಯಾಗಿಲ್ಲ. ಈ ಕೊರತೆಯನ್ನು ಡಾ. ಸುಧಾಮಣಿ ಅವರು ಈಗ ತುಂಬಿದ್ದಾರೆ ಎನ್ನಬೇಕು.

ಗ್ರಂಥದ 554 ಪುಟಗಳ ಮೊದಲ ಸಂಪುಟದಲ್ಲಿ ಆರು ಅಧ್ಯಾಯಗಳಿವೆ. ಅವು ಜಯಚಾಮರಾಜರ ಜನನ, ಶಿಕ್ಷಣ ಮತ್ತು ಪಟ್ಟಾಭಿಷೇಕ, ರಾಜಕೀಯ ಬೆಳವಣಿಗೆಗಳು, ಆಡಳಿತ, ಆರ್ಥಿಕಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚವಾರ್ಷಿಕ ಯೋಜನೆ ಹಾಗೂ ಸಾಮಾಜಿಕ ಆಡಳಿತ ಮತ್ತು ಬದ್ಧತೆಗಳನ್ನು ಕುರಿತದ್ದಾಗಿವೆ. 338 ಪುಟಗಳ ಎರಡನೇ ಸಂಪುಟ ಸಂಗೀತ ಕ್ಷೇತ್ರ ಮತ್ತು ಇತರ ಲಲಿತಕಲೆಗಳಿಗೆ ಕೊಡುಗೆಗಳು, ಮಹಾರಾಜರು ಮತ್ತು ಧಾರ್ಮಿಕ ನಿರ್ಮಾಣಗಳು ಹಾಗೂ ಸಾರಸ್ವತ ಲೋಕಕ್ಕೆ ಮಹಾರಾಜರ ಕೊಡುಗೆಗಳನ್ನು ವಿವರಿಸುತ್ತದೆ. ನಾಲ್ಕನೆಯದು ಹಾಗೂ ಕೊನೆಯದಾದ ಹತ್ತನೇ ಅಧ್ಯಾಯ ಸ್ವಾರಸ್ಯಕರ ಘಟನೆಗಳು, ಮಹಾರಾಜರನ್ನು ಕುರಿತು ರಚನೆಯಾಗಿರುವ ಶ್ಲೋಕಗಳು, ಸಂಗೀತ ರಚನೆಗಳು, ಕವನಗಳನ್ನು ಒಳಗೊಂಡಿದೆ. ಜೊತೆಗೆ ವರ್ಣಚಿತ್ರಗಳ 60 ಪುಟಗಳಿವೆ. ಪ್ರತಿ ಅಧ್ಯಾಯದ ಕೊನೆಯಲ್ಲಿ ಕೊಟ್ಟಿರುವ ಆಧಾರ ಸೂಚಿ ಮತ್ತು ಟಿಪ್ಪಣಿಗಳು ಹಲವು ಪುಟಗಳವರೆಗೆ ವಿಸ್ತರಿಸಿಕೊಂಡಿದ್ದರೆ, ಗ್ರಂಥದ ಕೊನೆಯಲ್ಲಿ ಕೊಟ್ಟಿರುವ 'ಗ್ರಂಥಋಣ' ಹನ್ನೊಂದು ಪುಟಗಳವರೆಗೆ ವಿಸ್ತರಿಸಿ, ಇದು ಡಾ ಸುಧಾಮಣಿ ಅವರ ಅಧ್ಯಯನ, ಸಮಗ್ರತೆಗೆ ಸಾಕ್ಷಿಯಾಗಿ ನಿಲ್ಲುತ್ತವೆ.

ವಿದ್ವಾಂಸ ಡಾ. ಪ್ರಧಾನ ಗುರುದತ್ತ ಅವರು ಕೃತಿಯ ಬಗ್ಗೆ ದೀರ್ಘ ಅಭಿಪ್ರಾಯ ವ್ಯಕ್ತಪಡಿಸುತ್ತಾ "ಈ ಕೃತಿ ಶ್ರೇಷ್ಠ ಸಂಶೋಧನೆಯ ಒಂದು ಮಾದರಿಯಾಗಿ ನಿಲ್ಲುತ್ತದೆ ಎಂಬುದರಲ್ಲಿ ಅನುಮಾನವೇನೂ ಇಲ್ಲ. ನಾನು ಈ ಅನುಪಮ ಸಂಶೋಧಕಿಯನ್ನು ಹೃತ್ಪೂರ್ವಕವಾಗಿ ಅಭಿನಂದಿಸಲು, ಅಷ್ಟೇ ಏಕೆ ಅಭಿವಂದಿಸಲೂ ಬಯಸುತ್ತೇನೆ" ಎಂದು ಮೆಚ್ಚುಗೆಯ ಮಾತನಾಡಿದ್ದಾರೆ. ಹಿರಿಯ ವಿದ್ವಾಂಸ ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರೀ ಅವರು ಮುನ್ನುಡಿಯಲ್ಲಿ, "ಪ್ರಭುಗಳ ಜೀವನ–ಸಾಧನೆಗಳನ್ನು ಕುರಿತ ಹಾಗೆ ಬಿಡಿಬಿಡಿಯಾಗಿ ಬೇರೆ ಬೇರೆ ವಿಷಯಗಳನ್ನು ವಿವರಿಸುವ ಕೆಲವು ಪುಸ್ತಕಗಳು ಈಗಾಗಲೇ ರಚಿತವಾಗಿಯೋ, ಸಂಪಾದಿತವಾಗಿಯೋ ಹೊರಬಂದಿವೆಯಾದರೂ ಏಕ ಪ್ರತ್ಯೇಕವಾದ ಈ ಪ್ರಮಾಣದ ಪುಸ್ತಕವೆಂದರೆ ಪ್ರಾಯಶಃ ಇದೇ" ಎಂದಿದ್ದಾರೆ.

ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಪ್ರತಿಷ್ಠಾನದ ಪರವಾಗಿ ಈ ಎರಡು ಸಂಪುಟಗಳನ್ನೂ ಮೈಸೂರಿನ ಸಂಸ್ಕೃತಿ ಬುಕ್ ಏಜನ್ಸೀಸ್ ಪ್ರಕಟಿಸಿದೆ.


ಮಕ್ಕಳ ಚಿತ್ರಕಥೆ

ಬಹಳ ಅಂತರದಿಂದ ಗೆಲ್ಲುವೆ...!

–ಹೆಚ್.ಜಿ.ಎನ್.ಪ್ರಸಾದ್, ಮೊ:9845376199




ಒಮ್ಮೆ ಕತ್ತೆ ಹಾಗೂ ನಾಯಿಯ ನಡುವೆ ಓಟದ ಸ್ಪರ್ಧೆ ನಡೆಯುತ್ತಿತ್ತು. ನಾಯಿಯು ಮನದಲ್ಲೇ ಸಂತೋಷಪಡುತ್ತಾ "ಕತ್ತೆಯು ನನ್ನ ಜೊತೆಗೆ ಸ್ಪರ್ಧೆ ಮಾಡುತ್ತಿದೆ...!" ಎಂದು ಮುಗುಳ್ನಗುತ್ತಾ "ಬಹಳ ಅಂತರದಿಂದ ಗೆಲ್ಲುವೆ...!" ಎಂಬ ಆತ್ಮವಿಶ್ವಾಸದಿಂದ ಸ್ಪರ್ಧೆಗೆ ಇಳಿದಿತ್ತು.




ಓಟ ಪ್ರಾರಂಭವಾಯಿತು. ನಾಯಿಯು ತನ್ನ ಸಂಪೂರ್ಣ ಬಲವನ್ನು ಉಪಯೋಗಿಸಿ ಕತ್ತೆಗಿಂತ ಮುಂದೆ ಓಡತೊಡಗಿತ್ತು.




ಒಂದು ಓಣಿಯಿಂದ ಇನ್ನೊಂದು ಓಣಿಗೆ ಓಡುತ್ತಲೇ ಶುರುವಾಯಿತು ನೋಡಿ ಎದುರಾಳಿಗಳ ಕಾಟ. ಎದುರಾಳಿಗಳು ಯಾರಂತೀರಾ...? ತನ್ನ ಕುಲಬಾಂಧವರೇ...! ತಾನು ಓಡುವುದನ್ನು ನೋಡಿ ಆ ಓಣಿಯ ನಾಯಿಗಳು ಅದನ್ನು ತಡೆಯಲು ಪ್ರಾರಂಭಿಸಿದವು. ಜಗಳಕ್ಕೆ ನಿಂತವು.



ಆಗ ಅದು ತನ್ನೆಲ್ಲಾ ಬಲವನ್ನು ಉಪಯೋಗಿಸಿ ಅಲ್ಲಿಂದ ಮುಂದೆ ಸಾಗಿತು.



ಮುಂದೆ ಸಾಗಿದಂತೆ ಮತ್ತೊಂದು ಓಣಿ ಹೊಕ್ಕಿತು. ಅಲ್ಲಿ ಹಿಂದಿನ ಓಣಿಗಳಿಗಿಂತಲೂ ನಾಯಿಗಳು ಎದುರು ನಿಂತವು. ಇದನ್ನು ಮುಂದೆ ಹೋಗದಂತೆ ತಡೆದು ಅದರ ಮೇಲೆ ಹರಿಹಾಯ್ದುವು. ಕಾಲೆಳೆಯಲು ಪ್ರಾರಂಭಿಸಿದವು.



ತಾನು ತನ್ನ ಕುಲಬಾಂಧವರಿಂದ ತಪ್ಪಿಸಿಕೊಂಡು ಓಡಿ ತನ್ನ ಗುರಿ ತಲುಪುವಷ್ಟರಲ್ಲಿ ಆ ಕತ್ತೆಯು ಯಾವುದೇ ಅಡೆತಡೆಗಳಿಲ್ಲದೆ ವಿಜಯವನ್ನು ಸಾಧಿಸಿಬಿಟ್ಟಿತ್ತು. ಅದನ್ನು ಕಂಡ ನಾಯಿ ತನ್ನ ಮನಸ್ಸಿನಲ್ಲಿ ನನ್ನವರೇ ನನಗೆ ಶತ್ರುಗಳಾದರಲ್ಲಾ...! ಎಂದು ಮರುಗಿ ಸೋಲೊಪ್ಪಿಕೊಂಡಿತು.

ನೀತಿ:– ಗೆಳೆಯರೇ, ಈ ರೀತಿ ಸನ್ನಿವೇಶಗಳು ನಮ್ಮ ಜೀವನಲ್ಲೂ ಬರುತ್ತಿರುತ್ತವೆ. ನಮ್ಮ ನಮ್ಮಲ್ಲೇ ಕಾಲೆಳೆಯುವುದು, ಹೊಡೆದಾಡುವುದನ್ನು ಪ್ರಸ್ತುತ ಸಮಾಜದಲ್ಲಿ ತುಸು ಹೆಚ್ಚಾಗಿಯೇ ಕಾಣುತ್ತಿದ್ದೇವೆ. ಎಲ್ಲಿಯವರೆಗೆ ನಾವುಗಳು ಒಗ್ಗಟ್ಟಾಗುವುದಿಲ್ಲವೋ ಅಲ್ಲಿಯವರೆವಿಗೆ ಶತ್ರುಗಳು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುತ್ತಾರೆ.



ವಾರಭವಿಷ್ಯ

30.7.2023 ರಿಂದ 5.8.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಕಟಕ, ಚಂದ್ರ–ಧನುಸ್ಸು, ಮಕರ, ಕುಂಭ, ಮೀನ, ಕುಜ–ಸಿಂಹ, ಬುಧ–ಸಿಂಹ, ಗುರು–ಮೇಷ, ಶುಕ್ರ–ಕಟಕ, ಶನಿ–ಕುಂಭ, ರಾಹು–ಮೇಷ, ಮತ್ತು ಕೇತು–ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಮಾಡುವ ಕೆಲಸವನ್ನು ನಿರ್ಮಲ ಚಿತ್ತದಿಂದ ಪ್ರಯತ್ನಿಸಿ, ಜೊತೆಗೆ ಗುರು ದರ್ಶನದಿಂದ ಗುರಿ ಕಾಣುತ್ತದೆ. ಗೃಹ ಹಾಗೂ ಕಚೇರಿ ಕೆಲಸಗಳು ನಿಧಾನಗತಿಯಲ್ಲಿ ಸಾಗುತ್ತವೆ. ಎಣ್ಣೆಕಾಳು ವ್ಯಾಪಾರ ಭರಾಟೆಯಿಂದ ಸಾಗುವುದು. ವರಮಾನಕ್ಕಿಂತ ಖರ್ಚು–ವೆಚ್ಚಗಳು ಲಂಗು ಲಗಾಮು ಇಲ್ಲದೆ ಸಾಗುವುದು. ಶಿಕ್ಷಣ ಕ್ಷೇತ್ರದಲ್ಲಿ ಸಫಲತೆ ಹಾಗೂ ಕ್ಯಾಂಪಸ್ ಸೆಲೆಕ್ಷನ್ ಆಗುವ ಸಂಭವವಿದೆ. ಶಕ್ತಿಹೀನತೆ ಕಾಡುತ್ತದೆ. ಶ್ರೀ ಗಣಪತಿಗೆ ಗರಿಕೆ ಸಮರ್ಪಣೆ. ಶುಭ ಸಂಖ್ಯೆ–1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಅಮೂಲ್ಯ ಸಂಪತ್ತು ಗಳಿಕೆಗೆ ಅವಕಾಶವಿದೆ. ಪ್ರಯತ್ನ ನಿಮ್ಮದು, ಫಲ ದೇವರದು. ಹಿಂದಾಗಿದ್ದಕ್ಕೆ ಚಿಂತಿಸುತ್ತಾ ಕೂರಬೇಡಿ. ಮುಂದಾಗಬೇಕಾಗಿರುವ ಸಾಧನೆಯತ್ತ ನೋಡಿ. ಉದ್ಯೋಗ, ವ್ಯವಹಾರದಲ್ಲಿ ಆಸಕ್ತಿ ತೋರುವಿರಿ. ಸನ್ನದುದಾರರಿಗೆ ದೊಡ್ಡ ಕಂಪನಿಯ ಫೈಲ್ ಸಿಗುವುದು. ಆರೋಗ್ಯ ಮರುಕಳಿಸುವುದು. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. ನೆರೆಹೊರೆಯಲ್ಲಿ ಸೌಹಾರ್ದತೆಯನ್ನು ಕಾಯ್ದುಕೊಳ್ಳಿ. ಶ್ರೀದೇವಿಗೆ ಸುಗಂಧ ಪುಷ್ಪ ಸಮರ್ಪಣೆ. ಶುಭ ಸಂಖ್ಯೆ–4.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಸಪ್ತಾಹದ ಆರಂಭಕ್ಕೆ ಪರೋಪಕಾರ ಬುದ್ಧಿ, ಸಾಮಾಜಿಕ ಗೌರವ ಪ್ರಾಪ್ತಿ. ವ್ಯಾಪಾರ, ವ್ಯವಹಾರಗಳು ದ್ವಿಗುಣಗೊಳ್ಳುವುದು. ನಿಮ್ಮ ಸಂತಾನಕ್ಕೆ ಉದ್ಯೋಗ ದೊರೆಯುವುದು, ಜೊತೆಗೆ ಮಕ್ಕಳ ಉನ್ನತ ವ್ಯಾಸಂಗಕ್ಕೆ ದಾರಿ ಸುಗಮ. ವಿವಾಹಯೋಗ್ಯರಿಗೆ ಉತ್ತಮ ವನಿತಾರತ್ನ ದೊರೆಯುವರು. ಸಹೋದರ ವರ್ಗದವರಲ್ಲಿ ವಿರಸ ಹಾಗೂ ಅಪನಂಬಿಕೆ. ವಾರದ ಕಡೆಗೆ ಸಂಸಾರ ಸಮೇತ ಪುಣ್ಯಕ್ಷೇತ್ರ ಸಂದರ್ಶನ. ಶ್ರೀಹರಿನಾಮ ಸ್ಮರಣೆ. ಶುಭ ಸಂಖ್ಯೆ–9.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ನಾನಾ ರೀತಿಯಿಂದ ಧನ ಸಂಗ್ರಹ, ವಾಹನ ಖರೀದಿಗೆ ಯೋಗವಿದೆ. ಬೃಹತ್ ಉದ್ಯಮಿಗಳಿಗೆ ನಿರೀಕ್ಷಿತ ಪ್ರಗತಿ ಇಲ್ಲದೆ ನಿರಾಸೆ. ಸ್ತ್ರೀಯರು ಅಲಂಕಾರಿಕ ವಸ್ತುಗಳಿಗೆ ಧಾರಾಳ ಹಣ ವ್ಯಯಿಸುವರು. ಉದ್ಯೋಗಾಕಾಂಕ್ಷಿಗಳಿಗೆ ಯಥಾಸ್ಥಿತಿ ಮುಂದುವರೆಯುವುದು. ಸರ್ಕಾರಿ ನೌಕರರು ಅಡ್ಡದಾರಿಯಲ್ಲಿ ಸಾಗಿ ತೊಂದರೆಗೆ ಗುರಿಯಾಗುವರು. ಸತಿ–ಸುತರು ಎದುರಾಡುವುದರಿಂದ ಮನಸ್ಸಿಗೆ ಬೇಸರ. ಶ್ರೀ ಔದುಂಬರ ವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ–3.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವ್ಯಾಪಾರದಲ್ಲಿ ಹೊಸ ಯೋಜನೆ ಅಳವಡಿಸಿಕೊಳ್ಳಲು ಕಾಲ ಪಕ್ವವಾಗಿದೆ. ಕರಕುಶಲ ವಸ್ತು ಮಾರಾಟಗಾರರಿಗೆ ವಿದೇಶದ ದೊಡ್ಡ ಆರ್ಡರ್ ದೊರೆಯುವ ಸಾಧ್ಯತೆ. ರಾಜಕಾರಣಿಗಳಿಗೆ ಶುಭ ಯೋಗವಿದ್ದು, ಉನ್ನತ ಸ್ಥಾನ ಹಾಗೂ ಜವಾಬ್ದಾರಿಗಳು ಹೆಚ್ಚಾಗಲಿವೆ. ವಧು–ವರ ಅನ್ವೇಷಣೆ ಧನಾತ್ಮಕ ಫಲ ನೀಡಲಿದೆ. ನ್ಯಾಯಾಲಯ ವಿಚಾರಗಳು ಪ್ರತಿಕೂಲ ಫಲ ನೀಡಲಿದೆ. ನೇತ್ರ ದೋಷ ಕಾಡಿಸುತ್ತದೆ. ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ–5.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದ ಆದಿಗೆ ಶುಭ ಸುದ್ದಿ ಬಂದು ಮನಸ್ಸಿಗೆ ಸಮಾಧಾನ. ಸಣ್ಣ ಕೈಗಾರಿಕೆಯವರಿಗೆ ಮಾರಾಟ ಹೆಚ್ಚಳ. ದ್ವಿದಳ ಧಾನ್ಯ, ಎಣ್ಣೆಕಾಳು ಕೃಷಿಕರಿಗೆ ಹಾಗೂ ವ್ಯಾಪಾರಿಗಳಿಗೆ ಹೆಚ್ಚಿನ ಧನಲಾಭ. ವಾರಮಧ್ಯೆ ಆತ್ಮೀಯರ ಭೇಟಿ, ಕಷ್ಟ–ಸುಖದ ಮಾತುಗಳು. ಸಹೋದರಿಯರು ಸಹಾಯಕ್ಕೆ ಒದಗುವರು. ಕೇತು–ರಾಹುಗಳು ಅಶುಭರಿದ್ದು ಅಪವಾದಗಳಿಗೆ ಗುರಿಯಾಗುವಿರಿ. ಸಾವಧಾನದ ಡ್ರೈವಿಂಗ್ ಒಳ್ಳೆಯದು. ಶ್ರೀ ರಾಹು–ಕೇತು ಸ್ತೋತ್ರ ಪಠಿಸಿ. ಶುಭ ಸಂಖ್ಯೆ–2.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಸುವಾರ್ತೆ ಬರುವುದು. ವಿವಾಹಾಕಾಂಕ್ಷಿಗಳಿಗೆ ವರ–ವಧು ನಿಶ್ಚಯಕ್ಕೆ ಗುರು ಬಲವಿದೆ. ಕಳೆದುಕೊಂಡಿದ್ದನ್ನು ಮರಳಿ ಪಡೆಯುವಿರಿ. ಹಲವರಿಗೆ ವಿದೇಶ ಪ್ರವಾಸದ ಯೋಗವಿದೆ. ಕುಟುಂಬ ಕಲಹಗಳು ನಿವಾರಣೆ ಆಗುವುದು. ರಾಹು–ಕೇತು ಸಂಯೋಗ ಇರುವ ಕಾರಣ ಆರೋಗ್ಯದ ಬಗ್ಗೆ ಹೆಚ್ಚು ಗಮನಹರಿಸಿ. ವಾರದ ಕಡೆಗೆ ಯಾಗ–ಯಜ್ಞಾದಿಗಳಲ್ಲಿ ಭಾಗವಹಿಸಿ. ಧನ್ಯತಾಭಾವ. ಶ್ರೀದೇವಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–7.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ಅಂದುಕೊಂಡಿದ್ದೆಲ್ಲಾ ಆಗುವುದಿಲ್ಲ. ಹೊಂದಿಕೊಂಡು ಹೋಗುವುದೇ ಜಾಣತನ. ಆತ್ಮೀಯ ಬಂಧುಗಳು ಮನೆಗೆ ಭೇಟಿ, ಅವರ ಊಟೋಪಚಾರಕ್ಕೆ ಖರ್ಚು. ಬಾಳ ಸಂಗಾತಿಯ ಸಲಹೆ ಸ್ವೀಕರಿಸಿದರೆ ಒಳಿತಾಗುತ್ತದೆ. ಉದ್ಯೋಗ ಸ್ಥಾನದಲ್ಲಿ ಬದಲಾವಣೆ ಸಂಭವ. ಪಿತೃ ಸಮಾನ ವ್ಯಕ್ತಿಗೆ ಅನಾರೋಗ್ಯ ಕಾಡಿಸುವುದು. ವೈದ್ಯಕೀಯ ಖರ್ಚುಗಳು ಹೆಚ್ಚಾಗುವುದು. ಜಲಾಶಯಗಳ ಹತ್ತಿರ ಹುಡುಗಾಟ ಸಲ್ಲದು. ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–8.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ರಾಶಿಗೆ ಚಂದ್ರಮನ ಪ್ರವೇಶ. ಜೀವನದಲ್ಲಿ ನವ ಉಲ್ಲಾಸ. ಮಂಗಳ ಕಾರ್ಯಕ್ಕೆ ಪ್ರೇರಣೆ. ಗೆಳೆಯರ ಸಂಪರ್ಕದಿಂದ ಹರುಷ. ಸಿಹಿ ಸುದ್ದಿ ಹೊತ್ತ ಓಲೆಯೊಂದು ಬರಲಿದೆ. ಉದ್ಯೋಗದಲ್ಲಿ ಸ್ಥಾನಮಾನದಲ್ಲಿ ಬಡ್ತಿ. ಸಂಪರ್ಕ ಮಾಧ್ಯಮದವರಿಗೆ ಪ್ರಶಸ್ತಿ, ಪುರಸ್ಕಾರಗಳು ದೊರೆಯುವ ಸಂಭವ. ಅಶುಭ ರಾಹುವಿನಿಂದ ಆಸ್ತಿ ವಿಚಾರದಲ್ಲಿ ಮೋಸ ಹೋಗುವ ಸಾಧ್ಯತೆ. ಶ್ರೀ ಶ್ರೀಧರಸ್ವಾಮಿ ದರ್ಶನ. ಶುಭ ಸಂಖ್ಯೆ–9.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದ ಆದಿಗೆ ಶುಭ ಕೆಲಸಗಳಿಗೆ ನಾಂದಿ. ಹಿತೈಷಿಗಳ ಸಮಾಗಮದಿಂದ ಮನಸ್ಸಂತೋಷ. ಧಾರಾಳವಾಗಿ ಧನ ಸಂಗ್ರಹವಾದರೂ ಅನವಶ್ಯಕ ಖರ್ಚುಗಳಿಂದ ಪರ್ಸ್ ಖಾಲಿ. ಕಟ್ಟಡ ಕೆಲಸಗಳು ನೀವಂದುಕೊಂಡಂತೆ ಸಾಗದೆ ಮನಸ್ಸಿಗೆ ಬೇಸರ. ರಿಯಲ್ ಎಸ್ಟೇಟ್ ವ್ಯವಹಾರಿಗಳಿಗೆ ತಾತ್ಕಾಲಿಕವಾಗಿ ಸಾಲ ಮಾಡಬೇಕಾದ ಪರಿಸ್ಥಿತಿ ಬರುವುದು. ವಾರಾಂತ್ಯಕ್ಕೆ ಪಿಕ್‌ನಿಕ್ ಪ್ರವಾಸಗಳು, ಮನೋರಂಜನಾ ಖರ್ಚುಗಳು. ಶ್ರೀ ಮಾರುತಿ ದೇವಳಕ್ಕೆ ಎಳ್ಳೆಣ್ಣೆ ದಾನ. ಶುಭ ಸಂಖ್ಯೆ–4.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಜಗದಲ್ಲಿ ನಡೆಯುವುದೆಲ್ಲ ಜಗದೀಶನ ಇಚ್ಛೆ. ಹೊಸ ಯೋಜನೆಗಳನ್ನು ಸೂಕ್ತ ತಯಾರಿ ಇಲ್ಲದೇ ಮಾಡುವುದರಿಂದ ನಷ್ಟ ಸಂಭವ. ಕ್ಷತ್ರಿಮ ಗೆಳೆಯರನ್ನು ನಂಬಿ ಮೋಸ ಹೋಗುವಿರಿ. ಸಾಡೇಸಾತಿಯ ಪ್ರಭಾವದ ಕಾರಣ ನಿಮ್ಮ ನಿರಂತರ ಪರಿಶ್ರಮ ಫಲಪ್ರದವಾಗಲು ಸ್ವಲ್ಪ ಸಮಯ ಕಾಯಬೇಕಾಗಿದೆ. ವಾರದ ಕಡೆಗೆ ನಿಮ್ಮ ರಾಶಿಗೆ ಪ್ರವೇಶಿಸುವ ಚಂದ್ರನಿಂದ ಭಾಗ್ಯದಲ್ಲಿ ವೃದ್ಧಿ, ಸುಖ ಭೋಜನ, ಸಹಧರ್ಮಿಣಿಯ ಸಹಕಾರ. ಶ್ರೀ ಶೇಷಶಯನ ವಿಷ್ಣುನಾಮ ಸ್ಮರಣೆ. ಶುಭ ಸಂಖ್ಯೆ–6.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಸಪ್ತಾಹದ ಆದಿಗೆ ನಿಮ್ಮ ಕಾರ್ಯತತ್ಪರತೆ ಹಾಗೂ ಶ್ರದ್ಧೆಯ ಸುಫಲವನ್ನು ಹೊಂದುವಿರಿ. ಆರ್ಥಿಕ ಸ್ಥಿತಿಯಲ್ಲಿ ಮುನ್ನಡೆಯನ್ನು ಸಾಧಿಸುವಿರಿ. ಷೇರು ಮಾರಾಟದಿಂದ ಉತ್ತಮ ಲಾಭ. ಆಧ್ಯಾತ್ಮದಲ್ಲಿ ಒಲವು, ಧಾನ–ಧರ್ಮ ಪ್ರವೃತ್ತಿ. ಆಸ್ತಿ ಸಂಬಂಧಿತ ಮಹತ್ವದ ವಿಷಯಗಳಲ್ಲಿ ಮನೆ ಮಂದಿಯ ಒಮ್ಮತ ಕೂಡಿ ಬರುವುದು. ಅಷ್ಟಮ ಕಡುವಿನ ಕಾರಣ ಸ್ವಭಾವದಲ್ಲಿ ತೀವ್ರತೆ, ಕೋಪದಿಂದ ಕಾರ್ಯಗೇಡು. ಶ್ರೀದತ್ತಗುರು ಪೂಜೆ. ಶುಭ ಸಂಖ್ಯೆ–1.

ಹುಲಿಯಷ್ಟೇ ಜನರ ರಕ್ಷಣೆಯೂ ನನ್ನ ಜವಬ್ದಾರಿ

ವಿಶ್ವ ಹುಲಿ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅಭಯ



ವಿಶ್ವ ಹುಲಿ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ ಶಾಸಕ ಅನಿಲ್ ಚಿಕ್ಕಮಾದು

● ಹೆಚ್ಚು ಹುಲಿ ಹೊಂದಿರುವ ನಾಗರಹೊಳೆ ನಂ.1, ಬಂಡಿಪುರ ನಂ.2 ಅರಣ್ಯ ಪ್ರದೇಶ ● ಅರಣ್ಯ ಇಲಾಖೆಯ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ



20,000 ರೂ. ನಗದು ಬಹುಮಾನ ಗಳಿಸಿದ ಛಾಯಾಗ್ರಾಹಕ ಜಕ್ಕಳ್ಳಿ ಮುರಳಿ ಅವರ ಚಿತ್ರ

ಹೆಚ್.ಡಿ.ಕೋಟೆ, ಜು.29– ಹುಲಿಗಳ ರಕ್ಷಣೆಯಷ್ಟೇ ಜನರ ರಕ್ಷಣೆಯ ಜವಾಬ್ದಾರಿಯೂ ನನ್ನ ಮೇಲೆ ಇರುವುದರಿಂದ ನಾನು ಆಗಾಗ ಅರಣ್ಯ ಇಲಾಖೆಯೊಂದಿಗೆ ಜಗಳವಾಡಿದರೂ ಅವರ ಸೇವೆಯ ಮೇಲೆ ನನಗೆ ಅಪಾರವಾದ ಗೌರವವಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ಹೇಳಿದರು.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ವಲಯದ ಕಾಕನಕೋಟೆ ಸಫಾರಿ ಕೇಂದ್ರದ ಆವರಣದಲ್ಲಿ ನಡೆದ ವಿಶ್ವ ಹುಲಿ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನನ್ನ ಕ್ಷೇತ್ರದಲ್ಲಿ ಬಂಡೀಪುರ ಮತ್ತು ನಾಗರಹೊಳೆಯ ಎರಡು ಹುಲಿ ಸಂರಕ್ಷಿತ ಪ್ರದೇಶಗಳು ಬರುತ್ತವೆ. ಅದರಲ್ಲಿಯೂ ಈ ಬಾರಿ ನಾಗರಹೊಳೆ 149 ಹುಲಿಗಳು ಮತ್ತು ಬಂಡೀಪುರ 143 ಹುಲಿಗಳನ್ನು ಹೊಂದುವ ಮೂಲಕ ರಾಜ್ಯದಲ್ಲಿ 1ನೇ ಮತ್ತು 2ನೇ ಸ್ಥಾನ ಅಲಂಕರಿಸಿರುವುದು ಹೆಮ್ಮೆಯ ವಿಚಾರ ಎಂದರು.

ಕಾಡಿನ ಆಹಾರ ಸರಪಳಿ ಬಲಿಷ್ಠವಾಗಿರಬೇಕು ಎಂದರೇ ಹುಲಿಗಳು ಉಳಿಯಬೇಕು. ಈ ನಿಟ್ಟಿನಲ್ಲಿ 1973ರಲ್ಲಿ ಇಂದಿರಾ ಗಾಂಧಿಯವರು ಪ್ರಾಜೆಕ್ಟ್ ಟೈಗರ್ ತರದಿದ್ದರೆ, ಇಂದು ಅವುಗಳ ಸಂತತಿ ಉಳಿಯುವುದೇ ಕಷ್ಟವಾಗುತ್ತಿತ್ತು. ಈ ನಿಟ್ಟಿನಲ್ಲಿ ಅವರ ಕೊಡುಗೆ ಅಪಾರ ಎಂದ ಅವರು ನನ್ನ ಕ್ಷೇತ್ರದಲ್ಲಿ ಬಂಡೀಪುರ ಮತ್ತು ನಾಗರಹೊಳೆ 12 ವಲಯಗಳಿವೆ. ಬಹುತೇಕ ಕಡೆ ಹುಲಿ ಮತ್ತು ಆನೆ ದಾಳಿಗಳು ನಡೆಯುತ್ತಿರುತ್ತವೆ. ಆನೆದಾಳಿ ತಡೆಗಟ್ಟಲು ಅರಣ್ಯ ಸಚಿವರಿಗೆ ನಮ್ಮ ಭಾಗಕ್ಕೆ 73 ಕಿ.ಮೀ.ನಷ್ಟು ರೈಲ್ವೇ ಬ್ಯಾರೀಕೇಡ್ ಬೇಕು ಎಂದು ಮನವಿ ಮಾಡಿದ್ದೇನೆ. ಅಲ್ಲದೆ ರೈತರಿಗೂ ಆನೆಗೆ ಪ್ರಿಯವಾದ ಆಹಾರಗಳನ್ನು ಕಾಡಂಚಿನಲ್ಲಿ ಬೆಳಯದಂತೆ ಮನವಿ ಮಾಡಲಾಗಿದೆ ಎಂದರು.

ಬಳಿಕ ಮಾತನಾಡಿದ ಡಿಸಿಎಫ್ ಹರ್ಷ ಕುಮಾರ್ ಚಿಕ್ಕನರಗುಂದ, ಕರ್ನಾಟಕದಲ್ಲಿ ಹುಲಿಗಳ ಸಂಖ್ಯೆ ಮತ್ತು ಸಾಂದ್ರತೆಯಲ್ಲಿ ನಾಗರಹೊಳೆ ಪ್ರಥಮ ಸ್ಥಾನ ಪಡೆದಿರುವುದು ಹೆಮ್ಮೆಯ ವಿಚಾರ. ಹುಲಿಗಳ ರಕ್ಷಣೆ ಅವುಗಳ ಆವಾಸ ಸ್ಥಾನದ ರಕ್ಷಣೆಗೆ ಸ್ಥಳೀಯರ ತಾಳ್ಮೆ ಮತ್ತು ಬೆಂಬಲ ಮುಖ್ಯ. ಅವರ ಸಹಾಯದಿಂದಲೇ ನಾವು ಇಂದು ಹುಲಿಗಳ ರಕ್ಷಿಸಲು ಸಾಧ್ಯವಾಗಿದೆ. ಅಲ್ಲದೆ ಸಿಬ್ಬಂದಿಗಳ ಶ್ರಮ ಮತ್ತು ತ್ಯಾಗವನ್ನು ಇಲ್ಲಿ ಮರೆಯುವಂತಿಲ್ಲ. ಕಾಡು ನದಿಗಳ ಉಗಮಸ್ಥಳ, ನಮ್ಮ ಮೂಲ ಕಾಡೇ ಆದ್ದರಿಂದ ನಾವೆಲ್ಲ ಕಾಡನ್ನು ರಕ್ಷಣೆ ಮಾಡಬೇಕು ಎಂದರು.

ಇದೇ ವೇಳೆ ವಿಶ್ವ ಹುಲಿ ದಿನದ ಅಂಗವಾಗಿ ಆಯೋಜಿಸಿದ್ದ ವನ್ಯಜೀವಿ ಛಾಯಾ ಚಿತ್ರ ಸ್ಪರ್ಧೆ, 15 ಕಿ.ಮೀ.ಗಳ ಮ್ಯಾರಥಾನ್ ಓಟದಲ್ಲಿ ಮತ್ತು ಆದಿವಾಸಿ ಶಾಲಾ ಮಕ್ಕಳಿಗಾಗಿ ಆಯೋಜಿಸಿದ್ದ ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಹಾಗೂ ಅರಣ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಕೆಲ ಸಿಬ್ಬಂದಿಗಳಿಗೆ ಮಣಿಕಂದನ್ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದೇ ವೇಳೆ ವಿಶ್ವ ಹುಲಿ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಬಳಿಕ, ಎಲ್‌ಇಡಿಯಲ್ಲಿ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು.

ಕರ್ನಾಟಕ ಅರಣ್ಯ ಇಲಾಖೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶವು ಆಯೋಜಿಸಿದ್ದ ಅಂತರಾಷ್ಟ್ರೀಯ ಹುಲಿ ದಿನ 2023ರ ವನ್ಯಜೀವಿಗಳ ಛಾಯಾಚಿತ್ರ ಸ್ಪರ್ಧೆಯಲ್ಲಿ ಮೂರು ವಿಭಾಗವಿತ್ತು. ಅದರಲ್ಲಿ ಪ್ರಾಣಿಗಳ ನಡವಳಿಕೆ (Animal behaviour) ವಿಭಾಗದಿಂದ ಎಚ್.ಡಿ.ಕೋಟೆ ತಾಲೂಕಿನ ಜಕ್ಕಳ್ಳಿಯ ಜಿ ಮುರಳಿ ಅವರ ಆನೆಗಳು ಆಟವಾಡುವ ಚಿತ್ರಕ್ಕೆ ಮೊದಲನೇ ಬಹುಮಾನ ಲಭಿಸಿದೆ, 20ಸಾವಿರ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರವನ್ನು ಶಾಸಕರಾದ ಅನಿಲ್ ಚಿಕ್ಕಮಾದು ಅವರು ಇಂದು ದಮ್ಮನಕಟ್ಟೆಯ ರೇಂಜಿನ ಆವರಣದಲ್ಲಿ ಇಂದು ಅಂತರಾಷ್ಟ್ರೀಯ ಪ್ರಶಸ್ತಿ ನೀಡಿದರು.

ಕಾರ್ಯಕ್ರಮದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಸೀಮಾ, ಗೌರವ ವನ್ಯಜೀವಿ ಪರಿಪಾಲಕಿ ಕೃತಿಕಾ ಆಲನಹಳ್ಳಿ, ಎಸಿಎಫ್‌ಗಳಾದ ಕೆ.ಎನ್.ರಂಗಸ್ವಾಮಿ, ಡಿ.ಎಸ್. ದಯಾನಂದ್, ಸುರಾನಾ ಕಾಲೇಜು ಪ್ರಾಂಶುಪಾಲ ಕಾರ್ತೀಕ್ ಕೃಷ್ಣನ್, ನೆಟ್‌ಜಿಯೋ ಫೆಲೋ ಸಂದೇಶ್ ಕಡೂರ್, ಪುರಸಭಾ ಸದಸ್ಯ ಹೆಚ್.ಸಿ. ನರಸಿಂಹಮೂರ್ತಿ, ಗ್ರಾಪಂ ಅಧ್ಯಕ್ಷರುಗಳಾದ ಎಂ.ಸುಬ್ರಮಣ್ಯ, ಆಶಾ, ಮಂಜುನಾಥ್ ಪೊಲೀಸ್ ಇಲಾಖೆಯ ಸಿಬ್ಬಂದಿ ಮತ್ತು ಅರಣ್ಯ ಇಲಾಖೆಯ ಸಿಬ್ಬಂದಿಗಳು ಮುಂತಾದವರು ಹಾಜರಿದ್ದರು.

ನೇರಳೆ ಗ್ರಾಪಂ ಅಧ್ಯಕ್ಷರಾಗಿ ಗಿರೀಶ್, ಉಪಾಧ್ಯಕ್ಷರಾಗಿ ಅಲಮೇಲಮ್ಮ ಆಯ್ಕೆ



ನಂಜನಗೂಡು, ಜು.29– ತಾಲೂಕಿನ ನೇರಳೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಬಿ.ಆರ್.ಗಿರೀಶ್, ಉಪಾಧ್ಯಕ್ಷರಾಗಿ ಅಲಮೇಲಮ್ಮ ಅವಿರೋಧವಾಗಿ ಆಯ್ಕೆಯಾದರು.

20 ಜನ ಸದಸ್ಯ ಬಲದ ನೇರಳೆ ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ಚುನಾವಣೆ ನಡೆಸಲಾಯಿತು. ಅಧ್ಯಕ್ಷ ಸ್ಥಾನಕ್ಕೆ ಬಿ.ಆರ್.ಗಿರೀಶ್, ಉಪಾಧ್ಯಕ್ಷ ಸ್ಥಾನಕ್ಕೆ ಅಲಮೇಲಮ್ಮ ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯಾಗಿದ್ದ ಸಿಡಿಪಿಓ ಮಂಜುಳಾ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷ ಬಿ.ಆರ್.ಗಿರೀಶ್ ಮಾತನಾಡಿ, ನೇರಳೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿನ ಸಮಸ್ಯೆಗಳನ್ನು ಬಗೆಹರಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಶ್ರಮಿಸುವ ಜೊತೆಗೆ ಸರ್ಕಾರದಿಂದ ದೊರಕುವ ಸವಲತ್ತುಗಳನ್ನು ಅರ್ಹ ಫಲಾನುಭವಿಗಳ ಮನೆಬಾಗಿಲಿಗೆ ತಲುಪಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ವೀರೇಂದ್ರ, ಮೀನಾಕ್ಷಮ್ಮ, ಸಿದ್ದನಾಯ್ಕ ವಸಂತ, ಗುರುಸ್ವಾಮಿ, ಚಿಕ್ಕೂಸ ಶೆಟ್ಟಿ, ಪುಷ್ಪ, ಶಿವಸ್ವಾಮಿ, ಲೋಕೇಶ್, ರಾಜೇಂದ್ರ, ಮಂಜು, ನಾರಾಯಣಸ್ವಾಮಿ, ಮುಖಂಡರಾದ ಡಿ.ಎಸ್. ಆನಂದ್, ಹೆಮ್ಮರಗಾಲ ಉಮೇಶ್, ನೇರಳೆ ನಾಗೇಶ್, ಮಲ್ಲೇಗೌಡ, ಹೇಮಂತ್ ಸೇರಿದಂತೆ ನೇರಳೆ ಗ್ರಾಮಸ್ಥರು ಇದ್ದರು.

ಶಿರಮಳ್ಳಿ ಗ್ರಾಮಪಂಚಾಯಿತಿ ಕಾಂಗ್ರೆಸ್ ವಶ



ಹುಲ್ಲಹಳ್ಳಿ, ಜು.29– ನಂಜನಗೂಡು ತಾಲೂಕಿನ ಶಿರಮಳ್ಳಿ ಗ್ರಾಮ ಪಂಚಾಯತಿಗೆ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾದ ಭಾಗ್ಯ, ಉಪಾಧ್ಯಕ್ಷರಾಗಿ ರತ್ನಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶಿರಮಳ್ಳಿ ಗ್ರಾಮ ಪಂಚಾಯತಿಯಲ್ಲಿ ಇಂದು ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ನಡೆಸಲಾಯಿತು. 16 ಸದಸ್ಯರ ಬಲ ಹೊಂದಿರುವ ಗ್ರಾಮ ಪಂಚಾಯಿತಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಕ್ಕೆ ಇವರಿಬ್ಬರು ಮಾತ್ರ ನಾಮಪತ್ರ ಸಲ್ಲಿಸಿದ್ದರು. 4 ಜನ ಗ್ರಾಮ ಪಂಚಾಯಿತಿ ಸದಸ್ಯರು ಗೈರು ಹಾಜರಿಯಲ್ಲಿ ನೂತನ ಅಧ್ಯಕ್ಷರಾಗಿ ಭಾಗ್ಯ, ಉಪಾಧ್ಯಕ್ಷರಾಗಿ ರತ್ನಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ಸಿ ಚಂದ್ರು ಘೋಷಣೆ ಮಾಡಿದರು.

ಈ ಸಂದರ್ಭದಲ್ಲಿ ಪಿಡಿಓ ಯಾಸಿನ್ ಶರೀಫ್, ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಮುಖಂಡರಾದ ಸಿದ್ದಪ್ಪ, ಬೆಳೆ ಶೆಟ್ಟಿ, ಸ್ವಾಮಿ ನಾಯಕ, ಸಿದ್ದರಾಜು, ರಮೇಶ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದ್ದರು.

ಹೊಸಕೋಟೆಯಲ್ಲಿ ಸಂಜೀವಿನಿ ಭವನ ಉದ್ಘಾಟನೆ

ತಿ.ನರಸೀಪುರ, ಜು.29– ಅಂತರ್ಜಾಲ ಸರ್ವ ವ್ಯಾಪಿಯಾಗಿರುವ ಪ್ರಸಕ್ತ ಸನ್ನಿವೇಶದಲ್ಲಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಇಂಟರ್‌ನೆಟ್ ಸೌಲಭ್ಯ ಅವಶ್ಯಕವಾಗಿ ಬೇಕಿದೆ ಎಂದು ಮಾಜಿ ಶಾಸಕ ಹಾಗೂ ಹಾಲಿ ಆಶ್ರಯ ಸಮಿತಿ ಅಧ್ಯಕ್ಷ ಯತೀಂದ್ರ ಸಿದ್ದರಾಮಯ್ಯ ಅಭಿಪ್ರಾಯ ಪಟ್ಟರು.

ತಾಲೂಕಿನ ಹೊಸಕೋಟೆ(ಕೆಂಪಯ್ಯನಹುಂಡಿ) ಗ್ರಾಮದಲ್ಲಿ 15 ಲಕ್ಷ ರೂ.ಗಳ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಎಸ್‌ಆರ್‌ಎಲ್‌ಎಂ ಸಂಜೀವಿನಿ ಭವನದ ಕಟ್ಟಡ ಹಾಗೂ ಡಿಜಿಟಲ್ ಮತ್ತು ಐಕಾನ್ ಗ್ರಂಥಾಲಯ ಹಾಗೂ ಪ್ರೌಢಶಾಲೆಯ ಸ್ಮಾರ್ಟ್ ಕ್ಲಾಸ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಪಂಚ ತಂತ್ರಜ್ಞಾನದಲ್ಲಿ ಬಹಳಷ್ಟು ಮುಂದೆ ಹೋಗಿದೆ. ಅಂತರ್ಜಾಲ ಇಂದು ಸರ್ವ ವ್ಯಾಪಿಯಾಗಿದೆ. ಯಾವುದೇ ವಿಷಯ ತಿಳಿಯ ಬೇಕಾದರೆ ಇಂಟರ್‌ನೆಟ್ ಮೊರೆ ಹೋಗುವಂತಾಗಿದೆ. ಹಾಗೂ ನಮ್ಮ ಜೀವನ ಸಹ ನಿಧಾನವಾಗಿ ಅದಕ್ಕೆ ಅವಲಂಬನೆಯಾಗುತ್ತಿದೆ. ಹಾಗಾಗಿ ಇಂಟರ್‌ನೆಟ್ ಬಹುಮುಖ್ಯವಾಗಿದೆ. ಇಂದು ಎಲ್ಲರ ಮನೆಯಲ್ಲಿಯೂ ಇಂಟರ್ನೆಟ್ ಸೌಲಭ್ಯ ಇದೆ.ಆದರೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಇಂಟರ್‌ನೆಟ್ ಸೌಲಭ್ಯ ದೊರಕುತ್ತಿಲ್ಲವಾದ್ದರಿಂದ ಗ್ರಾಮದ ಗ್ರಂಥಾಲಯದಲ್ಲಿ ಇಂಟರ್ನೆಟ್ ಸೌಲಭ್ಯ ಕಲ್ಪಿಸಿ ಅಲ್ಲಿ ಮಕ್ಕಳಿಗೆ ಮಾಹಿತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದರು.



15 ಲಕ್ಷ ರೂ.ಗಳ ವೆಚ್ಚದಲ್ಲಿ ಸಂಜೀವಿನಿ ಭವನ ನಿರ್ಮಿಸಿರುವುದರಿಂದ ಮಹಿಳಾ ಸಂಘದ ಸದಸ್ಯರು ಹಾಗೂ ಗ್ರಾಮಸ್ಥರಿಗೆ ಅನುಕೂಲವಾಗಲಿದೆ. ಸಂಘದ ಚಟುವಟಿಕೆ ಹಾಗು ಕಷ್ಟ ಸುಖದ ಬಗ್ಗೆ ಸಭೆ ಮಾಡಲು ಸಹಕಾರಿಯಾಗುತ್ತದೆ ಎಂದರು.

ಕೊಟ್ಟ ಮಾತು ಈಡೇರಿಸಲು ಬದ್ಧ : ಚುನಾವಣಾ ಪೂರ್ವದಲ್ಲಿ ಹಲವಾರು ಗ್ರಾಮದಲ್ಲಿರುವ ಹಲವಾರು ಸಮಸ್ಯೆಗಳನ್ನು ನನ್ನ ಗಮನಕ್ಕೆ ತರಲಾಗಿತ್ತು. ಅಧಿಕಾರಕ್ಕೆ ಬಂದರೆ ಎಲ್ಲ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿದ್ದೆವು. ಅದರಂತೆ ಈಗ ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತೇವೆ. ಶಾಲೆಗೆ ಎರಡು ಹೆಚ್ಚುವರಿ ಕೊಠಡಿ, ಶೌಚಾಲಯ ಹಾಗೂ ಭೋಜನಾಲಯಕ್ಕೆ ಬೇಡಿಕೆ ಇಡಲಾಗಿದೆ. ಖಂಡಿತವಾಗಿಯೂ ಇದಕ್ಕೆ ಅನುದಾನ ಕೊಡಿಸುತ್ತೇನೆ ಎಂದು ಯತೀಂದ್ರ ಭರವಸೆ ನೀಡಿದರು.

ಹೊಸಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಆನಂದ್, ಉಪಾಧ್ಯಕ್ಷ ಚೆನ್ನಮ್ಮ, ಮಾಜಿ ಅಧ್ಯಕ್ಷ ಕೆ.ಅರುಣ್ ಕುಮಾರ್ ಪಿಎಲ್‌ಡಿ ಬ್ಯಾಂಕ್ ರಾಜ್ಯ ನಿರ್ದೇಶಕ ಹಾಗೂ ಅಧ್ಯಕ್ಷ ಕೆಂಪಯ್ಯನಹುಂಡಿ ಮಹಾದೇವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಗ್ರಾ.ಪಂ ಸದಸ್ಯರಾದ ಕಾವ್ಯಶ್ರೀ ಮಹದೇವಸ್ವಾಮಿ, ನಂದಿನಿ, ಶೋಭಾ, ಜಾನಕಮ್ಮ, ಭವಾನಿ, ರಾಣಿ, ಗಂಗಾಧರ, ಸತೀಶ, ಜಯಲಕ್ಷ್ಮಿ, ನಾಗರಾಜು, ನೀಲಮ್ಮ, ಅಭಿವೃದ್ಧಿ ಅಧಿಕಾರಿ ಪೂರ್ಣಿಮಾ, ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ಟಿಎಸ್ ಪ್ರಶಾಂತ ಬಾಬು, ಸಿದ್ದರಾಮಯ್ಯ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಹಿನಕಲ್ ಉದಯ್, ಪುರಸಭಾ ಮಾಜಿ ಅಧ್ಯಕ್ಷರಾದ ಎನ್.ಸೋಮು, ಎಸ್.ಮದನ್ ರಾಜ್, ಕುಪ್ಯ ಗ್ರಾ.ಪಂ. ಅಧ್ಯಕ್ಷ ರಘು, ಮುಖಂಡರಾದ ಕೆ.ಎಸ್. ಮಹೇಶ್, ಕೆಇಬಿ ಮಹದೇವ್, ಆರ್ಪಿ ಹುಂಡಿ ನಾಗರಾಜು, ಮುಖ್ಯಶಿಕ್ಷಕಿ ಪಂಕಜ, ಮಂಜು, ಡಿಕೆ ಶಿವಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಆರ್. ಚೇತನ್, ಪ್ರಥಮ ದರ್ಜೆ ಗುತ್ತಿಗೆದಾರ ಮಾಧು, ಜಿ.ಪಂ.ಮಾಜಿ ಸದಸ್ಯ ಮಹದೇವ್ ಸೇರಿದಂತೆ ಮತ್ತಿತರರಿದ್ದರು.

ಅಧಿಸೂಚಿತ ಅರಣ್ಯದಲ್ಲಿ ಅದಿರು ಸಾಗಿಸುತ್ತಿದ್ದ ಪ್ರಕರಣ ಬಯಲು

ಲಾರಿ ವಶ, ಆರೋಪಿಗಳು ಪರಾರಿ



ಹೆಚ್.ಡಿ.ಕೋಟೆ, ಜು.29– ಅಧಿಸೂಚಿತ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ರಸ್ತೆ ನಿರ್ಮಿಸಿಕೊಂಡು ಕೈಯನ್ಹೈಟ್ (Kyanite) ಅದಿರು ಸಾಗಿಸುತ್ತಿದ್ದ ಪ್ರಕರಣವನ್ನು ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಪತ್ತೆ ಹಚ್ಚಿದ್ದು, ಆರೋಪಿಗಳು ಪರಾರಿಯಾಗಿದ್ದಾರೆ.

ಹೆಚ್.ಡಿ.ಕೋಟೆ ಪ್ರಾದೇಶಿಕ ವಲಯ ವ್ಯಾಪ್ತಿಯ ಹಂಪಾಪುರ ಶಾಖೆಯ ಬ್ಲಾಕ್ ಸೆಕ್ಷನ್–4ರಲ್ಲಿ ಅಕ್ರಮವಾಗಿ ರಸ್ತೆ ನಿರ್ಮಿಸಿಕೊಂಡು ಅದಿರು ಸಾಗಿಸುತ್ತಿದ್ದ ಲಾರಿ(ಕೆಎ42 ಎ0747)ಯನ್ನು ತಮಗೆ ದೊರೆತ ಖಚಿತ ಮಾಹಿತಿ ಮೇರೆಗೆ ಡಿಸಿಎಫ್ ಬಸವರಾಜ್ ಹಾಗೂ ಎಸಿಎಫ್ ಲಕ್ಷ್ಮಿಕಾಂತ್ ಅವರ ಮಾರ್ಗದರ್ಶನದಲ್ಲಿ ದಾಳಿ ನಡೆಸಿ ಲಾರಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಆರ್‌ಎಫ್‌ಓ ಪ್ರಸನ್ನ ಕುಮಾರ್ ತಿಳಿಸಿದ್ದಾರೆ.

ಶಿವಯೋಗಿ ಎಸ್.ಎಸ್. ಬಿನ್ ಸೂರಪ್ಪ, ಎಸ್.ಕೆ. ಮಹಮ್ಮದ್ ಇದ್ರಿಸ್ ಬಿನ್ ಲೇ ಮಹಮ್ಮದ್ ಅಕ್ರಂ, ವೆಂಕಟೇಶ ಸಿ. ಬಿನ್ ಚಿಕ್ಕತಿಮ್ಮಯ್ಯ, ವಾಹನ ಚಾಲಕ ಮಂಜು ಎನ್. ಬಿನ್ ನಾಗರಾಜು ಅವರುಗಳು ಈ ಅಕ್ರಮದಲ್ಲಿ ಭಾಗವಹಿಸಿದ್ದು, ದಾಳಿ ವೇಳೆ ಲಾರಿ ಬಿಟ್ಟು ಆರೋಪಿಗಳು ಪರಾರಿಯಾಗಿದ್ದಾರೆ. ಇವರುಗಳ ಮೇಲೆ ಅರಣ್ಯ ಮೊಕದ್ದಮೆ, ಕೇಸು ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಆರ್‌ಎಫ್‌ಓ ಪ್ರಸನ್ನ ಕುಮಾರ್, ಡಿಆರ್‌ಎಫ್‌ಓಗಳಾದ ಸುನೀತಾ, ಚಂದನ್, ಬೀಟ್ ಫಾರೆಸ್ಟ್ ಪ್ರಸಾದ್ ಹಾಗೂ ಸಿಬ್ಬಂದಿ ವರ್ಗಗಳು ಕಾರ್ಯ ಚರಣೆಯಲ್ಲಿ ಭಾಗವಹಿಸಿದ್ದರು.

ದೇಶದಲ್ಲಿ ಸಂವಿಧಾನವನ್ನು ಅಸ್ಥಿರಗೊಳಿಸುವ ಪ್ರಯತ್ನ ನಡೆಯುತ್ತಿದೆ

ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್ ಕಳವಳ

ನಂಜನಗೂಡು, ಜು.29– ಸಂವಿಧಾನವನ್ನು ಅಪ್ರಸ್ತುತಗೊಳಿಸುವ ಪ್ರಯತ್ನಗಳು ನಡೆಯುತ್ತಿದ್ದು, ಅವಿದ್ಯಾವಂತರಿಗೂ ಸಂವಿಧಾನದ ಬಗ್ಗೆ ಅರಿವು ಮೂಡಿಸಿ ಜಾಗೃತಗೊಳಿಸುವ ಮೂಲಕ ದೇಶದ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಬೇಕಿದೆ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್ ಹೇಳಿದರು.

ನಗರದ ಶ್ರಾವಣ ಕಲ್ಯಾಣ ಮಂಟಪದಲ್ಲಿ ದಲಿತ ಸಂಘರ್ಷ ಸಮಿತಿ ವತಿಯಿಂದ ಶನಿವಾರ ಆಯೋಜಿಸಿದ್ದ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ದಿನಮಾನದಲ್ಲಿ ಸಂವಿಧಾನವನ್ನು ಅಸ್ಥಿರಗೊಳಿಸಬೇಕೆಂಬ ಸಂಚುಗಳು ನಡೆಯುತ್ತಿದೆ. ಸಂವಿಧಾನದ ಬಗ್ಗೆ ನಾವು ಅರಿತುಕೊಂಡು ಜಾಗೃತರಾಗದಿದ್ದರೆ ಕೋಮುವಾದ ರಾರಾಜಿಸಲಿದ್ದು ಬಾಯಿಗೆ ಬೀಗ ಹಾಕಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗುವ ಆತಂಕವಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಈ ಹಿಂದೆ ಶಾಸನಸಭೆಗಳಿಗೆ ಬುದ್ಧಿಜೀವಿಗಳು ಹಾಗೂ ವಿಚಾರವಂತರು ಪ್ರವೇಶಿಸುತ್ತಿದ್ದರು. ಈಗಿನ ಚುನಾವಣೆಗಳು ಹಣ, ಜಾತಿ, ಧರ್ಮದ ಮೇಲೆ ನಡೆಯುತ್ತಿರುವುರಿಂದ ಕಾರ್ಪೋರೇಟ್ ವಲಯದವರು ಹಾಗೂ ಶ್ರೀಮಂತರೇ ಹೆಚ್ಚು ಅವಕಾಶವನ್ನು ಗಿಟ್ಟಿಸಿಕೊಳ್ಳುತ್ತಿದ್ದಾರೆ. ಇದನ್ನು ಮುಕ್ತಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯಬೇಕು ಎಂದು ಆಶಿಸಿದರು.



ಜಾತಿ. ಆಹಾರ ಹಾಗೂ ಧರ್ಮದ ವಿಚಾರವಾಗಿ ಅಸಹಿಷ್ಣುತೆ ಹೆಚ್ಚಾಗುತ್ತಿದೆ. ಸಂವಿಧಾನದ ಮೂಲಕ ಜಾತಿ ಅಸಮಾನತೆಗೆ ಪೆಟ್ಟು ಕೊಟ್ಟಿದ್ದೇವೆ. ಇದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕಾದರೆ ಪ್ರತಿಯೊಬ್ಬರಿಗೂ ಸಂವಿಧಾನದ ಮಹತ್ವವನ್ನು ತಿಳಿಸಬೇಕು. ಹಿಂದಿನ ಕಾಲದಲ್ಲಿ ಅವಿದ್ಯಾವಂತರಿಗೆ ಹೇಗೆ ರಾಮಾಯಣ, ಮಹಾಭಾರತವನ್ನು ನಾಟಕ, ಸಿನಿಮಾ ಮೂಲಕ ಅರ್ಥ ಮಾಡಿಸಲಾಗುತ್ತಿತ್ತೋ ಹಾಗೆಯೇ ಸಂವಿಧಾನವನ್ನು ಅವಿದ್ಯಾವಂತರಿಗೂ ಅರ್ಥೈಸುವಂತೆ ಕ್ರಮವಹಿಸಬೇಕು, ದಲಿತರು, ಹಿಂದುಳಿದ ವರ್ಗದ ಜನರಲ್ಲಿ ಅರಿವು ಮೂಡಿಸುವ ಮೂಲಕ ಜಾಗೃತಗೊಳಿಸಬೇಕು ಎಂದು ಸಲಹೆ ನೀಡಿದರು.

ಶಾಸಕ ದರ್ಶನ್ ಧ್ರುವನಾರಾಯಣ ಮಾತನಾಡಿ, ಸಾಮಾನ್ಯರು ಕೂಡ ವಿಧಾನಸಭೆ, ಸಂಸತ್ ಸದಸ್ಯರಾಗಲು ಅಂಬೇಡ್ಕರ್ ನೀಡಿರುವ ಸಂವಿಧಾನ ಕಾರಣ. ಕಟ್ಟಕಡೆಯ ವ್ಯಕ್ತಿಯೂ, ಅಶಕ್ತರು, ಬಡವರಿಗೂ ಸಾಮಾಜಿಕ ನ್ಯಾಯ ಸಿಗುವಂತಾಗಬೇಕೆಂಬುದು ಸಂವಿಧಾನದ ಆಶಯವಾಗಿದೆ. ರಾಜ್ಯ ಸರ್ಕಾರ ಘೋಷಿಸಿರುವ ಐದು ಗ್ಯಾರಂಟಿ ಯೋಜನೆಗಳು ಕೂಡ ಸಂವಿಧಾನದ ಆಶಯಕ್ಕೆ ಪೂರಕವಾಗಿವೆ ಎಂದರು.

> ಮಣಿಪುರ ರಾಜ್ಯದಲ್ಲಿ ನಡೆದ ಸಂಘರ್ಷ ಹಾಗೂ ಮಹಿಳೆಯರನ್ನು ಬೆತ್ತಲೆಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸತ್ತಿನಲ್ಲಿ ಚರ್ಚೆ ಮಾಡಲು ಅವಕಾಶವನ್ನೇ ನೀಡದೇ ಇರುವುದು ದುರಂತಕಾರಿ ಬೆಳವಣಿಗೆ. ದೇಶದ ಪ್ರಧಾನ ಮಂತ್ರಿಗಳು ಕೂಡ ಈ ಬಗ್ಗೆ ಚಕಾರ ಎತ್ತುತ್ತಿಲ್ಲ. ಇದು ಪ್ರಜಾಪ್ರಭುತ್ವದ ದುರ್ದೈವ.
> **ಎಚ್.ಎನ್.ನಾಗಮೋಹನ್‌ದಾಸ್**
> ನಿವೃತ್ತ ನ್ಯಾಯಮೂರ್ತಿ

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕಳಲೆ ಎನ್.ಕೇಶವಮೂರ್ತಿ, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ದಸಂಸ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರೆಗೋಡು, ರಾಜ್ಯ ಸಂಘಟನಾ ಸಂಚಾಲಕ ಎನ್. ವೆಂಕಟೇಶ್, ಜಿಲ್ಲಾ ಸಂಚಾಲಕರಾದ ಬೆಟ್ಟಯ್ಯ ಕೋಟೆ, ಅಲಗೂಡು ಶಿವಕುಮಾರ್, ಉಪವಿಭಾಗೀಯ ಸಂಚಾಲಕ ಮಂಜು ಶಂಕರಪುರ, ಶಂಭುಲಿಂಗಸ್ವಾಮಿ, ನಿಂಗರಾಜು, ಶಿವಬುದ್ಧಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಓಪನ್ಹೈಮರ್ (ಇಂ): ಬೆ.10ಕ್ಕೆ, ಮ.1.35ಕ್ಕೆ, ಸಂ.5.10ಕ್ಕೆ, ರಾ.8.45ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಬಾರ್ಬಿ (ಇಂ): ಬೆ.10.55ಕ್ಕೆ, ರಾ.7.20ಕ್ಕೆ, ಪರಂವಃ (ಕ): ಮ.1.50ಕ್ಕೆ, ದೇವರ ಕನಸ್ಸು (ಕ): ಸಂ.4.45ಕ್ಕೆ, ಹಿಡಿಂಭ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ವಾಲಟ್ಟಿ (ಮ): ಬೆ.11ಕ್ಕೆ, ಕೊಲೈ (ತ): ಮ.1.25ಕ್ಕೆ, ಬೇಬಿ (ತೆ): ಮ.3.55ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.7.15ಕ್ಕೆ, ಅನೀತಿ (ತ): ರಾ.10.05ಕ್ಕೆ.
ಸ್ಕ್ರೀನ್ 4	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.15ಕ್ಕೆ, ಡೇವಿಡ್ (ಕ): ಮ.1.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.
ಸ್ಕ್ರೀನ್ 3	ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.
ಸ್ಕ್ರೀನ್ 4	ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಮಧುರ ಕಾವ್ಯ (ಕ): ಬೆ.10.45ಕ್ಕೆ, ಮಾವೀರನ್ (ತ): ಮ.1.20ಕ್ಕೆ, ರಾ.9ಕ್ಕೆ, ಪರಂವಃ (ಕ): ಸಂ.4.25ಕ್ಕೆ, ದೇವರ ಕನಸು (ಕ): ಸಂ.6.35ಕ್ಕೆ.
ಸ್ಕ್ರೀನ್ 2	ಓಪನ್ಹೈಮರ್ (ಇಂ): ಬೆ.10.15ಕ್ಕೆ, ಮ.1.45ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಮ.1.05ಕ್ಕೆ, ಸಂ.6.25ಕ್ಕೆ, ಬಾರ್ಬಿ (ಇಂ): ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಬಾರ್ಬಿ (ಇಂ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.10ಕ್ಕೆ, ಸಂ.4ಕ್ಕೆ, ರಾ.6.45ಕ್ಕೆ, ವಾಲಟ್ಟಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, **1 ರಾಬರಿ ಕಥೆ** (ಕ): ಸಂ.4.50ಕ್ಕೆ, **ಚೌಕಾಬಾರ** (ಕ): ರಾ.7.50ಕ್ಕೆ, **ಕ್ರಿಷ್ 3** (ಇಂ): ಬೆ.11.35ಕ್ಕೆ, **ತು ಜೂಥಿ ಮೇನ್ ಮಕ್ಕರ್** (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ತು ಜೂಥಿ ಮೇನ್ ಮಕ್ಕರ್** (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, **ತುರಮುಖಂ** (ಮ): ರಾ.10.30ಕ್ಕೆ, **ಅಜಿಲನ್ ಕಿಂಗ್ ಆಫ್ ದಿ ಓಷನ್** (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಸ್ಕ್ರೀಮ್ 6** (ಇಂ): ಮ.2.45ಕ್ಕೆ, ರಾ.7.45ಕ್ಕೆ, **65** (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಬ್ರೋ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಆಚಾರ್ & ಕೋ (ತ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ರಾಖಿ ಔರ್ ರಾಣಿ ಪ್ರೇಂ ಖಹಾನಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಈಡಂಬ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಬ್ರೋ (ತೆ)	4 ಪ್ರದರ್ಶನಗಳು
ಸಂಗಂ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ಲಿಡೋ	
ಕೌಸಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬ್ರೋ (ತೆ)	4 ಪ್ರದರ್ಶನಗಳು
ಪ್ರಭಾ	
ಡಾನ್ ಕುಮಾರ (ಕ)	4 ಪ್ರದರ್ಶನಗಳು

ಚಿಕ್ಕನೇರಳೆ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ




ಬೆಟ್ಟದಪುರ: ಬೆಟ್ಟದಪುರ ಸಮೀಪದ ಚಿಕ್ಕನೇರಳೆ ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾಗಿ ದೇಪೂರು ಗ್ರಾಮದ ರೇಣುಕಾ ಹಾಗೂ ಉಪಾಧ್ಯಕ್ಷರಾಗಿ ಕಿರಣ್ ಆಯ್ಕೆಯಾಗಿದ್ದಾರೆ. ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರೇಣುಕಾ ಒಬ್ಬರೇ ನಾಮಪತ್ರ ಸಲ್ಲಿಸಿದ ಹಿನ್ನಲೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷ ಸ್ಥಾನಕ್ಕೆ ಕಿರಣ್ ಹಾಗೂ ಕುಬೇರ್ ಇಬ್ಬರು ನಾಮಪತ್ರ ಸಲ್ಲಿಸಿದರು. ಒಟ್ಟು 16 ಸದಸ್ಯರ ಪೈಕಿ ಕಿರಣ್ 11 ಮತಗಳನ್ನು ಪಡೆದು ಕಿರಣ್ ಜಯಶೀಲರಾದರು. ಚುನಾವಣಾಧಿಕಾರಿಯಾಗಿ ಹಾರಂಗಿ ಇಲಾಖೆಯ ಎಇಇ ರಂಗಯ್ಯ ಕಾರ್ಯನಿರ್ವಹಿಸಿದರು.

ಕೆ.ನಾರಾಯಣಗೌಡ ನಿಧನ



ಕಂಪಲಾಪುರ: ಗ್ರಾಮದ ನಿವೃತ್ತ ಶಿಕ್ಷಕ ಕೆ.ನಾರಾಯಣ ಗೌಡ(72) ನಿಧನರಾದರು. ಮೃತರು ಪತ್ನಿ, ನಿವೃತ್ತ ಶಿಕ್ಷಕಿ ಟಿ.ಕೆ.ಸರಸ ಹಾಗೂ ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ಅಂತ್ಯಕ್ರಿಯೆಯು ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿಕ್ಕಪ್ಪಾಜಿ



ಪಿರಿಯಾಪಟ್ಟಣ: ತಾಲೂಕಿನ ನಾರಲಾಪುರ ಗ್ರಾಮದ ನಿವೃತ್ತ ಸಾರಿಗೆ ನೌಕರ ಚಿಕ್ಕಪ್ಪಾಜಿ ಅವರು ಇಂದು ಬೆಳಗ್ಗೆ ಹೃದಯಾಘಾತದಿಂದ ನಿಧನ ಹೊಂದಿದ್ದರು. ದಿವಂಗತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗ್ರಾಮದಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ತಮ್ಮಯ್ಯ



ಬೆಟ್ಟದಪುರ: ಬೆಟ್ಟದಪುರ ನಿವಾಸಿ ನೀಲಪ್ಪನ ತಮ್ಮಯ್ಯ(89) ಅವರು ಶನಿವಾರ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು. ದಿವಂಗತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಗ್ರಾಪಂ ಮಾಜಿ ಅಧ್ಯಕ್ಷ ಚನ್ನಕೇಶವ, ಮಾಜಿ ಸದಸ್ಯ ಲಾರಿ ಶಂಕರ್, ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ನಾರಾಯಣ ಮುಂತಾದವರು ಸಂತಾಪ ಸೂಚಿಸಿದ್ದಾರೆ.

6ನೇ ವರ್ಷದ ಸವಿನೆನಪು



ಕೆಂಪಂಕೇಗೌಡ್ರು

ನಿವೃತ್ತ ಸಹಾಯಕ ತೋಟಗಾರಿಕೆ ನಿರ್ದೇಶಕರು, ಮೈಸೂರು ವಿಶ್ವವಿದ್ಯಾಲಯ

DOB:7.4.1952 DOD: 30.7.2017

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದಿದೆ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಹಾಗೂ ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀಮತಿ ಜಯವಾಣಿ, ಮಕ್ಕಳಾದ ಹರ್ಷ, ಹೇಮಂತ್, ಸೊಸೆಯರಾದ ಸ್ವೀಕೃತ, ವಿದ್ಯಾರಾಣಿ, ಮೊಮ್ಮಕ್ಕಳು ಧ್ರುವಿ, ಕಶ್ವಿ, ಜಿಯಾನ್ ಹಾಗೂ ಕುಟುಂಬವರ್ಗದವರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು 19.07.2023 ರಂದು ದೈವಾಧೀನರಾದರು. ತತ್ಸಂಬಂಧ ಉತ್ತರ ಕ್ರಿಯಾದಿ ಕಾರ್ಯವನ್ನು 30.07.2023 ಭಾನುವಾರ ಬೆಳಗ್ಗೆ 11 ಗಂಟೆಗೆ ನಮ್ಮ ಸ್ವಗೃಹ #174, 5ನೇ ಕ್ರಾಸ್, ಹೆಬ್ಬಾಳ್ 1ನೇ ಹಂತ, ಸೂರ್ಯ ಬೇಕರಿ ಹಿಂಭಾಗ, ಮೈಸೂರು ಇಲ್ಲಿ ನಡೆಸಲು ನಿಶ್ಚಯಿಸಿದ್ದೇವೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀನಿವಾಸ, ಅರ್ಜುನ್, ಮಂಜುಳಾ ಮತ್ತು ನಾಗರ್ ಹಾಗೂ ಕುಟುಂಬಸ್ಥರು.

ಶ್ರೀಮತಿ **ಲಕ್ಷ್ಮಿ**



Hi! TAXI

ONLY ONE WAY TAXI CHARGE


MYSORE to BANGALORE
City drop or Pick up

BANGALORE to MYSORE
Airport drop or Pick up

Shakthi Nagar MYSURU

9611177599





ಮುಡಾ ಅನುಮೋದಿತ ಸೈಟುಗಳು ಮಾರಾಟಕ್ಕಿದೆ

ಶ್ರೀನಿಧಿ ಎನ್‌ಕ್ಲೇವ್ ಬೆಳವಾಡಿ, ಮೈಸೂರು

ಬ್ಯಾಂಕ್ ಲೋನ್ ಸೌಲಭ್ಯವಿದೆ.

ಸಂಪೂರ್ಣ ಅಭಿವೃದ್ಧಿ ಹೊಂದಿದೆ । ಮನೆಗಳು ಕಟ್ಟಲ್ಪಟ್ಟಿವೆ

•20x33 | •20x40 | ಕೆಲವೇ ನಿವೇಶನಗಳು ಲಭ್ಯವಿದೆ.

ಶಾಹಿ ಗಾರ್ಮೆಂಟ್ ಹತ್ತಿರ, ಹುಂಡೈ ಕಾರು ಶೋ ರೂಂ ಹಿಂಭಾಗ ಎಕ್ಸೆಲ್ ಪಬ್ಲಿಕ್ ಸ್ಕೂಲ್ ರಸ್ತೆ, ಬೆಳವಾಡಿ, ಮೈಸೂರು. 91484 34989

MONTESSORI / KINDERGARTEN NURSERY TEACHERS TRAINING

SIX MONTHS COURSE, REGUALAR/CORRESPONDENCE

SSLC PASS / PUC / ANY DEGREE, DIPLOMA CERTIFICATE & EXAM BY MHRD NEW DELHI REGISTERED BOARD

100 % JOB ASSURED @ ANY PUBLIC OR PRIVATE SCHOOLS

JNANA GANGOTRI CONVENT

Rajendra Nagara Mysore-570 007. CALL: 9243580672





INDUSTRIAL SHED FOR RENT

10,000 SQFT (62X160)
@ ADAKANAHALLI INDL. AREA
KADAKOLA, MYSURU
Near by Asian Paints & Parle G Factory

- READY TO OCCUPY
- WITH FULL COMPOUND WALL
- WATER & ELECTRICITY SUPPLY

FOR DETAILS & ENQUIRY CALL
+91 92437 81900 / 98446 13407

manipal hospitals LIFE'S ON — ಮಣಿಪಾಲ್ ಆಸ್ಪತ್ರೆ ಮೈಸೂರು

ನಂ. 85–86, ಬೆಂಗಳೂರು–ಮೈಸೂರು ರಿಂಗ್ ರೋಡ್ ಜಂಕ್ಷನ್ ಬನ್ನಿಮಂಟಪ 'ಎ' ಲೇಔಟ್, ಸಿದ್ದಿಕ್‌ನಗರ, ಮಂಡಿ ಮೊಹಲ್ಲಾ, ಮೈಸೂರು, ಕರ್ನಾಟಕ 570015 ಫೋ: 0821-255000

ಹಳೆಯ ವೈದ್ಯಕೀಯ ವರದಿಗಳನ್ನು ನಾಶ ಮಾಡುವುದಕ್ಕೆ ಸಾರ್ವಜನಿಕ ಪ್ರಕಟಣೆ

ಇವರು 1 ಜನವರಿ 2019 ರಿಂದ 31 ಡಿಸೆಂಬರ್ 2019 ವರೆಗಿನ ಒಳ ರೋಗಿಗಳಿಗೆ ಸಂಬಂಧಿಸಿದ (ಎಂ ಎಲ್ ಸಿ ಅಲ್ಲದ ಮತ್ತು ಸಾಮಾನ್ಯ ಫೈಲ್‌ಗಳು) ವೈದ್ಯಕೀಯ ದಾಖಲೆಗಳನ್ನು ನಾಶಗೊಳಿಸಲಾಗುವುದೆಂದು ಈ ಮೂಲಕ ಸೂಚಿಸುತ್ತಿದ್ದಾರೆ. ವೈದ್ಯಕೀಯ ದಾಖಲೆಗಳ ಪ್ರತಿಯನ್ನು ಪಡೆಯಲು ಬಯಸುವ ಯಾವುದೇ ರೋಗಿಗಳು ಅಥವಾ ಅವರ ಕಾನೂನು ಹಕ್ಕುದಾರರು (ರೋಗಿಯ ಲಿಖಿತ ಅನುಮತಿಯಡಿಯಲ್ಲಿ) ಅದಕ್ಕಾಗಿ ಲಿಖಿತ ವಿನಂತಿಯೊಂದಿಗೆ 30 ಆಗಸ್ಟ್ 2023 ರವರಿಗೆ ಅಥವಾ ಅದಕ್ಕೆ ಮೊದಲು ವೈದ್ಯಕೀಯ ಸೇವೆಗಳ ಮುಖ್ಯಸ್ಥರಿಗೆ ಅರ್ಜಿ ಸಲ್ಲಿಸಬಹುದು.

ನಾವು ವೈದ್ಯಕೀಯ ದಾಖಲೆಗಳನ್ನು ಗಣಕೀಕೃತವಾಗಿ/ಎಲೆಕ್ಟ್ರಾನಿಕ್ ಮಾಧ್ಯಮದಲ್ಲೂ ನಿಭಾಯಿಸುತ್ತೇವೆ ಅವುಗಳನ್ನು ಪುನಃ ಪಡೆಯಬಹುದಾಗಿದೆ.

ಧನ್ಯವಾದಗಳೊಂದಿಗೆ ಆಡಳಿತ ಮಂಡಳ, ಮಣಿಪಾಲ್ ಆಸ್ಪತ್ರೆ ಮೈಸೂರು

MYSORE RACE CLUB CHARITABLE TRUST

P.B.NO.11, Race Course Road, Mysore-570 010
Tel: 2521675 | Email : secretary@mysoreraceclub.com

Mysore Race Club (MRC) Eye Hospital

REQUIRES

1. **General Ophthalmologists:** [Full Time / Part Time] [Freshly Graduated MS/DNB/DO Candidates may also be considered]
2. **Pediatric Ophthalmologist:** [Part Time]
3. **Cornea Specialist:** [Part Time] Doctors with fellowship in Cornea & Pediatric ophthalmology from reputed institutions, with surgical experience in SICS and Phacoemulsification preferred.
4. **Optometrist:** Having expertise in various investigative modalities in ophthalmology, such as OCT, HFA, A-Scan, and keratometry.
5. **Camp Coordinator Cum Ambulance Driver :** The incumbent must be capable of coordinating with the organizers for conducting Eye camps and he should have a valid driving license with relevant experience.

Candidates who are interested may submit their detailed resumes, along with their experience and salary expectations, to administrator@mrceyehospital.in within a period of 07 days.

Sd/- Secretary & CEO,
MRC Charitable Trust

30 x 40 CORNER HOUSE FOR SALE

Ground and 1st floor
No. 47/A, 5th main 1st Stage, Brindavan Extn., Mysore. Contact:
6366100472 / 9148830713
9008958301 / 9845764686

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು

ಹುಲ್ಲಹಳ್ಳಿ ರಸ್ತೆ, ನಂಜನಗೂಡು, ಮೈಸೂರು ಜಿಲ್ಲೆ.
ದೂರವಾಣಿ ಸಂ.08221–226309
apmcnanjangud@gmail.com

ಸಂಖ್ಯೆ: ಕೃಉಮಾಸ(ನಂ)/199/2023–24 ದಿನಾಂಕ:24.07.2023

ಪ್ರಕಟಣೆ

ಈ ಮೂಲಕ ಪೇಟೆ ಕಾರ್ಯಕರ್ತರುಗಳಿಗೆ/ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, **ಮೆ// ಆಶಾ ಟ್ರೇಡರ್ಸ್ ಮಾ// ಶ್ರೀ ರಾಮರಾಜು ಬಿ.ಎಲ್ ಕೋಂ ಲೇಟ್ ಲಿಂಗಪ್ಪ, #25, ವಿದ್ಯಾನಗರ, ಕಸಬಾ ಹೋಬಳಿ, ದೇವಿರಮ್ಮನಹಳ್ಳಿ, ನಂಜನಗೂಡು ತಾಲ್ಲೂಕು,** ಇವರಿಗೆ ನಂಜನಗೂಡು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ನಿವೇಶನ ಸಂಖ್ಯೆ 08 (12 * 24 ಮೀ ಅಳತೆ) ಅನ್ನು ಲೀಸ್–ಕಂ–ಸೇಲ್ ಆಧಾರದ ಅನ್ವಯ ಹಂಚಿಕೆಯಾಗಿದ್ದು, ನಿವೇಶನದ ಲೀಸ್–ಕಂ–ಸೇಲ್ 10 ವರ್ಷಗಳ ಅವಧಿ ಪೂರ್ಣಗೊಂಡ ತರುವಾಯ ಕ್ರಯಪತ್ರ ಪಡೆದುಕೊಂಡಿರುತ್ತಾರೆ. ಸದರಿಯವರು ನಿವೇಶನ ಸಂಖ್ಯೆ 08 ರ ನಿವೇಶನ ಸಹಿತ ಕಟ್ಟಡವನ್ನು **ಮೆ// ಪೃಥ್ವಿ ಟ್ರೇಡರ್ಸ್, ಮಾಲೀಕರು, ಶ್ರೀ ರಾಜೇಶ ಬಿ.ಜಿ ಬಿನ್ ಗಣೇಶ್, ವಿದ್ಯಾನಗರ ಬಡಾವಣೆ, #1617, ದೇವಿರಮ್ಮನಹಳ್ಳಿ, ನಂಜನಗೂಡು ತಾಲ್ಲೂಕು** ಇವರಿಗೆ ಮಾರಾಟ ಮಾಡಲು ಅನುಮತಿ ಕೋರಿ, ಮಾರಾಟ ಮಾಡಿದ ನಂತರ ಸಂಸ್ಥೆಯ ಹೆಸರಿನಲ್ಲಿರುವ ಲೈಸನ್ಸ್ ರದ್ದುಪಡಿಸಿಕೊಳ್ಳಲು ಒಪ್ಪಿಗೆ ನೀಡಿರುತ್ತಾರೆ ಹಾಗೂ **ಮೆ// ಪೃಥ್ವಿ ಟ್ರೇಡರ್ಸ್, ಮಾಲೀಕರು, ಶ್ರೀ ರಾಜೇಶ ಬಿ.ಜಿ ಸಂಸ್ಥೆಯ ಮಾಲೀಕರು** ಪ್ರಾಂಗಣದಲ್ಲಿ ವ್ಯಾಪಾರ ವಹಿವಾಟು ಪ್ರಾರಂಭಿಸಿದ್ದು, ಗೋದಾಮಿನ ಅವಶ್ಯಕತೆ ಇರುವುದರಿಂದ ಮೇಲ್ಕಂಡ ನಿವೇಶನ ಸಹಿತ ಕಟ್ಟಡವನ್ನು ಖರೀದಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಪ್ರಯುಕ್ತ, **ಮೆ// ಆಶಾ ಟ್ರೇಡರ್ಸ್ ಮಾ// ಶ್ರೀ ರಾಮರಾಜು ಬಿ.ಎಲ್ ಕೋಂ ಲೇಟ್ ಲಿಂಗಪ್ಪ, #25, ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ವಿದ್ಯಾನಗರ, ದೇವಿರಮ್ಮನಹಳ್ಳಿ, ನಂಜನಗೂಡು** ಇವರಿಗೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹಂಚಿಕೆಯಾಗಿರುವ **ನಿವೇಶನ ಸಂಖ್ಯೆ 08 (12 ಮೀ * 24 ಮೀ ಅಳತೆ ವಿಸ್ತೀರ್ಣ)** ರ ನಿವೇಶನ ಸಹಿತ ಕಟ್ಟಡವನ್ನು **ಮೆ//ಪೃಥ್ವಿ ಟ್ರೇಡರ್ಸ್, ಮಾಲೀಕರು, ಶ್ರೀ ರಾಜೇಶ ಬಿ.ಜಿ ಬಿನ್ ಗಣೇಶ್, ವಿದ್ಯಾನಗರ ಬಡಾವಣೆ, #1617,** ದೇವಿರಮ್ಮನಹಳ್ಳಿ, ನಂಜನಗೂಡು ತಾಲ್ಲೂಕು ಇವರಿಗೆ ಮಾರಾಟ ಮಾಡುವ ಕುರಿತು ಯಾವುದೇ ಆಕ್ಷೇಪಣೆ ಸಲಹೆ ಮತ್ತು ತಕರಾರುಗಳು ಏನಾದರೂ ಇದ್ದಲ್ಲಿ ಅದನ್ನು ಪುಷ್ಠೀಕರಿಸುವ ದಾಖಲಾತಿಗಳೊಂದಿಗೆ ಈ ಪ್ರಕಟಣೆ ದಿನಾಂಕದಿಂದ **15 ದಿನಗಳ** ಒಳಗಾಗಿ ಈ ಕೆಳಗೆ ಸಹಿ ಮಾಡಿರುವವರಿಗೆ ಸಲ್ಲಿಸಬಹುದಾಗಿದೆ. ನಂತರ ಬರುವ ಆಕ್ಷೇಪಣೆ/ದೂರುಗಳನ್ನು ಪರಿಗಣಿಸಲಾಗುವುದಿಲ್ಲ.

: ಷೆಡ್ಯೂಲ್ ಸ್ವತ್ತಿನ ವಿವರ :

ನಂಜನಗೂಡು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ನಿವೇಶನ ಸಂಖ್ಯೆ : 08 ಪೂರ್ವ ಪಶ್ಚಿಮ 24 ಮೀಟರ್ ಉತ್ತರ ದಕ್ಷಿಣ 12 ಮೀಟರ್‌ಗಳುಳ್ಳ ಒಟ್ಟು 288 ಚದರ ಮೀಟರ್ ನಿವೇಶನ ಹಾಗೂ ಅದರಲ್ಲಿರುವ ಕಟ್ಟಡ.

ನಿವೇಶನ ಸಂಖ್ಯೆ: 8 ಕ್ಕೆ ಚೆಕ್ಕುಬಂಧಿ

ಪೂರ್ವಕ್ಕೆ : ಎ.ಪಿ.ಎಂ.ಸಿ ಕಾಂಪೌಂಡ್ ಗೋಡೆ **ಪಶ್ಚಿಮಕ್ಕೆ :** ಎ.ಪಿ.ಎಂ.ಸಿ ರಸ್ತೆ
ಉತ್ತರಕ್ಕೆ : ನಿವೇಶನ ಸಂ–09 **ದಕ್ಷಿಣಕ್ಕೆ :** ನಿವೇಶನ ಸಂ–07

ಸಹಿ/– (ಬಿ.ಮಹೇಶ್)
ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ನಂಜನಗೂಡು

ಸಹಿ/– (ಶಿವಕುಮಾರ್ ಕಾಸನೂರ್)
ಆಡಳಿತಾಧಿಕಾರಿಯವರು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ನಂಜನಗೂಡು



ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ ಶ್ರೀಮತಿ ಪಲ್ಲಮ್ಮ ಅವರ ಮಕ್ಕಳಾದ ಜಿ.ಮಂಜುನಾಥ್ (ಸೂಪರ್‌ಸ್ಟಾರ್) ಭಾಗ್ಯಲಕ್ಷ್ಮಿ, ಹೇಮಂತ್, ಭಾಗ್ಯ, ಮೊಮ್ಮಕ್ಕಳಾದ ರಕ್ಷಿತ್, ಜಯಂತ್, ಮಧುಮಿತ & ಭರತ್, ನಿಖಿತ್, ಪೂಜ, ತನುಜ ಮತ್ತು ಕುಟುಂಬವರ್ಗ

ಯ॥ ಡೈರಿ ಗುರುನಾಥ

44 ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

SITES FOR SALE

LBS Greens Layout

30x40

Attached to KBL Green Wood Layout, Near JSS 2nd Stage Layout & just 1.5 kms from Ring Road.
Land Mark: Sri Sai Baba Temple

Mob: 99001-64989

2 BHK HOME INTERIORS @ ₹2.95 Lacs

ISO 9001:2015 Certified Company Depot

SS BuildMart

TALK TO OUR DESIGN TEAM
9901291267



sagga COFFEE

Farm to Cup Fresh Coffee Powder

Roasting & grinding job work available.
Instant, decoction and filter coffee available for Ho.Re.Ca.

Order Now

BUY 5 KG COFFEE POWDER & GET 1KG SUGAR FREE

Call: 8884434407

ಮೈಸೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, ನೀಸ&ಒಚ (ಪಶ್ಚಿಮ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು,

ಟೆಂಡರ್ ಪ್ರಕಟಣೆ ಸಂಖ್ಯೆ : ಮೈನಪಾ/ಕಾಇಂ/ನೀಸ&ಒಚ(ಪಶ್ಚಿಮ)/ಟಿಎನ್–2/602/2023–24 ದಿನಾಂಕ: 28–07–2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಲೆಕ್ಕ ಶೀರ್ಷಿಕೆಗಳಾದ ನಗರಪಾಲಿಕೆ ಸಾಮಾನ್ಯ ನಿಧಿ ಅನುದಾನ ಮತ್ತು 15ನೇ ಹಣಕಾಸು ಯೋಜನೆಯ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

				ಸಂಜೆ 5:30 ಗಂಟೆ ನಂತರ	ಸಂಜೆ 5:30 ಗಂಟೆ ಒಳಗೆ	ಸಂಜೆ 5:45 ಗಂಟೆಯ ನಂತರ
ಕ್ರ ಸಂ.	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ / ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	Kw-1, Kw-2	27 ಸಂಖ್ಯೆ	242.55	03-08-2023	18-08-2023	19-08-2023
2	Kw-4	1 ಸಂಖ್ಯೆ	340.00	03-08-2023	02-09-2023	04-09-2023
3	Service Tender	5 ಸಂಖ್ಯೆ	143.52	03-08-2023	18-08-2023	19-08-2023
4	Goods Tender	2 ಸಂಖ್ಯೆ	50.00	03-08-2023	18-08-2023	19-08-2023

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಅಥವಾ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದು.

ಸಹಿ/– **ಕಾರ್ಯಪಾಲಕ ಅಭಿಯಂತರರು,** ನೀಸ&ಒಚ(ಪಶ್ಚಿಮ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು